ಪ್ರಕಾಶಕರ ವಂದನೆಗಳೊಡನೆ

ಮಕ್ಕಳ ಮುತ್ತಿನ ಮಾಲೆ

ಪರೀಕ್ಷೆ

ಹೊಯಿಸಳ

ಪ್ರಕಾಶಕರು

ವಾಲಯ

೮

ಮೈಸೂರು

ಮೊದಲನೆಯ ಮುದ್ರಣ ೧೯೪೯

ಪ್ರಕಾಶಕರು :
ಕೂಡಲಿ ಚಿದಂಬರಂ
ಕಾವ್ಯಾಲಯ ಮೈಸೂರು

ಮುದ್ರಕರು :
ಜಿ. ಎಚ್. ರಾಮರಾವ್, ಬಿ.ಎಸ್‌ಸಿ.,
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹ
ಮೈಸೂರು

ವಿವರ

ಪಠಾಕ್ಷಿ

ಬೆಂಕಿಕಡ್ಡಿ ಮನೆಬಿಟ್ಟು ಹೊರಗೆ ಬಂದು ಹಜಾರದಲ್ಲಿ ತಲೆ ನೀಡಿತು; ‘ ಒಳಗೆ ಬಲು ಶೆಖೆ ’ ಎಂದಿತು. ಆ ಕ್ಷಣ ಬಂದಿತು ಅಸಾಧ್ಯ ತಲೆನೋವು. ಸುಗ್ಗಿಯ ಕಾಲದ ಚಂದ್ರನು ನಗುತಲಿದ್ದನು. ನಕ್ಷತ್ರಗಳೆಲ್ಲಾ ಮೋಡಗಳನ್ನು ತೊಳೆದು ಬೆಳ್ಳಗೆ ಮಾಡಿ ರಾಶಿ ರಾಶಿ ಮಾಡುತಲಿದ್ದವು. ಮಂಜಿನ ಗಾಳಿ ಹೊರಗೆ ಬಂದವರನ್ನೆಲ್ಲ ಹಿಡಿಹಿಡಿದು ಮಾತನಾಡಿಸುತಲಿತ್ತು. ಅಂತು ಬೆಂಕಿಕಡ್ಡಿಯ ತಲೆ ಕಾದು ಕಾದು ಹತ್ತಿಕೊಂಡು ಉರಿಯಲಾರಂಭಿಸಿತು. ‘ ಉರೀ, ಉರೀ !! ’ ಎಂತ ಕೂಗಿತು—ಶಿವಮೊಗ್ಗೆ ಊರಲ್ಲಿ !

ಈ ಕೂಗು ಕೇಳಿ ಅದರ ದೊಡ್ಡಣ್ಣ ಊದುಕಡ್ಡಿ ತನ್ನ ಕೊಳವಿಮನೆ ಬಿಟ್ಟು ಮೈಸೂರಿಂದ ಬಂದ. ಕೇಳಿತು ಮೊರೆ: ‘ ಅಯ್ಯೋ ! ಉರಿ ! ಯಾರೂ ಇಲ್ಲವೆ ?’’ ‘ ನಾನಿರುವೆನಲ್ಲ ’ ಎಂದುಕೊಂಡು ಊದುಬತ್ತಿ ಬಾಗುತ, ಬಳುಕುತ ಬಂತು. ‘ ಅಯ್ಯೋ ! ನನ್ನಪ್ಪಾ ! ’ ಎಂದು ತಲೆಗೆ ಮುತ್ತಿಟ್ಟು ಬೆಂಕಿ ಆರಿಸಲು ಹೋಯಿತು. ಆದದ್ದೇನು ? ಏನು ಮಾಡಿದಹಾಗಾಯಿತು ? ಊದುಕಡ್ಡಿಯ ತಲೆಯೂ ಕೂಡ ಹತ್ತಿಕೊಂಡುಬಿಟ್ಟಿತು. ಹೊಗೇ ಹೊಗೇ ಎಲ್ಲೆಲ್ಲೂ ಹೊಗೆ. ಎಲ್ಲೆಲ್ಲೂ ವಾಸನೆ. ಊದಣ್ಣನ ಕಂಪಿನ ಕರೆ ಕೇಳಿ ಗಾಳಿರಾಮ ಓಡಿಬಂದನು. ನಿಂತು ನೋಡಿ, ಈ ಕಂಪಿನ ಸಮಾಚಾರವನ್ನ ಪ್ರಪಂಚಕ್ಕೇ ಹರಡಿಬಿಟ್ಟನು.

ಈ ಹೊತ್ತಿಗೆ ಆಕಾಶವಿಮಾನದಲ್ಲಿ ಬಂದಿಳಿದನು—ಯಾರೂಂತ ? ಪಠಾಕ್ಷಿ. ಅವನು ಬಂದದ್ದು ಚೀನಾದೇಶದಿಂದ.

ಮೊಟ್ಟಮೊದಲು ನಮ್ಮಲ್ಲಿ ಇದ್ದವನು. ಬೌದ್ಧಮತವನ್ನು ಹರಡಲಿಕ್ಕೆ ಅಲ್ಲಿಗೆ ಹೋಗಿದ್ದು, ಈಗಲೀಗ, ಈ ಗದ್ದಲ ಕೇಳಿ ಬಂದನು. ವಿಮಾನ ಇಳಿದು ನೋಡಿದರೆ ಈ ಅವಸ್ಥೆ. ಬೆಂಕಿಕಡ್ಡಿಯು ಇನ್ನೇನು ಉರಿದೇ ಹೋಗಿತ್ತು. ಊದುಬತ್ತಿಯು ಒಳಗೇ ನೋವು ತಿನ್ನುತಲಿತ್ತು. ತಡೆಯಲಾರದೆ ಪಠಾಕ್ಷಿಯು ಇಳಿದು ಬಂದು, ಉದ್ದನೆ ನಾಲಗೆ ನೀಡಿ ಮಾತನಾಡಿಸಲು ಹೋದರೆ—ಏನಾಗಬೇಕು! ಅದರ ನಾಲಗೆ ಸುರಸುರ ಹತ್ತಿಕೊಂಡೇಬಿಟ್ಟಿತು. ಅಸಾಧ್ಯ ಉರಿ ಹೊಟ್ಟೆಯೊಳಕ್ಕೆ ನುಗ್ಗಿದ ಕ್ಷಣವೇ ಪಠಾಕ್ಷಿಯು ಹೊರಹೊರಳಿತು. ಊದಿನಕಡ್ಡಿಯು 'ಏನಾಯಿತು, ಏನಾಯಿತು' ಎನ್ನುವಷ್ಟರಲ್ಲಿ 'ಡಸ್ ಡಬ್ ಪಠಾರ್' ಎಂತ ಆಕಾಶ ಒಡೆಯುವಷ್ಟು ಸದ್ದಾಯಿತು. ಪಠಾಕ್ಷಿ ಹೊಟ್ಟೆಯೊಡೆದು, ಉರಿದು ಸೀದುಹೋಯಿತು. ಆಗಲೋ ಪ್ರಪಂಚವೇ ನಡುಗಿತು. ಸಮುದ್ರ ಅಲ್ಲೋಲಕಲ್ಲೋಲವಾಯಿತು. ಮೇಲಿನಿಂದ ನಕ್ಷತ್ರಗಳೆಲ್ಲ ಇಳಿದು ಬಂದವು. ಎಲ್ಲೆಲ್ಲೂ ಅಸಾಧ್ಯ ಬೆಳಕಾಯಿತು. ಎಲ್ಲರಿಗೂ ಕಣ್ಣು ಕೊಕ್ಕರಿಸಿತು.

ಅತ್ತಲಾಗಿ, ಪಾತಾಳದಲ್ಲಿ ಗದ್ದಲಹತ್ತಿತು. 'ಇದೇನು ದೀಪಾವಳಿ ಬಂದೆಬಿಟ್ಟಿತೆ ಇಷ್ಟು ಬೇಗ' ಎಂದು ಬಲೀಂದ್ರನು, ಹೊರಡಲು ಸಿದ್ಧನಾದನು. ಬಲಿಯು ಭೂಮಿಗೆ ಹೋಗುವನೆಂದು, ಸುದ್ದಿ ಹಬ್ಬಿದಕೂಡಲೆ ಕೇದಗೆ, ಪಾರಿಜಾತ ಮೊದಲಾದ ಹೂಗಳು ಮೊದಲೆದ್ದು ಬಂದುವು. ಆ ರಾತ್ರಿಯಲ್ಲಿ ಆ ಬೆಳಕಿನ ಜತೆಗೆ ಈ ಹೂಗಳ ಪರಿಮಳ. ಬಲಿಯು ಎದ್ದು ಬಂದನು. (ಮಾಲಿಂಗಿ ಮಡುವಿನಿಂದ ಎದ್ದನೆಂದು ಕೆಲವರು ಹೇಳಿದರು.) ಅಂತು ಆ ಗದ್ದಲದ ಜಾಗಕ್ಕೆ ಬಂದನು. ಆ ರಾತ್ರಿ ಈ ಭೂಮಿಗೆ ಎಷ್ಟೋ ಜನ ಹಿಂದಿನ ಹಿರಿಯರೂ ಸಹ ಬಂದರು. ಚುಕ್ಕಿಗಳ ಬೆಳಕು,

ಕುಸುಮಗಳ ಕಂಪು, ಬರುವವರ ಹೆಜ್ಜೆಗಳ ಸದ್ದು.....ಇದೆಲ್ಲಕ್ಕೂ ಕಾರಣ ಯಾರು? ಪಠಾಕ್ಷಿ! ಪಠಾಕ್ಷಿ!

ಬಲೀಂದ್ರನು ನಿಂತು ಎಲ್ಲವನ್ನೂ ನೋಡಿ ಹೀಗೆ ಹೇಳಿದನು. —‘ ನಾನಿದ್ದಾಗ ಇದ್ದ ಸೌಭಾಗ್ಯ ಈಗ ಇಲ್ಲ! ಏನೋ ಭೂಮಿ ಎಂತ ಹೆಸರಿಗೆ ಇದೆ. ಶ್ರೀ ಮಹಾವಿಷ್ಣುವು ಬೇಡವೆಂದಮೇಲೆ, ನಾನು ಹೊರಟುಹೋದೆ. ಪಾತಾಳದಲ್ಲಿ ಇದ್ದರೂ ಕೂಡ, ಈ ಭೂಮಿಯ ವಾಂಛಲ್ಯ ಬಿಡಲಿಲ್ಲ. ವರ್ಷಕ್ಕೆ ಒಂದು ಬಾರಿ ಬರಲೇ ಬೇಕಾಗಿದೆ. ಓಹೋ! ಇನ್ನೇನು ಹೊರಡಲೇಬೇಕು. ಉದ್ದಿನ ಕಾಳು ಉರುಡಿತು.’ ಎಂದು ಬಲೀಂದ್ರನು ಹೊರಡುವಷ್ಟರಲ್ಲಿ, ವಾಮನಾವತಾರಿ ಶ್ರೀಹರಿ ಬಂದೇಬಿಟ್ಟನು. ಗರುಡನ ಬೆನ್ನಿನಿಂದ ಇಳಿದನು. ಪಠಾಕ್ಷಿಯನ್ನ ಕೈಹಿಡಿದೆತ್ತಿದನು. ನೆರೆದಿದ್ದವರಿಗೆ ಹೀಗೆ ಹೇಳಿದನು —‘ ಈತನೇ ನರಕಾಸುರನು. ನನ್ನಿಂದ ಮೊದಲೇ ಕೊಲ್ಲಲ್ಪಟ್ಟಿದ್ದರೂ ಕೂಡ ಬಲೀಂದ್ರ ಬಂದಾಗ್ಗೆ ತಾನೂ ಕೂಡ ಭೂಮಿಗೆ ಬರಬೇಕೆಂದು ವರ ಕೇಳಿಕೊಂಡನು. ಅವನ ಪ್ರಾರ್ಥನೆಯಂತೆ ಅವನನ್ನು ಇಲ್ಲಿಗೆ ವರುಷವರುಷವೂ ಕಳುಹಿಸಿಕೊಡುತ್ತಿದ್ದೇನೆ. ಮತಾಪು, ಸುರಬತ್ತಿ, ಆಕಾಶಬಾಣ ಮೊದಲಾದವರು ಈತನ ಸೈನ್ಯದವರು. ಬಲಿಮಹಾರಾಯ! ನೋಡಿದೆಯ, ನೀನಾಳುತಲಿದ್ದ ರಾಜ್ಯವನ್ನ. ಈ ನರಮಂಡಲದವರು ನಿನ್ನನ್ನು ಮರೆತಿಲ್ಲ. ಬಾ; ಪೂಜೆಪುರಸ್ಕಾರಗಳನ್ನು ಕೈಕೊಂಡು ಹೊರಡೋಣ’ ಹೀಗೆಂದು ಹರಿಯು ಬಲಿಯೊಡನೆ ಧರೆಯನ್ನು ತಿರುಗಿ ಪಾತಾಳಕ್ಕೆ ಇಳಿದನು.

ಪಟಪಠಾರ್ ಎಂತ ಶಬ್ದವಾಯಿತು. ಕಿವಿಯಲ್ಲಿ ಯಾರೋ ಬುರ್ರೋ ಎಂದ ಹಾಗಾಯಿತು. ಶಾಮಿ ದಿಗ್ಗನೆ ಎದ್ದನು. ಖದ್ದರ ಶಾಲನ್ನು ತೆಗೆದೆಸೆದನು. ‘ಯಾರೇ ಅದು! ಶಾರಿಯೇನೆ! ಅಬ್ಬಾ!

ಎಂಥಾ ಕನಸು. ಪಠಾಕ್ಷೀ ಕನಸು' ಎಂದು ಶಾರದೆಯ ಕೈಹಿಡಿದು ಬಾಗಿಲಿಗೆ ಹೊರಟನು. ಹೊರಗಡೆ ಮಬ್ಬು ಮಬ್ಬು, ಇನ್ನೂ ಬೆಳಕೇ ಆಗಿಲ್ಲ. ಆಗಲೇ ಬಾಗಿಲು ಪಕ್ಕಗಳಲ್ಲಿ ಕೆರಕನನ್ನ ಇಟ್ಟಿದಾರೆ. ಬಾಗಿಲಲ್ಲಿ ತೋರಣ. ಶಾರದೆ ಎಂದಳು 'ಶ್ಯಾಮಿಾ! ನೀನೆರಕೊಳೊಲ್ಲವೇನೋ! ನೋಡು ನನಗೆ ಎಷ್ಟೊಂದು ಮತಾಪು, ಪಟಾಕಿ, ಅಪ್ಪ ಕೊಟ್ಟಿದಾನೆ. ಇದೇ ನನ್ನ ಹೊಸ ಲಂಗ. ಹಳದೀ ಖದ್ದರಿಂದೂ....ಅದರಲ್ಲೆಲ್ಲ ಚುಕ್ಕಿ ಚುಕ್ಕಿ'. ಇಷ್ಟುಹೊತ್ತಿಗೇ ಗೌರಾ ಬಂದಳು. 'ಬನ್ನಿ ಬನ್ನೀ ಅಜ್ಜಿ ಕರೀತಾಳೆ. ಎರಕೊಂಡೋರಿಗೆ

ಕೆರಕನ ಸೊಡಲು

ನರಕನ ಪಿಂಡ

ನರಕನ ಪಿಂಡ–ನಿಂಗೇ ಇಲ್ಲ. ನೀಸ್ಯಾಕೆ ಏಳಲಿಲ್ಲ.'

ಶ್ಯಾಮಿ ಎಂದ 'ಊಟಕ್ಕೆ ಮುಂಚೆ....ಎರತಕ್ಕೆ ಹಿಂಚೆ. ಆದರೇನು ನನಗೊಂದು ಕನಸಾಯಿತು. ಅದರಲ್ಲಿ ಪಠಾಕ್ಷಿ, ಬಲೀಂದ್ರ ಅವ ತಾರ ಎಲ್ಲ ಇತ್ತು'. ಗೌರಾ ಕರಗಿಹೋದಳು. 'ಹೇಳೋ೯' ಎಂದು ಅಂಗಲಾಚಿ ಬೇಡಿಕೊಂಡಳು. ಶಾಮಿ ಕಣ್ಣು ಕೊಕ್ಕರಿಸಿ 'ಕೊಡೀ ಮತ್ತೆ ಪಟಾಕಿ, ಮತಾಪೂ,....ನಿಮಗೇನು ಹಚ್ಚೋಕೆ ಬರುತ್ತೆಯೇ ....ಆಹಾ! ಎಂಥಾ ಕನಸು, ಪಠಾಕ್ಷಿ ಕನಸು'.

ಶ್ಯಾಮಿಯು ಆ ಕನಸನ್ನು, ಆ ದಿನ, ಕಂಡಕಂಡವರಿಗೆಲ್ಲ ಹೇಳಿದನು. ಎಲ್ಲರಿಗೂ ಆಗುವುದೇನು ಬಲೀಂದ್ರನ ಕನಸು? ಪಠಾಕ್ಷಿ ಕನಸು?

ಚಿಂತಾಮಣಿ

‘ ಮಣಿ ’ ಎಂದರೆ ಚಿಂತಾಮಣಿ. ‘ ಚಿಂತು ’ ಎಂದರೂ ಅದೇ ಹೆಸರು. ಹಾಗೂ ಕರೆಯುವುದುಂಟು ; ಹೀಗೂ ಕರೆಯುವುದುಂಟು. ಚೆನ್ನಾಗಿದೆಯಲ್ಲವೆ ಆ ಹೆಸರು ! ನಿನಗೇನಾದರು ಆ ಹೆಸರನ್ನು ಇಟ್ಟುಕೊಳ್ಳಬೇಕೆಂದು ಆಸೆ ಆದೀತು ! ಜೋಕೆ !

ಚಿಂತಾಮಣಿ ಎಂದರೆ ಅದೇ ಹುಡುಗ. ಇನ್ನಾರೂ ಅಲ್ಲ.

ಒಳ್ಳೆಯ ಹೆಸರೇನೊ ಇಟ್ಟರು. ಆ ಹೆಸರಿಗೆ ತಕ್ಕಂತೆ ಆತನೂ ಬುದ್ಧಿವಂತ. ಆದರೇನು, ಇಸ್ಕೂಲಿಗೆ ಹೋಗಿ ಕೈಕಟ್ಟಿ ಕುಳಿತು, ಮರಳಕ್ಷರ ತಿದ್ದಿ, ಮೇಸ್ಟರ ಕಣ್ಣಬೆದರಿಕೆಯಲ್ಲಿ ಬೆಳೆಯಬೇಕು. ಆದರೆ ಮಠ ಹತ್ತಿರವಿರಲಿಲ್ಲ. ಯಾರ ಕಣ್ಣ ಬೆದರಿಕೆಯಲ್ಲಿ ಬೆಳೆಯಬೇಕು ?

ಹೀಗೆ ತಂದೆ-ತಾಯಿ ಯೋಚಿಸತೊಡಗಿದರು. ಶುಂಠೀಕೊಂಬಿನ ಶಾಮಣ್ಣಯ್ಯ, ಚುಟಿಗೆ ನಶ್ಯದ ಚನ್ನಪ್ಪಯ್ಯ, ಮೊಂಡಕೋಲು ಮಾಧೂರಾಯ, ಇವರೆಲ್ಲ ಇಸ್ಕೂಲೇನೋ ಇಟ್ಟದ್ದರು. ಆದರೆ ಅವೆಲ್ಲ ಬಲು ದೂರ, ಬಲು ದೂರ. ಅವರೆಲ್ಲ ಸರ್ವಸಿದ್ಧಿ ಲಕ್ಮೇಶ್ವರನ ಪೂಜಾರಕರು. ಅಂಥವರಿಂದ ಕಲಿತು ಆ ದೇಶದವರೆಲ್ಲ ಬುದ್ಧಿವಂತರಾಗಿದ್ದರೆಂದೇ ಹೇಳಬಹುದಾಗಿತ್ತು. ಆದರೆ ಚಿಂತಾಮಣಿ ಅಷ್ಟೊಂದು ದೂರ ಅಂಥವರ ಬಳಿಗೆ ಹೋಗುವಂತೆಯೇ ಇರಲಿಲ್ಲ.

ಹೀಗೆ ಇರುವಾಗ, ಅಲ್ಲಿಗೆ ಒಂದು ಮುದುಕಿ ಬಂತು. ಬಂದೇ ಬಂದದ್ದು—‘ ಇದೇನೇ ಚಿಂತೂ ಅಮ್ಮ ! ನಿನ್ನ ಕುರುಡೇನ, ಅದೇನು, ದಾಂಡಿಗನ್ನ ಮಾಡುತೀಯ ಹೇಗೆ! ನಮ್ಮ ಮನೆಗೆ

ಕಳಿಸು. ಒಂದಿಷ್ಟು ಮಗ್ಗಿ, ಬಾಯಿಪಾಠ ಹೇಳಿಕೊಟ್ಟು, ಮೀನು, ಮಿಗ ಹಿಡಿಯೋದೆಲ್ಲ ಕಲಿಸಿಕೊಟ್ಟೇನು, ಪಾಪ' ಹೀಗೆಂದಳು.

ಮುದುಕಿ ಅಂದರೆ ಮುದುಕಿಯಲ್ಲ ಅದು—ಮಾಟ ಮದ್ದು ಮಾಡುವ ಮುದುಕಿ. ಊರಲ್ಲಿ ಎಲ್ಲ ನಡುಗುತಾರೆ, ಆಕೆಯ ನೆರಳು ಕಂಡರೆ. ಹೀಗಿರುವಾಗ, ಚಿಂತೂ ಅಮ್ಮ ಏನು ಮಾಡು ತಾಳೆ ಪಾಪ,—'ಆಗಲಿ ಕಣ್ರೆ! ಅವರೂ ಬರಲಿ! ಏನಾದರೂ ತರಲಿ ಒಂದಿಷ್ಟು!' ಎನ್ನುವುದರೊಳಗೆ, ಮಾಟದ ಮುದುಕಿ ಹೀಗೆಂದಿತು—'ಒಂದಿಷ್ಟು ಏನಮ್ಮ ಒಂದಿಷ್ಟು—ಹಾಗೇನೂ ಬೇಡ ನೋಡು! ನಾನೆಲ್ಲ ಹಾಗೇನೇ ಕಲಿಸಿಕೊಟ್ಟು ಮನೆಗೆ ಕರೆದು ತಂದು ಬಿಟ್ಟು ಹೋದೇನಂತೆ. ಕಳಿಸಿಬಿಡು, ಪಾಪ, ಮಗು ವ್ಯರ್ಥ ಕಾಲಕಳೆಯುತ್ತಾ ಇದೆ.'

'ಬರುತೀಯ ಚಿಂತಣ್ಣ? ನನಗೆಲ್ಲ ಬರುತ್ತೆ. ಒಬ್ಬಳೇ ಇದ್ದು ಇದ್ದೂ ಎಲ್ಲ ಕಲಿತಿದ್ದೇನೆ:—ಮೀನು ಹಿಡಿಯುವುದು, ಹಕ್ಕಿಗೆ ಬಲೆ ಬೀಸುವುದು, ಮೊಲ ಹಿಡಿಯುವುದು, ಮನೆಕೆಲಸ ಮಾಡುವುದು, ಅಡುಗೆ ಮಾಡುವುದು, ಲೆಕ್ಕ ಮಾಡುವುದು ಮತ್ತು ಲೆಕ್ಕ ಇಡುವುದು. ಆಮೇಲೆ . . .' ಎನ್ನುತ್ತ ಬೆಟ್ಟು ಮಡಿಸುವ ಸಮಯದಲ್ಲಿ ಚಿಂತಾಮಣಿ—'ಮಂತ್ರ ಹಾಕುವುದು....' ಎನ್ನು ವುದರಲ್ಲಿದ್ದ. ಅಷ್ಟರೊಳಗೆ ಚಿಂತೂ ಅಮ್ಮ 'ಬೇಡಪ್ಪ! ಮಂತ್ರ, ಮಾಟ, ಬೇಡ.' ಎಂದು ಬಾಯಿ ಹಾಕಿದಳು. ಆಗ ಮುದುಕಿ 'ಅದೇನೂ ಬೇಡಪ್ಪ ಈಗ ಇಷ್ಟು ಸಾಕು. ದೊಡ್ಡವನಾದಾಗ್ಗೆ ಅದೆಲ್ಲ.' ಎಂದು ಸಮಾಧಾನ ಹೇಳಿದಳು.

ಏನು ಮಾಡಿಯಾಳು ಚಿಂತೂ ಅಮ್ಮ. ಬೇಡಾಂದರೆ ನಷ್ಟ, ಬೇಕೂಂದರೆ ಕಷ್ಟ, ಸುಮ್ಮನಿದ್ದರೆ ಅನಿಷ್ಟ. ಅಂತು ಇಂತು ಅಪ್ಪ

ಅಮ್ಮ ಮನಸ್ಸು ಕಲ್ಲುಮಾಡಿ, ಕಳಿಸಿಬಿಟ್ಟರು ಚಿಂತಾಮಣಿಯನ್ನ.

ಊರ ಹೊರಗೆ ಮಾಟದ ಮುಕ್ಕಿಯ ಮನೆ. ಸ್ವಲ್ಪ ಗೋಡೆ ಬಿದ್ದಿದೆ ಇಲ್ಲಿ. ಅಲ್ಲಿ ಕಿಟಕಿ ಈಚಿಗೆ ಬಂದಿದೆ. ಬಾಗಿಲು ಒಳಗೆ ವಾಲಿದೆ. ಅಡುಗೆಯ ಮನೆಯಲ್ಲಿ ಹುಲ್ಲು ಹುಟ್ಟಿದೆ. ಎಲ್ಲೆಲ್ಲೂ ಜೇಡನ ಪರೆ ಕಟ್ಟಿದೆ. ಗೋಡೆಯ ಮೇಲೆ ಒಂದು ಹಲ್ಲಿ. ಆ ದೊಡ್ಡ ಹಲ್ಲಿ ಸತ್ತಿದೆ. ಅವಕ್ಕೆ ಮೊಳೆ ಹೊಡೆದಿದೆ. ಅದರ ಆ ಕಡೆ ಒಂದು ಕರೀಬೆಕ್ಕಿನ ತಲೆ, ಮತ್ತೆ ಈ ಕಡೆ ಒಂದು ಗೂಬೇ ತಲೆ—ಸಾಕೋ ಇನ್ನೂ ಬೇಕೋ? ಆದರೆ ಇದೊಂದು ಹೇಳಲೇ ಬೇಕು-ಮಿಯಾಂವ್ ಮಿಯಾಂವ್ ಎನ್ನುವ ಮಾಳಬೆಕ್ಕೊಂದು. —ಇನ್ನೂ ಎಲ್ಲೆಲ್ಲೋ ಏನೇನೋ ಇದ್ದವು—ಆದರೆ ಅವಕ್ಕೆ ಮಂತ್ರ ಹಾಕಿ ತಡೆಗಟ್ಟಿದೆ. ಆದ್ದರಿಂದ ಬಾಧೆ ಇಲ್ಲ ಬಿಡು.

ಇತ್ತಲಾಗಿ ಚಿಂತಾಮಣಿಗೆ ಏನಾಯಿತು ನೋಡೋಣ.

ಹುಡುಗ ಚಿಂತಾಮಣಿ ಬಂದ. ಮುದುಕಿಯ ಮನೆಯಲ್ಲಿ ಎಲ್ಲ ಅನುಕೂಲಗಳೂ ಇದ್ದವು. ಮೊಸರು-ನಿಲುವು, ಬೆಣ್ಣೆ-ಡಬ್ಬಿ, ತುಪ್ಪದ ಕಂಚು, ಸಕ್ಕರೆ-ಸೀಸೆ, ಬೆಲ್ಲದ ಗುಡಾಣ, ಹಿಟ್ಟಿನ ಮಡಕೆ, ರೊಟ್ಟೀ-ಬುಟ್ಟೀ, ಕೋಡುಬಳೆಸರ—ಇವೆಲ್ಲ ಇದ್ದವು. ಆದರೆ ಅವಕ್ಕೆಲ್ಲ ಆಸೆಪಡುವ ಹಾಗಿರಲಿಲ್ಲ. ಅವೆಲ್ಲ ನೋಡುವುದಕ್ಕೆ ಮಾತ್ರ; ಮುಟ್ಟಲಿಕ್ಕಿಲ್ಲ, ತಿನ್ನಲಿಕ್ಕಿಲ್ಲ.

ಮಂಚ, ಕುರ್ಚಿ, ಬೆಂಚು, ಮಣೆ. ಎಲ್ಲ ಸರಿ—ಆದರೆ ಅವೆಲ್ಲ ತಾವು ತಾವಾಗಿಯೇ ಮಡಿಚಿ ಬಿಚ್ಚಿ ಸರಿದಾಡುತ್ತಿದ್ದವು. ರುಮಾಲು, ಅಂಗಿ, ಲಂಗ, ಸೀರೆ, ಟೋಪಿ, ಕುಪ್ಪಸ, ಶರಾಯಿ, ಪಂಚೆ, ಕಾಚ, ಕಶೆ, ಕಾಲುಚೀಲ ಇವೆಲ್ಲ ಇದ್ದವು. ಆದರೆ ಯಾರವೋ ಯಾರು ಬಲ್ಲರು?

—ಚಿಂತಾಮಣಿಗೆ ಇವೆಲ್ಲ ಹೇಳಬೇಡ, ಇನ್ನೂ ಹಸುಳೆ,

ಹೆದರಿಕೊಂಡಾನು. ಅವನನ್ನು ಇಲ್ಲಿ ಬಿಟ್ಟು ನೋಡೋಣ ಏನು ಮಾಡುತ್ತಾನೆಂದು.

ಮನೆ ಹಾಗೆ ಇತ್ತಲ್ಲ—ಇನ್ನು ಮುದುಕಿ ಹೇಗೆ, ಹೇಳಲೋ —ಕೇಳು !

ಕೆಲಸ ಬೇಕಾದರೆ ಮಾಡುತ್ತದೆ. ಬೇಡವೋ, ದಿನವೂ ರಾತ್ರಿ ಹಾಗೇ ಕೂತುಬಿಡುತ್ತದೆ. ಈ ಘಳಿಗೆ ಜಾಣೆ, ಇನ್ನೊಂದು ಘಳಿಗೆ ರಾಕ್ಷಸಿ. ಮುದುಕಿ ಬೇಕು, ಆದರೆ ಆಕೆಯ ಸಿಟ್ಟು ಬೇಡ. ಮನೆ ಬೇಕೆಂದರೆ ಅದರ ಪಾಟ ಮಂತ್ರ ಬೇಡ—ಇಂಥಾ ಮನೆಯಲ್ಲಿ ನೀನೇ ಇದ್ದಿದ್ದರೆ? ಹೆದರಿಕೆಯಾಗುತ್ತಿತ್ತೆ ? ಹೋಗಲಿ ಬಿಡು. ಚಿಂತಾಮಣಿ ಏನು ಮಾಡುತ್ತಾನೆ ನೋಡೋಣವೇ ?

—'ಬಾಪ್ಪ ! ಬಾ ಮಗು ! ಬಾ ಚಿಂತು ! ಚಿಂತುಮಣಿ ! ಕೂತುಗೋ ಮೊದಲು, ಆಮೇಲೆ ಕೆಲಸ.' ಎಂದಿತು ಮುದುಕಿ. ಹುಡುಗ ಹೆದರುತ್ತ ಹೆದರುತ್ತ ಮೂಲೆಯಲ್ಲಿ ಕುಳಿತ. ಆದರೆ ಮುದುಕಿ ಹತ್ತಿರ ಕರೆದು, ತಲೆನೇವರಿಸಿ, ಮಾತಾಡಿದಳು. ತಿಂಡಿ ಕೊಟ್ಟಳು. ಊಟ ಹಾಕಿದಳು. ಅಂತು ಇಂತು ಎಲ್ಲಿಗೆ ಬಂತೆಂದರೆ, ಈ ಚಿಂತಾಮಣಿ ಮುದುಕಿಯ ಮನೆಯನ್ನ ಬಿಡದಷ್ಟು ! ಮುದುಕಿಯ ಹೆದರಿಕೆ ಹೋಗುವಷ್ಟು !

ಹೀಗೇ ಕಾಲ ಕಳೆಯಿತು.

ಒಂದು ದಿನ ಮುದುಕಿಗೆ ಸಿಟ್ಟುಬಂದಿತ್ತು. ಅಸಾಧ್ಯ ಕೋಪ, ಉರಿ ಉರಿ ಉಗ್ರ. ಆಗ ಮುದುಕಿ—ಚಿಂತಾಮಣೀ—ಎಂದು ಅರಚಿದಳು. ಮನೆಯೆಲ್ಲ ನಡುಗಿತು. ನಡುಗುತ್ತ ಚಿಂತಾಮಣಿ ಬಂದನು. 'ಹೋಗು ನಡಿ, ನಡೀ ! ಇನ್ನೂ ಇಲ್ಲೇ ಇದ್ದೀಯಾ ?' ಎಂದು ಕಿರಿಚಿದಳು, ಆ ಮಾಟದ ಮುಕ್ಕಿ.

ಚಿಂತಾಮಣಿ :—ಎಲ್ಲಿಗೆ ಹೋಗಲಿ ಅಜ್ಜೀ !

ಮುದುಕಿ :—ಹಸಿವೂ ಹಸಿವು! ಬೇಗ ಹೋಗಿ ಒಂದು ಮೀನನ್ನಾದರೂ ಹಿಡಿದುಕೊಂಡು ಬಾ.

ಚಿಂತಾಮಣಿ :—ಹೇಗೆ? ಎಲ್ಲಿ?

ಮುದುಕಿ :—ತಗೋ ಆ ಗಾಳ! ಆ ಕೋಲು, ಆ ದಾರ. ನಡೀ ಹೊರಡೂ.

ಚಿಂತಾಮಣಿಯು ಚೆಕ್ಕಿನ ಬಾಯಿಂದ ದಾರದ ಉಂಡೆ ಕಿತ್ತುಕೊಂಡು ಹೊರಟುಬಿಟ್ಟ. ಅಲ್ಲಿ ಹೋಗಿ, ಗಾಳಕ್ಕೆ ರೊಟ್ಟಿ ಚುಚ್ಚಿ, ದಾರ ಎಸೆದು, ಕುಳಿತನು. ಆಗ ಒಂದು ಮೀನು—ಬಣ್ಣ ಬಣ್ಣದ್ದು—ಬಂಗಾರದ ರೆಕ್ಕೆಯದು ಸಿಕ್ಕಿಬಿಟ್ಟಿತು. ಅದನ್ನು ತಂದು ಮುದುಕಿಯ ಕೈಗೆ ಕೊಟ್ಟನು. ಮುದುಕಿ ಅದನ್ನು ಮತ್ತೆ ಅವನ ಕೈಲಿಟ್ಟು, ತಪ್ಪಲೆಯ ನೀರಿನಲ್ಲಿ ಮುಳುಗಿಸಿ, ಬೇಯಿಸಿ ತೆಗೆದುಕೊಂಡು ಬಾರೆಂದಳು.

ಚಿಂತಾಮಣಿ ಆ ಮೀನನ್ನು ನೀರಲ್ಲಿ ಹಾಕಿದನು. ತಪ್ಪಲೆಗೆ ಬಿಸಿ ಮುಟ್ಟಿತು. ಆಗ ಮೀನು ಹಾಡಲಾರಂಭಿಸಿತು. ದೂರ ದಲ್ಲೇನೋ ಮರಳುವ ಶಬ್ದ. ಅದೇ ಕ್ರಮೇಣ ಬಿರುಗಾಳಿಯ ಶಬ್ದವಾಯಿತು—ಕಡೆಗೆ ಹಾಡು ಹೇಳುವಂತಿತ್ತು—ಬೇಡಿಕೊಳ್ಳು ವಂತಿತ್ತು.

ಚಿಂತು ಆಲೈಸಿದ—

ಕೆಟ್ಟೆ ಕೆಟ್ಟೆ ಕೆಟ್ಟೇ
ಪುಟ್ಟ ಚಿಂತು ಕೇಳೋ
ಸುಟ್ಟು ಸುಡುತಿದೆಯೋ
ಕೆಟ್ಟಕುದಿ ಬಿಸಿಯೋ!

'ನಾನೇನ ಮಾಡಲಿ ಅದಕ್ಕೆ—ಬೇಯಲಿ ಮೀನು—ಎಂತ ಮುದುಕಿ ಕಟ್ಟಪ್ಪಣೆ ಮಾಡಿದಾಳಲ್ಲ'—ಎಂದು ಕುಳಿತ. ಮತ್ತೆ ಅದೇ, ಮತ್ತೆ ಅದೇ. ಆದರೆ ಈ ಬಾರಿ ಸ್ವಲ್ಪ ಕರುಣೆ ಬಂತು. ಕಾರಣ ಇದು—

ಕೆಟ್ಟೆ ತಮ್ಮ ಕೆಟ್ಟೇ
ಪುಟ್ಟ ತಮ್ಮ ಕೇಳೋ
ಕೆಟ್ಟ ಕುದಿ ಬಿಸಿಯೋ
ಸುಟ್ಟು ಸುಡುತಿದೆಯೋ !

ಇಷ್ಟೇ ಅಲ್ಲ. ಇನ್ನೂ ಇತ್ತು ಆ ಹಾಡು—

ಬಿಡಿಸೆಲೊ ನನ್ನ
ಕೊಡುವೆನು ಹೊನ್ನ
ಬೀಗದ ಕೈಯ್ಯ
ಬಾ ದಮ್ಮಯ್ಯ !

ಈ ಸಾರಿ ಚಿಂತಾಮಣಿಗೆ ಮುದುಕಿಯ ಮೇಲೆ ಸಿಟ್ಟು, ಮೀನಿನ ಮೇಲೆ ಪ್ರೀತಿ ಸಹಾ ಬಂದಿತು.—ಆಗ ಏನು ಮಾಡಿದ...

ತಪ್ಪಲೆಯನ್ನು ಉರುಡಿಸಿಬಿಟ್ಟ. ಟನ್ ಟನ್ ಟನ್ ಠಣಣಣಣಣ, ಎಂದು ಶಬ್ದವಾಯಿತು. ಜರ್ರ್ರೋ ಎಂದು ಬಿಸಿನೀರು ಹರಿದು ಹೋಯಿತು. ಮೀನು ತೇಲಿ ಹೋಯಿತು. ಅಲ್ಲೇ ಕಾಲಬುಡದಲ್ಲಿ ಬಂಗಾರದ್ದು ಬೀಗದ ಕೈ ಬಿದ್ದಿತ್ತು. ಅದನ್ನು ಸರಕ್ಕನೆ ಜೇಬಿನೊಳಗಿಟ್ಟನು. ಅಷ್ಟು ವೇಳೆಗೆ ಮಾಟದ ಮುಕ್ಕಿ ಕೈಬೀಸಿ ಕಾಲುಹಾರಿಸಿ ಬಂದುಬಿಟ್ಟಳು. ಆದರೆ ಅಲ್ಲೇನಿತ್ತು? ಕಣ್ಣಿಗೆ ಕೈಕೊಟ್ಟು ಅಳುತ್ತಿದ್ದಂಥಾ ಚಿಂತು. 'ಉರುಟ ಹೋಯಿತಾ, ಬಿಡು. ಮೀನೂ ಹೋಯಿತೇನು? ಹೋಗಲಿ ಬಿಡು. ಇನ್ನು ಮೇಲೆ ಹುಷಾರಾಗಿರು'—ಹೀಗೆಂದು ಬೆನ್ನು ತಟ್ಟಿ ಹೊರಟು ಹೋದಳು. ಈ ಬಾರಿ ಚಿಂತಾಮಣಿ ಗೆದ್ದು ಕೊಂಡೇಬಿಟ್ಟನು.

ಇನ್ನೊಂದು ದಿನ ಮಾಟದ ಮುಕ್ಕಿಗೆ ರೇಗಿತ್ತು. ದಿನ ವೇನೋ ಚೆನ್ನಾಗಿತ್ತು. ಬಿಸಿಲು ಹಬ್ಬಿತ್ತು, ಬಂಗಾರವಾಗಿ.

ಹೂವೆಲ್ಲ ಅರಳಿದ್ದವು, ಅಲಂಕಾರವಾಗಿ. ಗಾಳಿ ತಣ್ಣಗೆ ಬೀಸುತ್ತಿತ್ತು, ಸಡಗರವಾಗಿ. ಆದರೆ ಮಾಳಬೆಕ್ಕು ರೇಗಿತ್ತು, ಮಾಟದ ಮುದುಕಿ ಮುನಿದಿತ್ತು.

'ಹಸಿವೆ, ಹಸಿವೆ, ಹಸಿವೆ! ಹಾಸಿವೆ! ಹಸೀವೆ! ಹಸಿವೇ' ಅಂತ ಹೊರಳಾಡುತ್ತ ಇದ್ದಳು ಮುದುಕಿ.

'ಮಿಾ ಯಾಂ ವ್! ಮಿ ಯಾಂ ವ್! ಮಿ ಯಾಂ ವೂ! ಮಿಾಯಾಂವ್ರೂ! ಮಿಾಯಾಂವ್ರೂ ಊ ಉ,' ಎಂತ ಕಾಳಬೆಕ್ಕು ಅರಚುತ್ತ ಇತ್ತು.

ಚಿಂತು ಎದ್ದವನೆ ಮುಖ ತೊಳೆದು, ಹಳ್ಳದಲ್ಲಿ ಜಳಕ ಮಾಡಿ, ಅರಳೀ ಮರವನ್ನು ಬಲಗೊಂಡು ಸೂರ್ಯನಿಗೆ ಕೈ ಮುಗಿದು ಬಂದನು. ಹೊಸಿಲು ದಾಟಿದ, ಒಳಗೆ ಬಂದ, ನಡುಮನೆಯಲ್ಲಿ ನಿಂತುಕೊಂಡ. ಆ ವಿಪರೀತವೆಲ್ಲ ನೋಡಿ, ಆ ಮುದುಕಿಗೆ ಹೀಗೆಂದನು—'ಅಜ್ಜಿ! ಏನಾದರೂ ಬೇಯಿಸಲೇನು, ಕುದಿಸಲೇನು, ಕರಿಯಲೇನು, ಹುರಿಯಲೇನು? ಏನು ಬೇಕಜ್ಜೀ?'

ಚಿಂತಣ್ಣನ ಮಾತು ಕೇಳಿ—'ಬಂದೆಯಾ! ಈಗಲೀಗ ಕೇಳಿತೇಪ್ಪ ನನ್ನ ಕೂಗು. ಆ ಬಿಲ್ಲು ತಗೋ, ಆ ಬಾಣ ತಗೊ, ಕೂಗುತಾ ಇದೆಯಲ್ಲ ಆ ಹಕ್ಕಿ ಅದನ್ನ ಹಿಡಿದು, ಕೊಂದು, ತಾರೈಯ್ಯ ಚಿಂತುಮಣಿ,' ಎಂದು ಮುದುಕಿ ಹೇಳಿದಾಗ, ಚಿಂತಾಮಣಿ ಹೇಳಿದನು, 'ಅಯ್ಯೋ ಮುಕ್ಕವ್ವಾ! ಬಾಣದಲ್ಲಿ ಹೊಡೆದೆನೆಂದರೆ ಸಾಯುತ್ತೆ ಅದು. ಮತ್ತೆಲ್ಲಿ ಕೂಗುತ್ತೆ?' ಅದಕ್ಕೆ ಮುದುಕಿಯು ಬೆದರಿಕೆಯಾಗುವ ಹಾಗೆ ನಕ್ಕು 'ಹಾ! ಹೌದು, ಕಂಡೆಯಾ! ಈ ಮಂತ್ರದ ಪಂಜರ ತಗೊ. ದೂರದಲ್ಲಿ ಕೋತಿಮರದ ಬುಡದಲ್ಲಿಡು- ಹಕ್ಕಿ ಬಂದರೆ ಪಂಜರ ಅದೇ ಅದಾಗಿ ಬಾಗಿಲು ತೆರೆಯುತ್ತೆ, ಹಕ್ಕಿ ಒಳಗೆ ಹೋಗುತ್ತೆ. ಆಗ ಬಾಗಿಲು

ಸರಕ್ಕನೆ ಮುಚ್ಚುತ್ತೆ. ಆಗ ನೀನೇನು ಮಾಡುತ್ತೀಯೆ?'

ಚಿಂತು :—ಭರಭರನೆ ತಂದುಕೊಡುತ್ತೇನೆ.

ಮುದುಕಿ :—ಹಾಗಿರಬೇಕು ಚಿಂತೂಮಣೀ.

ಮಾಟದ ಮುದುಕಿ ಹೇಳಿದಂತೆಯೇ ಎಲ್ಲ ಸಾಗಿತು. ಹಕ್ಕಿ ಸಹ ಮನೆಗೆ ಬಂತು, ಮುದುಕಿ ಅದನ್ನ ಕಂಡವಳೇ ಹಿಡಿದು ಮಳಮಳ ಮರಳುವ ಎಣ್ಣೆಯ ಬಾಣಲೆಯಲ್ಲಿ ಹಾಕಿಬಿಟ್ಟಳು.

'ಚಿಂತಾಮಣಿ! ಅದೋ ಆ ಹಕ್ಕಿಯನ್ನು ಹುರಿದು ತಟ್ಟೆಯಲ್ಲಿ ಇಟ್ಟುಕೊಂಡು ಬಾ, ತುಟಿ ಪಿಟಕ್ಕೆನ್ನಬಾರದು. ಏಕೆ, ಏನು, ಎತ್ತ ಎಂದೇನಾದರೂ ಕೇಳೀಯೋ ಹೇಗೆ?' ಎಂದು ದೃಷ್ಟಿಸಿ ನೋಡಿದಳು ಮಾಟಗಾತಿ.

'ಇಲ್ಲ, ಏನೂ ಇಲ್ಲಜ್ಜಿ, ಹುರಿದೇ ತರುತ್ತೇನೆ, ಕರಿದೇ ತರುತ್ತೇನೆ. ನೀನು ನಡಿಯಜ್ಜಿ—' ಹೀಗೆಂದವನು ಬಾಣಲೆಯ ಬಳಿಗೆ ಹೋಗಿ ನಿಂತನು.

ಕಟ್ಟಾಣಿ ಹಕ್ಕಿ, ಪುಟ್ಟಾಣಿ ಪುಟ್ಟಹಕ್ಕಿ, ಕೆಂಪು ಕಣ್ಣು, ನೀಲಿ ತಲೆ, ಹಳದಿ ಕೊಕ್ಕು, ಬಂಗಾರದ ಹೊಟ್ಟೆ, ನಿಂಬೆಹಣ್ಣಿನ ಬೆನ್ನು, ಬಣ್ಣಬಣ್ಣದ ರೆಕ್ಕೆಪುಕ್ಕ—ಇಂಥ ಹಕ್ಕಿ ಮುಳುಗುತ್ತ ಏಳುತ್ತ ಬಾಯಿಬಾಯಿ ಬಿಡುತ್ತಾ ಇತ್ತು. ಚಿಂತಾಮಣಿ ಹಾಗೇ ಕುಳಿತುಬಿಟ್ಟ. ಮನಸ್ಸು ಮರುಗಿತು, ಹೃದಯ ಕೊರಗಿತು. ಕಣ್ಣು ನೀರಾಡಿತು, ಮೈಯೆಲ್ಲ ನಡುಗಿತು, ಆಗಲೀಗ ಒಂದು ದನಿ ಬಂತು. ಆ ದನಿ ದೊಡ್ಡದಾಯಿತು, ಉದ್ದವಾಯಿತು, ಕಡೆಗೆ ಅದೊಂದು ಹಾಡೇ ಆಗಿಬಿಟ್ಟಿತು.

ಕೆಟ್ಟೆ ಕೆಟ್ಟೇ ಕೆಟ್ಟೇ
ಪುಟ್ಟ ಚಿಂತು ಕೇಳೋ
ಸುಟ್ಟು ಸಿಡಿಯುತಿದೆಯೋ
ಕೆಟ್ಟಕುದಿ ಬಿಸಿಯೋ!

ಸುಟ್ಟರೆ ಸುಡಲಿ. ನಾನೇನು ಮಾಡಲಿ. ಶಿಕ್ಷೆ ಆಯಿತು ಆಗಲೆ ಪಿಣಾನು ಬಿಟ್ಟು. ಆದರೂ ಹಾಗೇ ಜೇಬು ಮುಟ್ಟಿ ನೋಡಿದ. ಅದರಲ್ಲಿತ್ತಲ್ಲ-ಆ ಬೀಗದಕೈ-ಅದನ್ನು ಹಾಗೇ ತೆಗೆದು ನೋಡಿ ಅದಕ್ಕೊಂದು ಮುತ್ತುಕೊಟ್ಟು, ಒಳಗಿಟ್ಟುಕೊಂಡನು. ಅದು ಯಾವ ಬೀಗದಕೈ ಹೇಳು?

ಆಗ ಮತ್ತೆ ದನಿ ಜೋರಾಯಿತು, ಬಾಣಲಿಯಿಂದ ಕೇಳಿ ಬಂದಂಥ ಆ ಪದ್ಯ ಕೇಳಪ್ಪ—

ಚಿಂ ಚಿಂ ಚಿಂ ಚಿಂತುಮಣೀ
ಚಿಂ ಚಿಂ ಚಿಂ ಚಿಂತುಮಣೀ
ಚಿಂತೆಯೇಕೊ
ಮುದ್ದುಗಿಣೀ
ಬೆಳ್ಳಿತಾರೆ
ಹಿಡೀ ಬಾ, ಹಿಡೀ ಬಾ!
ನಿನಗೆ ಕೊಡುವೆ
ತಗೋ ಬಾ, ತಗೋ ಬಾ!
ಬಿಡಿಸು ಮರೀ
ಉರೀ ಉರೀ
ಅರೇ ಅರೇ
ಉರೀ ಉರೀ
ಉರೀ ಉರೀ
ಉರೀ ಉರೀ
ಉರೀ ಉರೀ

ಹೀಗೆಂದು ದನಿ ಕುಗ್ಗುತ್ತ ಬಂದಿತು. ತಡೆಯಲಾರದೆ ಹೋದ ಚಿಂತಾಮಣಿ. ಹಲ್ಲುಮುಡಿಕಚ್ಚಿದ. ಮಾಟದ ಮುಕ್ಕಿಯ

ಕಡೆಗೆ ಬೆರಳೆಲ್ಲ ಒತ್ತಿ ಚಟಚಟನೆ ಮುರಿದ. ಮೂಲೆಯಲ್ಲಿದ್ದ ಕೋಲು ಹಾಕಿ ಬಾಣಲಿ ಉರುಡಿಸಿಬಿಟ್ಟ—ಫಸ್ಸೆಂತು, ಧಗ್ಗೆಂತು, ಪಟಪಟ ಎಂತು! ಹಕ್ಕಿ ಹಾರಿಹೋಯಿತು. ಆದರೆ ಕೋಲು ತುದಿಯಲ್ಲಿ ಮಿಣಮಿಣ ಮಿನಗುವ ತಾರಕೆಯೊಂದಿತ್ತು.

ಆ ತಾರೆಯೇ ಬೆಳ್ಳಿಯ ತಾರೆ. ಅದು ಸರಕ್ಕೆಂದು ಅವನ ಜೇಬಿಗೆ ಹಾರಿಹೋಯಿತು. ಅಷ್ಟರಲ್ಲಿಯೇ ಮುದುಕಿ ಓಡಿ ಬಂದಳು.

ಆದರೆ ಅಲ್ಲಿ ಯಾರಿದ್ದರು? ಯಾರೂ ಇಲ್ಲ.

ಚಿಂತಾಮಣಿ ಓಡಿಯೇ ಓಡಿದ. ತನ್ನ ತಾಯಿಯ ಸೆರಗಿನ ಒಳಗೆ ಅವಿತುಕೊಂಡುಬಿಟ್ಟ. ಮಾಟದ ಮುಕ್ಕಿ ಬಂದೇ ಬಂದು ಚಿಂತುವನ್ನು ಅಗಿದೇಹಾಕಿಬಿಡುತ್ತಿದ್ದಳು. ಆದರೆ ಮೀನಿತ್ತಲ್ಲ ಮೀನು! ....

ಆ ಮೀನು ಆ ಬಿಸಿನೀರನ್ನೆಲ್ಲ ಸೇರಿಸಿಕೊಂಡು ಕಾದಿತ್ತು, ಒಂದು ಹಳ್ಳ ಮಾಡಿಕೊಂಡು! ಅಲ್ಲಿಗೆ ಬಂದಳೋ ಇಲ್ಲವೋ ಮುದುಕಿ, ಆಗ ಆಕೆಯ ಕಾಲೆಲ್ಲ ಸುಡು ಸುಡು ಆಯಿತು.

ಆ ಹಕ್ಕಿ ಇತ್ತಲ್ಲ ಅದು, ತನ್ನ ರೆಕ್ಕೆಯನ್ನೆಲ್ಲ ಕೊಡವಿಬಿಟ್ಟಿತು. ಕಾದೆಣ್ಣೆಯೆಲ್ಲ ತಲೆಯ ಮೇಲೆ ಬಿದ್ದು, ಮುದುಕಿ ಸತ್ತೇಹೋಯಿತು........ಹೋಗಲಿ ಬಿಡು.

ಚಿಂತಾಮಣಿಯ ಹತ್ತಿರ ಬೀಗದ ಕೈ ಇತ್ತಲ್ಲವೆ? ಅದು ಯಾವ ಬೀರು ಯಾವ ಪೆಟ್ಟಿಗೆ, ಕಂಡದ್ದು ಕಾಣದ್ದೆಲ್ಲದರ ಬಾಗಿಲು ತೆಗೆಯಿಸಿಬಿಡುತ್ತಿತ್ತು. ಎಲ್ಲೆಲ್ಲಿ ತೆಗೆದು ನೋಡಿದರೂ ವಜ್ರ ವೈಡೂರ್ಯ ಬಂಗಾರ ಬೆಳ್ಳಿ.—

ಇಷ್ಟೇ ಏನು! ಅಲ್ಲ ಅಲ್ಲ—ಆ ನಕ್ಷತ್ರ ಇತ್ತಲ್ಲ—ತಾರಕ್ಕಿ, ಬೆಳ್ಳಿಯ ತಾರೆ! ಅದು ರಾತ್ರಿಯೆಲ್ಲ ಬೆಳಕು ಕೊಡುತ್ತಾ ಇತ್ತು.

ಹಗಲು ಹಸಿವಾದಾಗಲೆಲ್ಲ ಆ ಬೆಳ್ಳಿ ತಾರೆಯನ್ನು ಅವರಮ್ಮ ರಂಗೋಲಿ ಹಾಕಿದ ನೆಲದ ಮೇಲಿಟ್ಟು 'ಚಿಚ್ಛಿಚ್ಛಿಂ' ಎಂದು ಮೂರು ಸಾರಿ ಹೇಳಿ, ಬಟ್ಟೆ ಮುಚ್ಚಿ ತೆಗೆದರೆ ಸಾಕು—ಘಮ ಘಮ ಘಮಾಂತ, ತಿಂಡಿ–ತೀರ್ಥ, ಪಾಯಸ-ಪಳದ್ಯ, ತುಂಬಿ ತುಂಬಿ, ಸುಮ್ಮಸುಮ್ಮನೆ ತುಳುಕಿ ಹೋಗುತ್ತಿದ್ದವು. ಆಗ ಎಲ್ಲರಿಗೂ ಆನಂದ. ಎಲ್ಲರಿಗೂ ಊಟ.

ಚಿಂತು ಅಪ್ಪ—'ಇವನು ಹೀಗಾಗಿ ಬೆಳಿತಾನೇಂತ ನಾ ಕಂಡಿರಲಿಲ್ಲ ಕಣೇ!' ಎನ್ನುವರು.

ಚಿಂತು ಅಮ್ಮ—'ನಮ್ಮ ಚಿಂತಾಮಣಿ! ಭಾಗ್ಯದ ಕಣಿ! ಬಾಪ್ಪ ಒಂದೇ ಒಂದು ಮುತ್ತು ಕೊಡುತ್ತೇನೆ' ಎನ್ನುವರು.

ಆದರೆ ಚಿಂತಾಮಣಿಗೆ ನಾಚಿಕೆ. ಮುತ್ತುಗಿತ್ತು ಅವನಿಗೆ ಸೇರದು. ಇಂಥಾ ರತ್ನದಂಥಾ ಹುಡುಗ ಇನ್ನೊಬ್ಬನು ಯಾವನಾದರೂ ಇದ್ದರೆ, ಅವನಿಗೂ ಸಹ ಚಿಂತಾಮಣಿ, ಚಿಂತಾಮಣಿ ಎಂದು ಹೆಸರಿಡೋಣ.

ಶಂಕರ ಸ್ಕ್ಯಾಟು

ನಿನ್ನೆಯ ದಿನ ರಾತ್ರಿ ಎಂಟರ ಸಮಯಕ್ಕೆ ನಾವೆಲ್ಲರೂ ಊಟಕ್ಕೆ ಕುಳಿತಿದ್ದೆವು. ಶಂಕರ ಸ್ಕ್ಯಾಟು ಆಟಕ್ಕೆ ಹೋಗಿದ್ದವನು ಬಂದನು. ನಾವೆಲ್ಲರೂ ತೊವ್ವೆ ಪಾಯಸ ಎಂದು ಮಾತನಾಡಿಕೊಳ್ಳುತ್ತಲಿದ್ದೆವು. ಆ ಮಾತೆಲ್ಲ ಕೇಳಿ ಶಂಕರನ ಕಣ್ಣೆಲ್ಲ ನಮ್ಮ ಮೇಲೆಯೇ ಇತ್ತು. ಆದರೂ ನಿಧಾನಿಸಿ, ಬಟ್ಟೆಯೆಲ್ಲ ತೆಗೆದು ಟವೆಲ್ಲನ್ನು ಕೈಯಲ್ಲಿ ಹಿಡಿದು 'ಕಾಲಿಗೆ ನೀರು' ಎಂತ ಕೂಗಿದ.

ಗೌರಿ ನೀರು ಕೊಟ್ಟಳು. ಹೊರಗೆ ಕತ್ತಲಾಗಿದ್ದಿತು. ನಮ್ಮ ಪುಟ್ಟ ಸುಬ್ಬು 'ದೀಪ ಬೇಡವೇನೋ? ಕತ್ತಲೆಯಲ್ಲವೆ.' ಎಂದನು. 'ಏನೂ ಬೇಡ. ನಾನು ಈ ಹೊತ್ತು ಕತ್ತಲೆಯಲ್ಲೇ ಬಂದಿದ್ದೇನೆ' ಎಂದು ಶಂಕರ ಕಾಲು ತೊಳೆದು ಬಂದು, ದೇವರ ಕೋಣೆಗೆ ಹೋಗಿ ತನಗೆ ಹೇಳಿಕೊಟ್ಟಿದ್ದ ಸ್ತೋತ್ರವನ್ನು ಹೇಳಿ ನಮಸ್ಕಾರ ಮಾಡಿ ಊಟದ ಮನೆಗೆ ಬಂದು ತನ್ನ ಮಣೆಯ ಮೇಲೆ ಕುಳಿತನು. ನಮಗೆಲ್ಲ ಊಟ ಮುಗಿಯುತಲಿತ್ತು. ಆದರೂ ನಾನು ಕಣ್ಣು-ಸನ್ನೆ ಮಾಡಿ ಎಲ್ಲರನ್ನೂ ಸುಮ್ಮನೆ ಕೂಡಿಸಿದ್ದೆ.

'ನೀವೆಲ್ಲ ಏಳಬಹುದು' ಶಂಕರನೆಂದನು. ಕಮಲಿ ಬಂದ ನಗುವನ್ನು ಕೈಯೊತ್ತಿ ಹಿಡಿದು ನಿಲ್ಲಿಸಿದಳು. ನಾನು ಅವರನ್ನೆಲ್ಲ ದುರುದುರನೆ ನೋಡಿದೆ. ಎಲ್ಲರೂ ಸುಮ್ಮನಾದರು.

ಪಾಯಸ ಬಲು ರುಚಿಯಾಗಿತ್ತು. ಶಂಕರೂಗೆ ಬಡಿಸಿದ ಪಾಯಸವಾದ್ದರಿಂದ ಬಾದಾಮಿ ದ್ರಾಕ್ಷಿಗಳು ಹೆಚ್ಚಾಗಿ ಬಿದ್ದುವು. ಅವನು ಗೌರಿಯ ಮುಖವನ್ನು ನೋಡಿ 'ಇದೇನು ಇಷ್ಟೊಂದು ಹಾಕಿದೆ! ನಿನಗಿನ್ನೂ ಊಟವಾಗಿಲ್ಲವಲ್ಲ' ಎಂದನು. ಗೌರಿಗೂ ತನಗೂ ಕಣ್ಣಲ್ಲಿ ನೀರು ತುಂಬಿಬಂದಿತು.

ಕಮಲಿ ಗಟ್ಟಿಯಾಗಿ ನಕ್ಕಳು.

ಪುಟ್ಟ ಸುಬ್ಬನು 'ಯಾಕೆ ಕಾಮಿ ನಕ್ಕೋದು. ಗೌರಾಂಗೆ ಬೇಡವೇನೆ ಪಾಚ್ಯ' ಎಂದು ಅಬ್ಬರಿಸಿದನು. ಕಮಲಿ ನಕ್ಕದ್ದನ್ನು ನೋಡಿ ಶಂಕರನಿಗೆ ಸ್ವಲ್ಪ ನಾಚಿಕೆಯಾಯಿತು. ಆವರೆ ನಾನು ಮತ್ತು ಗೌರಿ ಏನೂ ಮಾತನಾಡದೆ ಇದ್ದೆವು.

ಊಟ ಮುಗಿಯಿತು.

ಕಮಲಿಯನ್ನು ಕರೆದು 'ಶಂಕರನಿಗೆ ಹಾಸಿಗೆ ಹಾಕಿಕೊಡು; ಸುಬ್ಬನನ್ನು ಮಲಗಿಸಿ ಬಂದು ನನಗೆ ಹೇಳಿ ಹೋಗಿ ನೀನು

ಮಲಗಬೇಕು' ಎಂದು ತಾಕೀತು ಮಾಡಿದೆನು.

ಕಮಲಿ ಬಂದಳು. ಗೌರಿಗೆ ಒಳಗಿನ ಕೆಲಸ ಮುಗಿದಿತ್ತು. ಆಕೆಯೂ ಬಂದಳು. 'ಕಮಲಾ, ನೀನೀ ದಿನ ಊಟಕ್ಕೆ ಕುಳಿತಾಗ್ಗೆ, ಎರಡು ಮೂರು ಬಾರಿ ನಗುವುದರಲ್ಲಿದ್ದೆ, ನಾನು ಕಣ್ಣು ಸನ್ನೆ ಮಾಡಿ ಬೇಡವೆಂದು ಅಡಗಿಸಿದ್ದರೂ ಸಹ, ಕಡೆಗೆ ಗಟ್ಟಿಯಾಗಿ ನಕ್ಕೇಬಿಟ್ಟಿಯಲ್ಲೆ' ಎಂದೆನು. ಅದಕ್ಕೆ ಕಮಲೆ 'ಏನೋಪ್ಪ ಈ ದಿನದಿಂದ ಶಂಕರು ಏನೋ ಒಂದು ಬಗೆಯಾಗಿದ್ದಾನೆ. ಯಾರೋ ವಯಸ್ಸಾದವರು ಮಾತಾಡುವ ಹಾಗೆ ಆಡುತ್ತಾನೆ.' ಎಂದಳು.

'ಸದ್ಗುಣವು ದೊಡ್ಡವರಿಗೇ ಸರಿಯೇನು. ಪುಟ್ಟ ಹುಡುಗಾಟಕೆಯಿಂದ ಒಳ್ಳೆಯ ಗುಣಗಳನ್ನು ಕಲಿಯಬಾರದೇನು? ಹುಡುಗರು ಒಳ್ಳೆಯವರಾಗುವದಕ್ಕೆ ಪ್ರಯತ್ನಪಟ್ಟಾಗ್ಗೆ, ಕಮಲಿಯಂತೆ ನಕ್ಕು ಅವರನ್ನು ಹಿಂದಕ್ಕೆ ತಳ್ಳುವವರು ಬಲು ಮಂದಿ. ಹಾಗೇ ಆಲೋಚಿಸದಲೇ ಮಕ್ಕಳ ಮನಸ್ಸನ್ನು ಕೆಡಿಸುವವರು ಅನೇಕರಿರುವರಲ್ಲವೆ. ಈ ದಿನ ಬೆಳಗ್ಗೆ ನಾನು ಮುಂಚೆ ಎದ್ದು ಶಂಕರನನ್ನು ಎಬ್ಬಿಸಿ, ಅವನು ಈ ದಿನ ಮಾಡಬೇಕಾದ ಕೆಲಸಗಳನ್ನು ಬರೆಸಿಟ್ಟು—ಅದನ್ನೆಲ್ಲ ಒಂದೊಂದಾಗಿ ಮಾಡುವ ಹಾಗೆ ಹೇಳಿಕೊಟ್ಟದ್ದೆ. ನನಗೂ ಗೌರಿಗೂ ಮಾತು ಕೊಟ್ಟು ಅವನು ಈ ದಿನ ಬೆಳಗಿನಿಂದ ಸರಿಯಾಗಿ ಬಂಗಾರದ ಹುಡುಗನಂತೆ ಆಡಿಕೊಂಡು ಬಂದಿದ್ದಾನೆ. ಈ ದಿನ ಕತ್ತಲಿಯಾದರೂ ಸಹ ಒಬ್ಬನೇ ಮನೆಗೆ ಬಂದಿದ್ದಾನೆ. ದಣಿದಿದ್ದರೂ ಕೂಡ ಕಾಲು ತೊಳೆದುಕೊಂಡು ದೇವರ ಪ್ರಾರ್ಥನೆ ಮಾಡಿ ಊಟಕ್ಕೆ ಬಂದಿದ್ದಾನೆ. ನೀವೆಲ್ಲ ಕಾಯುತ್ತ ಕುಳಿತುಕೊಳ್ಳಬೇಡಿರೆಂದು ನಮಗೆಲ್ಲ ಹೇಳಿದನು. ಕಡೆಗೆ ಅಮ್ಮನಿಗೆ ಇಲ್ಲದ ಹಾಗೆ ಪಾಯಸವೆಲ್ಲ ತನ್ನ ಎಲೆಗೆ ಬಿತ್ತಲ್ಲ ಎಂದು ಸಂಕಟ ಪಟ್ಟಿದ್ದಾನೆ. ನೋಡು ಈ ದಿನ

ದಿಂದ ಶಂಕರು ಸದ್ಗುಣಗಳನ್ನು ಕಲಿಯುತ್ತ ಬಂದರೆ ವಯಸ್ಸಾದ ಮೇಲೆ ಅವನು ಎಂಥ ಗೌರವ ಸಂಪಾದನೆ ಮಾಡಿಯಾನು'— ಎಂದು ಹೇಳಿ ' ಶಂಕರನಿಗೆ ನಿದ್ರೆ ಬಾರದಿದ್ದರೆ ನಾವೀಗ ಆಡಿದುದೆಲ್ಲ ಕೇಡಿಗಾದೀತು—ನೋಡಿ ಬಾ ಹೋಗು'-ಎಂದ ಮೇಲೆ ಕಮಲೆ ನೋಡಿ ಬಂದಳು.

' ಎಡದ ಮೊಳಕೈ ಮೇಲೆ ತಲೆ ಇಟ್ಟುಕೊಂಡು, ನಗು-ಮೊಗ ಮಾಡಿಕೊಂಡು ಸುಖವಾಗಿ ಮಲಗಿಕೊಂಡಿದಾನೆ' ಎನ್ನುತ್ತಲೆ ' ನೋಡಿದೆಯ, ಅದೇ ಮತ್ತೆ, ನೀರಿನ ಮೇಲೆ ತಾವರೇ ಹೂವು ತೇಲುವ ಹಾಗೆ ಪುಟ್ಟ ಹುಡುಗರ ಮನಸ್ಸು ನಿದ್ರೆಯಲ್ಲಿ ತೇಲಿ ಹೋಗುವುದು.—ನೀನೀ ದಿನ ನಗದಿದ್ದರೆ, ಅವನನ್ನು ಕರೆದು, ಈ ದಿನ ಏನೇನು ಮಾಡಿದ, ಏನೇನು ಬಿಟ್ಟನೆಂದು ಕೇಳಿ-ಇನ್ನೂ ಹೇಳಬೇಕಾದ್ದನೆಲ್ಲ ಒಂದು ಪುಟ್ಟ ಕಥೆಯಲ್ಲಿ ಸೇರಿಸಿ ಹೇಳಿ ಅವನನ್ನ ಮಲಗಿಸುತಲಿದ್ದೆ' ಎಂದೆನು.

ಕಮಲೆ ' ಪಾಪ ಮಗು ಏನೆಂದುಕೊಂಡಿತೋ ಕಾಣೆ ಅಪ್ಪ. ನನಗೆ ಇನ್ನೂ ಮಗೂ ಒರಟು ಬುದ್ಧಿ !—ಶಂಕರ ಬೆಳೆದ ಮೇಲೆ ತೊಳೆದ ಮುತ್ತಾಗಲಿ. ನಮ್ಮ ಮನೆಯ ನಂದಾದೀಪವಾಗಲಿ:

ಹರಕೆ

ಶಿವರಾಮು ಕರಣಿಕರು ಸಿದ್ಧರಾಜಪುರದ ಯಾತ್ರೆಗೆ ಹೊರಡುವರೆಂದು ಎಲ್ಲೆಲ್ಲೂ ವರ್ತಮಾನ. ತ್ರಯೋದಶಿಯ ಬೆಳಗ್ಗೆ ಸ್ವಾಮಿ ಮೂಡುವ ಮುಂದೆಯೇ ಗಾಡಿಗಳು ಬಂದು ಮನೆಯ ಮುಂದೆ ನಿಂತವು. ಅಕ್ಕ, ಅಕ್ಕನ ಮಕ್ಕಳು, ಮನೆ ತಪ್ಪಿದ ತಂಗಿ, ಅವಳ ಓರಗಿತ್ತಿ ರಾಮುಪುರದ ಹನುಮಪ್ಪಯ್ಯನ ಸೊಸೆ—

ಬಾಸಾ ಚಿಕ್ಕಪ್ಪನ ಮಗಳಲ್ಲವೆ ಆಕೆ —ಅಂತು ಇಂತು ಒಂದಿಪ್ಪತ್ತು ಮಂದಿ ಕೂಡಿದರು. ಆ ದಿನ ಗಂಜಿ ಊಟ, ಅರಳ ಹಿಟ್ಟಿನ ಪಾನಕ, ಹೆಸರು ತಿರುವಿದ ಕಡೆಗು, ಅಕ್ಕಚ್ಚು. ಹೀಗೆಲ್ಲ ಬೇಕೆಂಬು ದನ್ನು ಮಾಡಿಕೊಟ್ಟು—ಕೆಸುವಿನ ಗಡ್ಡೆ ಹುಳಿ, ಬಾಳೆದಿಂಡಿನ ಪಲ್ಲೆಗಳನ್ನು ಮಾಡಿ ಎಲ್ಲರಿಗೂ ಬಡಿಸಿ, ಉಸ್ಸಪ್ಪ ಎಂದು ಕೂರುವ ಹೊತ್ತಿಗೆ ಸೀತಕ್ಕಯ್ಯನಿಗೆ ನಡು ಬಿದ್ದುಹೋಗಿತ್ತು. ಆದರೆ ಇಷ್ಟೊಂದು ಜನ ಬೇಕೆಂದರೆ ಬಂದಾರೇನು? ಏನೋ ಯಾತ್ರೆಯ ನೆಪ. ಮುಖ್ಯ ಮನೆದೇವರಿಗೆ ತೃಪ್ತಿಯಾದರೆ ಸಾಕು.

ಕರಣಿಕರು ಚಿಬ್ಬಲುಗುಡ್ಡೆಯ ಬಳಿ ಹೊಳೆ ದಾಟಿಸುವ ಅಂಬಿಗನಿಗೆ ಹೇಳಿಕಳುಹಿಸಿದರು. ಹೊಲೆಯರ ದೊಡ್ಡನ ಕಡೆ ಯಿಂದ ಅವನಿಗೆ ಏಳೆಂಟು ಚರ್ಮಗಳನ್ನು ಕೊಡಿಸಿ ಭಾರಿಯ ದೊಂದು ಉಕ್ಕಡವನ್ನು ಮಾಡಿಸಿರುವ ಹಾಗೆ ಹೇಳಿದರು. ತದಿ ಗೆಯ ದಿನವೇ ಹೊರಡಬೇಕಾಯ್ತು. ಎಲ್ಲರಿಗೂ ಊಟವಾಗಿ ಸೀತಕ್ಕಯ್ಯ ಊಟಕ್ಕೆ ಕುಳಿತಿದ್ದಾಳೆ. ಆಗ್ಗೆ ಚಿಬ್ಬಲುಗುಡ್ಡೆಯಿಂದ ಜಾನತ್ತೆ ಬಂದೇ ಬಂದು ಗಟ್ಟಿಯಾಗಿ ಅಳಲಾರಂಭಿಸಿದಳು. 'ಈ ಬಡ ಮುಕ್ಕನ್ನ ಕೇಳೋರು ತಾನೆ ಯಾರು? ನೀನೇಂಬೋರಿಲ್ಲ. ಈ ಕೆಟ್ಟ ಕುರುಡೆಯೊಂದು ಎಲ್ಲೆಲ್ಲಿಗೂ ಬೆನ್ನಹತ್ತಿ ಬರಬೇಕು. ಬಿಟ್ಟು ತಾನೆ ಹೆಂಗೆ ಹೋಗಲಿ. ಸೀತೆ ನೀನೂ ಸುದಾ...' ಎಂದು ಕೇಳಿದಷ್ಟೂ ಮಾತಾಡಿಸಿದಷ್ಟೂ ಹೆಚ್ಚು ಹೆಚ್ಚಾಗಿ ಅತ್ತು ಗೋಳಾ ಡಿದಳು. 'ಅಷ್ಟೊಂದು ಜನ ಬರುವಾಗ್ಗೆ ಜಾನತ್ತೆಯೊಬ್ಬಳೇನು ಹೊರೆಯೆ! ಅಲ್ಲೆ ಚಿಬ್ಬಲುಗುಡ್ಡೆಯಲ್ಲೇ ಸೇರಿಕೊಂಡಿದ್ದರಾಗ ದಿತ್ತೆ ನಮ್ಮಪ್ಪ. ಇಷ್ಟು ದೂರ ಬಂದೆಯಾ ಇದಕ್ಕೆ' ಎಂದು ಸೀತವ್ವ ಅವಳಿಗೆ ಕಾಲು ತೊಳೆಯಿಸಿ ಹುಣಿಸೇ ಗೊಜ್ಜು ಕಿವಿಚಿ, ಅರಳ ಹಿಟ್ಟು ಕದರಿ ಕೊಟ್ಟಳು.

ಮೂರು ಸಂಜೆಯ ಹೊತ್ತಿಗೆ ಗಾಡಿಗಳನ್ನೆಲ್ಲ ಕಟ್ಟಿದರು. ಕಾಡು ಹತ್ತಿದ ಕೂಡಲೇ ಹಾದಿಯು ಎಲ್ಲೆಲ್ಲೋ ಹತ್ತಿ ಇಳಿದು ಅಡ್ಡಾದಿಡ್ಡಿಯಾಗಿ ಹೋಯಿತು. ಯಾತ್ರಿಕರ ಮೂಳೆಗಳೆಲ್ಲ ನಜ್ಜುಗುಜ್ಜಾದುವು. ಈ ಕಡೆ ಬಿರಿ ಆ ಕಡೆ ಬಿರಿ, ಮುಂಭಾರ ಹಿಂಭಾರ, ಈ ಎತ್ತಿನ ಕೊರಳು ಬಿಗಿಯಿತು ಆ ಎತ್ತು ಕೊರಕಲಿಗೆ ಬಿತ್ತು—ಹೀಗೆಲ್ಲ ಭಂಡಾಟ ಪಟ್ಟು ಕಂಡೇವೇ ಕಂಡೇವೇ ಎಂದು ಚಿಬ್ಬಲುಗುಡ್ಡೆಯನ್ನು ಕಂಡರು.

ಅಂಬಿಗರ ದೇವ್ರೋಜಿ ದೊಂದಿಗಳನ್ನೆಲ್ಲ ಹಚ್ಚಿ ದೊಡ್ಡ ದೊಡ್ಡವರ ಕೈಲಿಟ್ಟನು. ತದಿಗೆಯ ಚಂದ್ರ ನಡುನೆತ್ತಿಯ ಮೇಲೆ ಜಗಿಜಗಿಸುತ್ತಿದ್ದನು. ತುಂಗೆಗೆ ನಿದ್ರೆಯೋ ಏನೋ ಬಲು ಗಂಭೀರವಾಗಿದ್ದಳು. ಆಚೆಯ ದಡದಲ್ಲಿ ಕೆಲವರು ಕೂಗಾಡುತಲಿದ್ದರು. ಇಲ್ಲೆಲ್ಲೋ ಕೆಲವು ಬಿದುರುಗಳು ಸಿಳ್ಳೆ ಹಾಕುತಲಿದ್ದುವು. ಉಕ್ಕಡ ಬಂದಿತು. ದೇವ್ರೋಜಿ ಉಕ್ಕಡಕ್ಕೆ ಹಣೆ ಮುಟ್ಟಿಸಿ ರಾಮರಕ್ಷೆಯೆಂದು ಅಂಚನ್ನು ಬಗ್ಗಿಸಿ ಹಿಡಿದನು. ಎಲ್ಲರೂ ಹತ್ತಿದರು. ಜಾನತ್ತೆ ಬರುವುದು ತಡವಾಯಿತು. ಅವಳೂ ಹತ್ತಿದಳು.

ಶಿವರಾಮು ಕರಣಿಕರು—'ದೇವ್ರೋಜೀ! ನೀನೇನೊ ಗಂಗೆಯ ಮಗ. ನಮಗೆಲ್ಲ ಗತಿ ಹೇಗಯ್ಯ, ಎತ್ತಲಿಂದ ಬಂತೋ ಚಿತ್ತೀ ಮಳೆ ಎಂತ ಮೊದಲೇ ಅನ್ನುತ್ತಾರೆ—ಪಾರು ಮಾಡಿಸ್ತೀಯ?' ಎಂದರು. ಅಂಬಿಗನು 'ಅಯ್ಯೋ ಬಿಡಿ ನನ್ಧಣಿ! ತುಂಗವ್ವನ ಮಡಲಾಗೇನು ಬಯು' ನೀವೇನ್ನಾರು ಬಯಕೆ-ಗಿಯ್ಕೆ ಮಾಡ್ಕೊಳ್ಳಿ. ನಿಮ್ಮನೆ ಕೌಲಿ ಇದ್ದಾಂಗಲ್ವ ಇದು. ಗಸ್ಸೆಹೊಡಿಯೊಲ್ಲ, ತಿರಗಣೆ ಮೊದಲಿಗೇ ಇಲ್ಲ—ಬಲು ಸಾದು ಹಸ ಇದ್ದಾಗೆ! ಎಲ್ಲ ಕುಂತರೋ-ಯಾರೂ ವಾಲಾಡಬ್ಯಾಡ್ರಿ-'ತುಂಗೆ ನಮ್ಮವ್ವಾ

ನಿನ್ನ ಮಡಲಾಗಿದ್ದೀವಿ—ಎಲ್ಲಾ ರಾಮೂನ್ನಿ' ಎಂತ ಹೇಳ ಹೇಳುತ್ತ ಹುಟ್ಟು ಹಾಕಿ ಗಣೇ ಆಡಿಸಿ-ನಡುಹೊಳೆಗೆ ತಂದು ತುಸು ಹೊತ್ತು ಕೆಳನೀರಿಗೆ ಬಿಟ್ಟನು.

ಇಷ್ಟು ಹೊತ್ತೂ ಮಲಗಿದ್ದ ಜಾನತ್ತೆಯ ಮಗನು 'ಜಾನಿ ಏನೇ ಇದು—ಅಕ್ಕುಡ್ಡೇನೆ— ಅತ್ತೆಲ್ಲೀ ಬಾಯಾರುತ್ತೆಲ್ಲೀ' ಎಂದನು. ಜಾನಿ ಮುಂಗೋಪಿ. 'ಬಿದ್ದುಕೋ ರಂಡೇ ಕುರುಡೆ! ಇಲ್ಲೇ ಎಲೀ ಹಾಕಿಬಿಟ್ಟೇನು! ನೀರಂತೆ ನೀರು! ತುಸ ಪ್ರಾಣ ಬಿಗಿ ಹಿಡಿ! ದಡ ಹತ್ತಿದ ಮೇಲೆ ನೀರಾಗೇ ಮುಳುಕ್ಕೊ ಳ್ಳುವಿಯಂತೆ.' 'ಇದ್ಯಾಕೆ ಜಾನತ್ತೆ,' 'ಏನ್ರೇ ಜಾನಮ್ಮ,' 'ಒಳ್ಳೆ ಚಂದಾಯ್ತು ಜಾನೀ' ಎಂತ ಹೆಂಗಸರೆಲ್ಲ ಛೀಮಾರೀ ಮಾಡಿದ ಮೇಲೆ, ಅಂಬಿಗರ ದೇವ್ರೋಜಿ—' ಬಿಡಿ ನನ್ನವ್ವ ನಡು ನೀರಾಗೆ ಹಾಂಗಂತಾರೇನವ್ವ—ಈ ಕೇಡಿ ಉಕ್ಕಡಕ್ಕೆ ಇನ್ನೂ ಮುರಿ ಕೊಟ್ಟಿಲ್ಲ—ಕೆಟ್ಟ ಕಾಲ ಕೆಟ್ಟ ದಿನ- ಒಳ್ಳಿತ್ತು ಎನ್ನು ನನ್ನವ್ವ' ಎನ್ನುತ್ತ ಹಾಗು ಹೀಗು ಬೇಗ ಬೇಗ ಹುಟ್ಟಾಡಿಸಿ ದಡ ಹತ್ತಿಸಿದನು.

ವಿಜೃಂಭಣೆಯಿಂದ ಸತ್ಯೇಶ್ವರನ ರಥೋತ್ಸವ ನಡೆಯಿತು. ಮಂಡಕ್ಕಿ ಉಂಡೆ, ಸಕ್ಕರೆಕಡ್ಡಿ, ದೇವೀಪ್ರಸಾದ, ಹುಡುಗರಿಗೆ ಆಟದ ಸಾಮಾನು ಮೊದಲಾಗಿ ಎಲ್ಲವನ್ನೂ ತಂದಿದ್ದರು. ಜಾನತ್ತೆ ತನ್ನ ಹುಡುಗನಿಗೆ ಒಂದು ತಾಳದ ಗೊಂಬೆಯನ್ನು ಕೊಂಡು ಕೊಟ್ಟಿದ್ದಳು. ಉಳಿದ ಹುಡುಗರು ತಾಯಿ ತಂದೆಯರ ನಡುವಿನ ಮೇಲೆ ಇದ್ದ ಹಾಗೆಯೇ ರಾಗಮಾಲಿಕೆ ಶಿಲ್ಪಿ, ಕೊಳಲು, ರಬ್ಬರ ಗೊಂಬೆ ಇವುಗಳನ್ನು ಕೂಗಿಸುತ್ತ ಬರುವಾಗ್ಗೆ, ಹೆದರಿ ಹೆದರಿ ಜಾನತ್ತೆಯ ಕಂಕುಳಲ್ಲಿದ್ದ ಹುಡುಗ ಕೂಗಿ ತಾಳ ಹಾಕಿಸುತ್ತ ಬಂದನು. ನದಿ ಸಮೀಪಿಸಿತು. ತುಂಗೆ ಹಾವಿನ ಹಾಗೆ ಬುಸು

ಗುಟ್ಟುತ್ತಲಿದ್ದಳು. ಸೀತಕ್ಕ “ ಏನಿರೆ! ಆ ತೇರು ಅದೇಕೆ ಹಾಗೆ ನಿಂತುಬಿಟ್ಟಿತ್ತು? ತಾಂತ್ರೀಕ, ಪಾಪ, ಒಂದು ಹತ್ತುಸಲ-‘ ಹರಿಕೆ ತಪ್ಪಿದ್ರೆ-ನೆಪ್ಪಿದ್ದರೆ ತರಬೇಕೂ, ಎಂತ ಕೂಗಿದ ” ಎನ್ನುವ ಹೊತ್ತಿಗೆ ಜಾನತ್ತೆ ‘ ಹೌದ್ರೆ ! ಆಮೇಲೆ ಆಗಮೀಕರು ಅನ್ನೋರು ದೇವಸ್ಥಾನದ ಪಾರುಪಾತ್ತೆಗಾರ್ರಿಂದೆ ತಪ್ಪು ಕಾಣಿಕೆ ಕಟ್ಟಿಸಿದರು.’ ಎಂದು ಜಾನತ್ತೆ ಮುಗಿಸುವುದರಲ್ಲಿಯೇ ಮೇಳಿಗೆಯ ನಾಗೂಬಾಯಿ ಸುಮ್ಮನಿರದೆ ‘ ಈಗಿನ ಕಾಲದಲ್ಲಿ ಮಂದಿ ಬಾಯಾಗೆ ಒಳ್ಳೆ ಮಾತುಗಳೇ ಬರೋದಿಲ್ಲ. ಜಾನತ್ತೆ ನೀವಾದರೂ ತಪ್ಪುಕಾಣಿಕೆ ಕೊಡಲೊಂದಿತ್ತು ’ ಎಂದಳು.

ಜಾನತ್ತೆಗೆ ಬಲು ಸಿಟ್ಟು ಬಂದಿತು. ಸಿಡಿಮಿಡಿಗುಟ್ಟಿದಳು. ಇವರಿವರ ಮಾತುಗಳನ್ನು ನಿಲ್ಲಿಸಿ, ಕರಿಣೀಕರು ‘ ಗಂಗೇ ಪೂಜೆ ಮಾಡಿ, ಸಪ್ತಮೀ ಚಂದ್ರನ ಉದಯಕಾಲ. ತುಲಾಮಾಸದಲ್ಲಿ ಎಲ್ಲಾರ ಪಾಪಪುಣ್ಯಗಳನ್ನು ಚಿತ್ರಗುಪ್ತರು ತೂಕ ಮಾಡಿ ನೋಡುತ್ತಾರೆ. ತೆಂಗಿನಕಾಯಿಗಳನ್ನು ಇಲ್ಲಿ ಒಡೆದು ಅರಿಸಿನ ಕುಂಕುಮವನ್ನು ಉಕ್ಕಡಕ್ಕೂ ಏರಿಸಿ ’ ಎನ್ನುತ್ತ ಎಲ್ಲರ ಕೈಯಲ್ಲೂ ಪಾಪಪರಿಹಾರಕ್ಕೆಂದು ಪೂಜೆ ಮಾಡಿಸಿದರು.

ಗಾಳಿ ಎದ್ದೆ ಎದ್ದಿತು. ನಡು ನೀರಿನಲ್ಲಿ ಉಕ್ಕಡ ತಿರುಗಹತ್ತಿತು. ಗರಗರ ತಿರುಗಲು—ಎಲ್ಲರ ತಲೆಗಳೂ ಸುತ್ತಿದವು. ಈ ಸುಳಿ ಎಲ್ಲಿದ್ದೀತು ಎಂದು ಅಂಬಿಗನಿಗೆ ತಿಳಿಯಲಿಲ್ಲ—ಗಣೆಗೆ ನಿಲುವು ಸಿಗಲಿಲ್ಲ. ಸೆಳವು ಹುಟ್ಟಿಗೆ ಅಡವಾಗಲಿಲ್ಲ. ದೇವೋಜಿ ಕೈಜೋಡಿಸಿ ನಿಂತು ‘ ತಾಯಿ ತುಂಗವ್ವ, ಏನಾರೂ ತಪ್ಪಿದ್ದಿತಾ, ಕಾಣಿಕೆ ಕಟ್ಟೀವು ಕಾಣವ್ವಾ, ಈ ನನ್ನಾದೀರೆಲ್ಲ ನಿಂಗೆ ತಾಯೇ ತುಂಗವ್ವ ಅಂತೆ ಅಡವರಿಸಿ ಬಿದ್ದ ರಲ್ಲಾವ್ವ ಮುಡುಪು ಕಟ್ಟೇನಾವ್ವ ’ ಎಂತ ಅಂಗಲಾಚಿ ಕೂಗಿಕೊಂಡವು. ಮುಪ್ಪಿನ ಮುದುಕ

ದೇವೋಜಿಗೆ ಕಣ್ಣಲ್ಲಿ ನೀರು ಬಂತು. ಗಂಟಲು ಕೂತುಹೋಯಿತು. ಕುಳಿತಿದ್ದವರ ಕಡೆಗೆ ತಿರುಗಿ ‘ನನ್ನಾವ್ವ ಸೀತವ್ವ, ‘ಯಾರಾರು ಹರಕೆ ತಪ್ಪಿದ್ದೀರಾ, ಕೊಡಿರೌವ್ವ ಕೊಡೋದಿದ್ರ. ಅಯ್ಯೊ ನನ್ನೊಳೀ! ಇದಾಕಾದ್ರೂ ಹಿಂಗಿದ್ದಾವು. ಧಣೀ ನನ್ನೋವರೆ! ರಾಮುಪ್ಪ ಈಟೊಂದೂ ಜನ ಜವರಾಯನ ಪಾಲಾಗತಾರಲ್ಲ—ಸಾನ್ಯಾಕಾದ್ರೂ ಈ ಬುಟ್ಟಿಗೆ ಮರಿಕೊಡದೆ ತೇಲ್ಕೊಟ್ಟಿದ್ದೇನು’ ಎಂತ ಹಂಬಲಿಸಿ ಹಲುಬಿದನು.

ಶಿವರಾಮು ಕರಣೀಕರು ಮಾತನಾಡಲಿಲ್ಲ. ಸ್ನಾನದ ಪಂಚೆಯನ್ನು ತೆಗೆದು ನಡುವಿಗೆ ಬಿಗಿದು ನದಿಯ ಸೆಳವನ್ನು ನೋಡುತ್ತ ನಿಂತರು. ಹೆಂಗಸರಲ್ಲಿ ಗುಸಗುಸ ಪಿಸುಮಾತು ಹೊರಟಿತು. ಮೇಳಿಗೆಯ ನಾಗೂಬಾಯಿ ಹೀಗೆಂದಳು. ‘ಯಾರಾದರೂ ಏನಾದರೂ ಅಂದಿರಬೌಂದು. ಈ ಜಾಗ ಕೆಟ್ಟದು. ಜಾನವ್ವ ನಿಮ್ಮ ನಾಲಿಗೆ ಅಂಬೋದು ಕೊಂಚ ಮುಂಚೆ ಉಚಾಯಿಸೋದುಉಂಟಲ್ಲ. ನನಗಂತೂ ಮಕ್ಕಳು ಮರಿ ಯಾರೂ ಇಲ್ಲ. ಗಂಗೇಲಿ ಮುಳುಕ್ಕೊಳ್ಳೋದು ತುಂಗೇಲಿ ಆದೀತು— ಈ ಮಂದಿಯೆಲ್ಲ ಸಾಯೋದು ಅಂದರೆ ನನಗೇಕೋ ಬಲು ಸಂಕಟವಾಗುತ್ತೆ. ಏನೇ ಜಾನತ್ತೆ’-ಇಷ್ಟು ಕೇಳುತ್ತಲೆ ಜಾನತ್ತೆಗೆ ಬಲು ರೇಗಿತು. ಅವಳ ಹುಡುಗನು ತೊಡೆಯಮೇಲೆ ಹೊಸಕಾಡಿ ‘ಅತ್ತೆ! ಗೊಂದೆಗೆ ನೀರು ಕುಚ್ಚಲೀ’ ಎಂದು ಕನವರಿಸಿದನು. ಜಾನಮ್ಮಗೆ ಇನ್ನೂ ರೇಗಿತು. ‘ಕೆಟ್ಟ ಕುರುದೆ! ನಿನ್ನಿಂದ ಇಷ್ಟೆಲ್ಲ, ಗೊಂಬೆಗೂ ಕುಡಿಸು, ನೀನೂ ಕುಡಿ’ ಎಂದು ಹೇಳಹೇಳುತ್ತ ಆ ಪುಟ್ಟ ಹುಡುಗನನ್ನು ಕೈಲಿ ಹಿಡಿದು ಎತ್ತಿದಳು. ಉಕ್ಕಡ ಜೋಲಿ ಹೊಡೆಯಿತು—ಹುಡುಗ ಕಸರಿಕೊಂಡು ನೀರಿನಲ್ಲಿ ಬಿದ್ದುಬಿಟ್ಟ. ಸೆಳವಿನಲ್ಲಿ ಸಿಕ್ಕಿ ಗರಗರ ತಿರುಗುತ್ತ ಇದ್ದನು.

ಎಲ್ಲರು ಹಾ ಹಾ ಎಂದು ಕೂಗಿದರು. ಗಾಳಿ ಮತ್ತೊಮ್ಮೆ ಬಲು ಜೋರಾಗಿ ಬೀಸಿತು-ದೊಡ್ಡದೊಂದು ಅಲೆಯೆದ್ದು ಒಂದು ಉಕ್ಕಡದ ಮೇಲುರುಡಿತು. ಅದರೊಂದಿಗೆ ಆ ಪುಟ್ಟ ಹುಡುಗನ ತಾಳದ ಗೊಂಬೆಯೂ ತೇಲಿಬಂದು ಜಾನತ್ತೆಯ ಕಾಲು ಬುಡದಲ್ಲಿ ಬಿದ್ದಿತು. ಜಾನತ್ತೆ 'ಅಯ್ಯೋ' ಎಂದು ಕೂಗಿ ಬಿದ್ದು ಹೊರಳಿದಳು. ಉಕ್ಕಡ ಬಲು ಅಲುಗಾಡಿತು. ದೇವೋಜಿ ಗಣೆಯಿಟ್ಟು ಉಕ್ಕಡವನ್ನು ನಿಲ್ಲಿಸಿದನು. ಗಾಳಿ ನಿಂತೇಹೋಯಿತು. ಸೆಳವೂ ನಿಂತಿತು. ಎಲ್ಲರೂ ಎದ್ದೆದ್ದು ನೋಡಿ 'ಜಾನತ್ತೆಯ ಮಗುವೆಲ್ಲಿ' ಎಂದರು.

ಶಿವರಾಮ ಕರಣಿಕರು ಎದ್ದು ನೀರೊಳಗೆ ಧುಮುಕಿದರು. 'ಈಗ ಬಂದೆ' ಎಂತ ಮಾತ್ರ ಕೆಲವರಿಗೆ ಕೇಳಿಸಿತು. ಬಲು ಹೊತ್ತು ಕಾದರು, ಕರಣಿಕರು ಬರಲಿಲ್ಲ.

ಅಶೋಕವಾಲ

ನಮ್ಮ ರಾಜನ ಮಗನಾದರೊ ಅರಮನೆಯಿಂದ ಹೊರಗಿರುವುದೇ ಹೆಚ್ಚಾಯಿತು. ಬೇಟೆಯ ನೆವ. ಬೇಟೆಯಾಡಿದರೂ ಏನೇನೂ ಇಲ್ಲ; ಹುಲಿಯ ಚರ್ಮವಿಲ್ಲ, ಸಿಂಹದ ಹೆಸರಿಲ್ಲ, ಚಮರಿಯ ಬಾಲವಿಲ್ಲ. ಇದೇನು ಹೀಗೆ ನಿತ್ಯ ನಿತ್ಯ ಬೇಟೆಗೆಂದು ಹೊರಟನು! ವಿಕ್ರಮರಾಯನಿಗೆ ಬಲು ಜಿಗುಪ್ಸೆಯಾ ಯಿತು, ಸಿಟ್ಟು ಬಂದಿತು, ಹೆದರಿಕೆಯಾಯಿತು, ದುಃಖವಾಯಿತು. ಮಕ್ಕಳಿಲ್ಲದೆ ತಪಿಸಿ ಮಗನನ್ನು ಪಡೆದಿದ್ದಾನೆ. ಬದುಕಿಯಾನೆ ಎಂದು ಜಪಿಸಿ ಬದುಕಿಸಿಕೊಂಡಿದ್ದಾನೆ. ಈಗ ಕೈಗೆ ಬರುವ ಕಾಲಕ್ಕೆ ಹೀಗೆ ಹೊರಹೊರಗೇ ಇದ್ದರೆ ಹೇಗೆ ತಾನೆ ಸುಮ್ಮನಿದ್ದಾನು. ಸಹವಾಸ

ವೆಂಥದು ನೋಡೆಂದು ಮಂತ್ರಿಗೆ ಅಪ್ಪಣೆ ಮಾಡಿದನು. ಸಹವಾಸಿಗಳೆಲ್ಲರು ನಗರದಲ್ಲಿ ಇರುವರು. ನನ್ನ ಕುಮಾರನು ಮಾವನ ಮನೆಯಲ್ಲಿರುವನು. ದಳಪತಿಯ ಸುತನು ಪಡುವಲಲ್ಲಿ ಹೋರಾಡುತಲಿರುವನು. ರಾಜಪುರೋಹಿತರ ಮಗನು ಕಾಶಿಯಲ್ಲಿ ಓದುತಲಿರುವನು. ರಾಜಕುಮಾರನೊಬ್ಬನೇ ಬೇಟೆಗೆಂದು ಹೋಗಿ ಬರುತಲಿರುವನು.

ದೂತ—ಪರಾಕು ಮಹಾರಾಜ, ಕುಮಾರರು ಇನ್ನೂ ಬೇಟೆಯಿಂದ ಹಿಂತಿರುಗಿಲ್ಲ.

ರಾಜ—ಎಷ್ಟು ದಿನಗಳಾದವು ನಮ್ಮ ಕುಮಾರರು ಬೇಟೆಗೆ ಹೋಗಿ ?

ದೂತ—ಕುಮಾರರು ಬೇಟೆಗೆ ಹೋಗಿ ನಾಲ್ಕು ದಿನಗಳಾದವು.

ಚಿಕ್ಕವಯಸ್ಸಿನ ರಾಜಕುಮಾರನು ಎಲ್ಲಿಗೆ ಹೋಗಿದ್ದಾನು? ಮುದುಕರಾದ ತಾಯಿತಂದೆಯರ ಹಂಬಲೇ ಬರಬಾರದೇ. ರಾಜಾ ವಿಕ್ರಮ ರಾಯನು ಸಿಟ್ಟಾದನು. ಮಗನು ಒಂಟಿಯಾಗಿ ಕಾಡಿನಲ್ಲಿರುವುದನ್ನು ನೆನೆದು ಹೆದರಿದನು. ನೊಂದನು, ಕಣ್ಣೀರು ಸುರಿಸಿದನು.

ಕೋಳಿ ಕೂಗುವ ಎಡೆಯ ಬಳಿಗೆ ಮಂತ್ರಿಯ ಮಕ್ಕಳೆಲ್ಲರೂ ಹೊರಟರು. ಅಶೋಕವನ ಬಹಳ ದೂರವಿರಲಿಲ್ಲ!-‘ಅಗೋ ಅಲ್ಲಿ ಯಾರೋ ಬಳಲಿ ಒರಗಿರುವರು. ಗಂಡಸೋ ಹೆಂಗಸೋ ನೋಡಿರಿ. ಅವನೇ ರಾಜಕುಮಾರ!’ ಬಲಾತ್ಕಾರವಾಗಿ ಅರಮನೆಗೆ ತರುವ ಹೊತ್ತಿಗೆ ಕುಮಾರನು ಹೊರಳಾಡಿ ಎಚ್ಚತ್ತನು. ‘ ಯಾರಲ್ಲಿ? ಯಾರದು ?—ಬಂದೆಯಾ- ಅಶೋಕ- ಅಶೋಕಮಾಲಾ ’ ಎಂದು ಕೂಗಿದನು. ಕಣ್ಣನೋಟ ಸರಿಯಾಗಿರಲಿಲ್ಲ. ವೈದ್ಯರು ಹೇಳಿದರು: ‘ ಅದು ಹೆಂಗಸಿನ ಹಂಬಲು.’ ರಾಜನು ಡಂಗೂರ ಹೊಡೆಸಿದನು:

'ಅಶೋಕಮಾಲೆ ಯಾರ ಮಗಳು? ಅವಳು ಅರಮನೆಗೆ ಬರಬಹುದು' ಎಂದು. ಯಾರೂ ಬರಲಿಲ್ಲ. ಊರ ಹುಡುಗಿಯರೆಲ್ಲರೂ ದುಃಖಿಸಿದರು.—ಅವರಲ್ಲಿ ಒಬ್ಬರಾದರೂ ಅಶೋಕಮಾಲೆ ಆಗಿರಲಿಲ್ಲ.

ಅರಸುಮಗನು ಆರೋಗ್ಯ ಪಡೆದನು. ಎಂದಿನಂತೆಯೆ ಇದ್ದವನು ನಿನ್ನೆ ಪುನಃ ಕುದುರೆಯನ್ನೇರಿ ಹೊರಟಿದ್ದಾನೆ. ವಿಕ್ರಮರಾಯನು ಕುರುಬನ ವೇಷದಲ್ಲಿ ಹಿಂದೆಯೇ ಹೋದನು. ಅಶೋಕಪುಷ್ಪಗಳು ಎಲ್ಲೆಲ್ಲಿಯೂ ಹಾಸಿವೆ. ಹೂಗಳ ರಸವು ಇಳಿದು ಎಲೆಗಳೆಲ್ಲವು ಥಳಥಳಗುಟ್ಟುತ್ತಲಿವೆ. ಕುಮಾರನು ಕುದುರೆಯನ್ನಿಳಿದು ಒಂದು ಪಕ್ಕಕ್ಕೆ ಓಡಿದನು, ನಿಂತನು, ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ನಡೆದನು.

ಅಲ್ಲೊಂದು ಸೋಗೆಯ ಗುಡಿಸಲು—ಅಶೋಕ ದಳಗಳು ಉದುರಿ ಎಲ್ಲವೂ ಕೆಂಪಾಗಿದ್ದಿತು. ಬಾಗಿಲೊಳಗಿನ ಚಿಗರಿಯು ಮರಿಯನ್ನು ಕರೆಯುತ್ತ ಹತ್ತಿರದಲ್ಲಿದ್ದ ರಾಟೆಯನ್ನು ತಿರುಗಿಸುತ್ತ, ದಾರವನ್ನೆಳೆಯುತ್ತ ಬಾಯಲ್ಲಿ ಏನೋ ಗುನಗುನವೆನ್ನುತ್ತ ಅಲ್ಲಿ ಒಬ್ಬಳೇ ಹುಡುಗಿ ಕುಳಿತಿದ್ದಳು. ರಾಜಕುಮಾರನಿಗೆ ಅಲ್ಲಿ ಏನು ಕೆಲಸ? ಮೆಲ್ಲ ಮೆಲ್ಲಗೆ ಹೋಗುವನೇಕೆ? ಅವಳನ್ನು ಮುಟ್ಟುವನೇ? ಅಗೋ ಅವಳ ಕಣ್ಣು ಮುಚ್ಚಿದನು!

ಕುಮಾರನು ಕಣ್ಣುಮುಚ್ಚಿದನು. ಹುಡುಗಿ ಕೈಗಳೆರಡನ್ನೂ ಸೆಳೆದುಹಿಡಿದು ಹತ್ತಿರವಿದ್ದ ರಾಟೆಯ ದಾರದಿಂದ ಬೆರಳು ಬೆರಳುಗಳನ್ನು ಬಿಡಿಸಿ ದಾರವನ್ನು ಸುತ್ತುತ್ತ 'ಅರಸರೆ' ಅಶೋಕದಳಗಳನ್ನು ನಡುವೆ ಸೇರಿಸಿ ಕಟ್ಟುತ್ತಲಿದ್ದೆನು. ಆದರೆ ನೋಡಿ ಅವು ಇಷ್ಟು ಮೃದುವಾಗಿಯೂ ಇಲ್ಲ—ಇಷ್ಟೊಂದು ಕೆಂಪಾಗಿಯೂ ಇಲ್ಲ. ಮುಂದೆ ಬಂದರೆ ನಾನು ತಮಗಾಗಿ ನೇದಿರುವ ಶಲ್ಯವನ್ನು

ತೋರಿಸುವೆನು. ನಿಮ್ಮ ದಾಸಿಯು ಈ ಗುಡಿಸಿಲೊಳಗಡೆ ನೋಡಿದರೆ—ತಾವು ಈ ವನವನ್ನು ಬಿಟ್ಟು ಎಷ್ಟು ದಿನಗಳಾದುವೆಂದು ತಿಳಿಯುವುದು. ನೀರು ತಂದು ಉಪಚರಿಸುವುದರಲ್ಲಿಯೇ ಓಡಿ ಹೋಗಬಹುದೇ—ತಾವರೆಯ ಎಲೆಗಳು ಯಾವವೂ ಕೈಗೆ ಸಿಗದೆ ನಿಧಾನವಾಯಿತು. ಆ ಬಾಡಿಹೋದ ಮಾಲೆಗಳನ್ನು ಎಣಿಕೆಮಾಡಿ ನೋಡಿರಿ—ನಿನ್ನೆಯ ದಿನದ ಹಾರ ಇನ್ನಿನ್ನೂ ಬಾಡುತಲಿದೆ. ಈ ದಿನದ ಹಾರಕ್ಕೇ ಈಗೀಗ ದಾರವನ್ನು ನೂಲುತಲಿರುವೆನು.' ರಾಜಕುಮಾರನು ಹುಸಿನಗೆ ನಗುತ್ತಿದ್ದನು.

ವಿಕ್ರಮರಾಯನು ರೇಗಿ ಸಿಂಹವಾದನು. ಕಿಡಿಕಿಡಿ ಬೆಂಕಿಯಾದನು. ಅಡವಿಯ ಪಾಲಾಯಿತೆ ಕುಮಾರನ ಪ್ರೇಮ! ವೇದವತಿಯ ವಿದ್ಯೆಯೆಲ್ಲಿ, ಇಂದುಲೇಖೆಯ ಸೌಂದರ್ಯವೆಲ್ಲಿ, ನೀಲಾಲಕಿಯ ಕುಲಶೀಲಂಗಳೆಲ್ಲಿ ಎಂದು ಮರುಗಿ— 'ಕುಮಾರ! ಇದೇನು ಈ ಅಡವಿಯಲ್ಲಿ! ಆ ವಿಕ್ರಮಸಿಂಹನ ಕುಮಾರನೇ ನೀನು? ಹೊರಡು ಮನೆಗೆ! ಶಂಕರಸಿಂಹ ಇವನನ್ನು ಹಿಂಗಟ್ಟೆ ಮುರಿಗಟ್ಟಿ ಪಾಲಕಿಯಲ್ಲಿಡು' ಎಂದು ಅಪ್ಪಣೆ ಮಾಡಿದನು.

ಅಶೋಕಮಾಲೆ ಸಿಟ್ಟಾದಳು.—ಕುಮಾರನನ್ನು ಬಿಗಿದಪ್ಪಿಬಿಡೆನೆಂದಳು. ವನವಲ್ಲಿ ಬಿದ್ದು ಹೊರಳಿದಳು. ಹತ್ತಿರಬಂದು ನಿಂತ ಚಿಗರಿಯನ್ನು ತಬ್ಬಿಕೊಂಡು ಕಣ್ಣೀರಿಟ್ಟಳು. ರಾಜಕುಮಾರನನ್ನು ಅರಮನೆಗೆ ಒಯ್ದರು. ವಿಕ್ರಮಸಿಂಹನಿಗೆ ಮನವಲ್ಲಿ ಕಿಂಚಿತ್ತೂ ಶಾಂತಿಯಿಲ್ಲ. ಕುಮಾರನು ಅಸ್ವಾಸ್ಥ್ಯದಲ್ಲಿದ್ದನು. ಅಶೋಕಮಾಲೆಯಂಥವಲ್ಲದ ರಾಜಕುಮಾರಿಯರು ಹೊರಳಿ ಹೊರಳಿ ತಲೆದಿಂಬುಗಳನ್ನು ನೆನೆಸಿದರು. 'ಈ ವೃದ್ಧನಿಗೇಕೆ ಬುದ್ಧಿಯಿಲ್ಲ. ಈ ಯುವಕನನ್ನು ಆ ಯುವತಿಗೆ ಒಪ್ಪಿಸಬಾರದೇಕೆ?' ಎಂದು ಊರವರೆಲ್ಲ ಕೂಗಿಬಿಟ್ಟರು.

ರಾಣಿ ನಡುನಡುಗುತ ಹಾಸಿಗೆಯ ಬಳಿ ಬಂದು ನಿಂತಳು. ‘ ಕುಮಾರಾ ಏನಿದು ! ನಿನಗೇನಿದು ಹುಚ್ಚು ? ’ ಎಂದು ಕಣ್ಣೀರಿಟ್ಟಳು. ಕುಮಾರನು ಅತ್ತ ಕಡೆಗೆ ತಿರುಗಿ ನಿಟ್ಟುಸಿರು ಬಿಟ್ಟನು.

ನಡುರಾತ್ರಿಯ ಸಮಯ ಯಾವುದೋ ಹಕ್ಕಿ ಉದ್ಯಾನವನದಲ್ಲಿ ‘ ಸಿಕ್ಕಿದರೊ, ಸಿಕ್ಕಿದರೊ, ಸಿಕ್ಕಿದರೋ ’ ಎಂದು ಕೂಗಿತು. ರಾಜನು ಧಿಗ್ಗನೆದ್ದನು. ಉಸಿರಾಲೈಸಿ ನೋಡಿದನು. ಕುಮಾರನು ಉಳಿಯುವ ಹಾಗಿರಲಿಲ್ಲ. ಬೋಯಿಗಳನ್ನು ಬರಹೇಳಿದನು. ಮಂತ್ರಿಯನ್ನು ಕರೆಸಿದನು. ರಾಣಿಯನ್ನು ಹಿಂದಿರಹೇಳಿದನು. ಎಲ್ಲರೂ ಅಶೋಕವನಕ್ಕೆ ಹೊರಟರು. ಬೆಳದಿಂಗಳು ಸೂಸಿತ್ತು—ಪುಟ್ಟ ಪುಟ್ಟ ಝುರಿಗಳು ಅಡ್ಡಾದಿಡ್ಡಿಯಾಗಿ ಓಡಿಯಾಡುತ್ತಲಿದ್ದುವು. ರಾಜನು ಆ ದಿನ ಕಂಡ ಗುಡಿಸಲು ಅಲ್ಲಿ ಇರಲಿಲ್ಲ. ಅದು ಬಿದ್ದುಹೋಗಿದ್ದಿತು. ಪಾಲಕಿಯಿಳಿಸುವುದೆಲ್ಲಿ? ರಾಣಿ ಮುಂದೆ ಬಂದಳು.—‘ ಅಲ್ಲಿ ಎಲ್ಲಿಯೋ ದನಿ ಕೇಳಿಸುತಿದೆ ನಡೆಯಿರಿ.’ ಎಂದು ಮುಂದೆ ಹೊರಟಳು.

ವೃದ್ಧಳೊಬ್ಬಳು ಕಾಡುಹುಡುಗಿಯೊಂದನ್ನು ತೊಡೆಯ ಮೇಲಿಟ್ಟು ಅಳುತ್ತಲಿದ್ದಳು. ‘ ತಾಯಿ, ಯಾವ ರಾಜಕುಮಾರನಿಗಾಗಿ ನೀನು ನರಳುವಿ. ಈ ಗುಹೆಯೆಲ್ಲ ನಿನ್ನೊಂದಿಗೆ ಮರುಗುತಲಿದೆ. ಈ ಚಿಗರಿಯ ಮರಿ ಹುಲ್ಲು ನೀರು ಬಿಟ್ಟು ನಿಂತಿರುವುದು. ಈ ಸಂಕಟವನ್ನು ನೋಡೆಂದು ನನ್ನನ್ನು ದೇವರುಳಿಸಿದನೆ ! ’—ಎನ್ನುವಷ್ಟರಲ್ಲಿ ಪಾಲಕಿಗಳು ಆ ಗವಿಯ ಬಳಿಗೆ ಬಂದಿಳಿದವು.

ಅಶೋಕೆ ಚಟ್ಟನೆದ್ದಳು. ‘ ರಾಜಕುಮಾರ ! ಹೊರಡೋಣ! ಬಂದೆಯಾ ? ಹಾರಗಳೆಲ್ಲವೂ ಒಣಗಿಹೋದುವು. ಈಗೀಗ ಅಶೋಕವೃಕ್ಷಗಳು ಹೂಬಿಡುವುದೂ ಇಲ್ಲ. ಇಷ್ಟು ದಿನಗಳ ಮೇಲಾದರೂ ನೆನಪಾಯಿತಲ್ಲವೆ? ಅಜ್ಜೀ! ವಾದ್ಯಗಳೆಲ್ಲಿ? ಅಜ್ಜೀ,

ಬೇಗರಿಗೆ ಔತಣಮಾಡು!' ಎಂದೆನ್ನುತ್ತ ನಡೆದುಹೋಗಿ ರಾಜ ಕುಮಾರನ ಪಾದಗಳ ಮೇಲೆ ಬಿದ್ದಳು. ಅರಸುಕುಮಾರನು ಒಂದು ಬಾರಿ ಹೊರಳಿದನು. ಎರಡು ಜೀವಗಳೂ ಒಂದಾಗಿ ಹಾರಿಹೋದುವು. ವಿಕ್ರಮರಾಯನು ಕೊರಗಿದನು, ಕರಗಿದನು. ತಾನು ಅರಸನೆಂಬ ಹೆಮ್ಮೆ ಅಳಿಸಿಹೋಯಿತು. ನೆಲದಲ್ಲಿ ಬಿದ್ದು ಹೊರಳಾಡಿದನು.

ಅಶೋಕವೃಕ್ಷದ ಬುಡದಲ್ಲಿ ಎರಡು ವೃಂದಾವನಗಳು ಕಂಡುಬಂದುವು.

ಸೋಬಾನಿ

ಇದು ಸುಳ್ಳಲ್ಲ. ಬರೀ ಕತೆಯಂತೂ ಅಲ್ಲವೇ ಅಲ್ಲ. ಕತ್ತೆಯ ಜೀವನ ಚರಿತ್ರೆ. ನಡೆದ ವಿಚಾರವೇ ಹೌದು. ಇಲ್ಲದೆ ಇದ್ದರೆ ನಮಗೆಲ್ಲಿಯ ಧೈರ್ಯ ಹೇಳಲು! ಆ ಸುಡುಗಾಡು ಕತ್ತೆಗಳು— ಆ ಪ್ರಾಣಿವರ್ಗಕ್ಕೇ ಹೀನಾಯಗಳಾದ ಗಾರ್ದಭಗಳ ವಿಚಾರವೆತ್ತಲು ನಮಗೇನು ಕಾರಣ?

ಅಂತು ಅದು ಕತ್ತೆ. ನಿಮ್ಮ ನೆನಪಿನಲ್ಲಿರುವ ರಂಗಪುರವೇ ಅದು. ಆ ಊರಲ್ಲಿ ಈಗ ರೈಲುಮಾರ್ಗವೂ ಹೋಗಿದೆ. ಅಗಸರ ಸಿಂಗ ಇಸ್ತ್ರಿಪೆಟ್ಟಿಗೆ ಬಿಸಾಟು, ಬಾವುಟ ಕೈಲಿ ಹಿಡಿದ. ಮೈಲಿಗೆ ಬಟ್ಟೆ ಸಾಕಾಯ್ತು, ರೈಲು ಚಾಕರಿ ಬೇಕಾಯ್ತು. ಏನೇನು ಬಿಟ್ಟರೂ, ಒಂದು ಕತ್ತೆ—ಮುದ್ದಾದ ಕತ್ತೆಮರಿ, ಅವನ ಮನ ಸ್ಸಿಗೆ ಅಂಟಿಕೊಂಡೇ ಬಿಟ್ಟಿತ್ತು. ಮುದ್ದಾಗಿ ಸಾಕಿದ್ದ ಅದನ್ನು. ಅದಕ್ಕೆ ಮುತ್ತು ಕೂಡ ಕೊಡುತಲಿದ್ದ ಯಾರೂ ಇಲ್ಲದೆ ಇದ್ದಾಗ. ಸಂಜೇಲಿ ಮುಂಜೇಲಿ, ಅವರಿಬ್ಬರೇ ಇದ್ದರಂತೂ ಬಿಡಿ, ಮಾತಾ

ಡಿದ್ದೇ ಆಡಿದ್ದು. ಒಳಗಿದ್ದೋಳಲ್ಲ ಸಿಂಗನ ಹೆಂಡತಿ, ‘ ಇದಾರ ಸಂಗ ಈಟೊಂದು ಮಾತು, ಇದ್ಯಾವಳೋ ಬಂದಳಲ್ಲ, ನನ್ನ ಮೇಲಿನ ಘೋಡೀಗೆ’ ಎಂದು ಹಿಟ್ಟು ತೊಳಸುತ್ತ, ರೊಟ್ಟಿ ತಟ್ಟುತ್ತ ನೋಡುವಳು. ಕತ್ತೆ ಆಡಿದ್ದು ಕೇಳವೊಲ್ಲದು, ನಿಂಗ ಆಡಿದ್ದು ಕೇಳುತ್ತಿತ್ತು. ಒಂದು ದಿನ ಹೆಂಡತಿ ಸಿಟ್ಟಾದಳು, ಉರಿಯೋ ಕೊಳ್ಳಿಯಾಗಿ, ‘ ಏನೆಲ್ಲಿ ಮಾಡೀರ ನೀವು, ನಾ ಪಿರೀತಿಂದ ಮಾಡಿದ್ದ ರೊಟ್ಟಿ ಅದನ್ನ ಆ ಕಂಗಾಳಿ ಕತ್ತೆಗೆ ಇಟ್ಟೀರಾ. ಮುತ್ತು ಕೊಟ್ಟಿರಾ ಅದಕ್ಕೆ, ಮುಟ್ಟಿಸಿಕೊಂಡೇನೇ ನಿಮ್ಮ ನಾಸು, ಇನ್ನು ’ ಎಂದು ಬೈದಾಡಿದಳು.

ಆದಿನ ಕಳೆದ ಮೇಲೆ, ರಂಗಿ—ಆ ನಿಂಗನ ಮಡದಿ, ಮುಟ್ಟಿಸಿಕೊಂಡಳೊ ಹೇಗೊ, ಅದೆಲ್ಲ ನಮಗೇಕೆ? ಅಂತು ಕತ್ತೆಗೆ ಆನಂದ. ನಿಂಗನ ಪ್ರೀತಿಯ ಕಂದನಾಯ್ತು ಆ ರಾಸಭೆ.

ಹಿಂಗಾಲು ಮುಂಗಾಲು ಕಟ್ಟುವರಾರು ಅದಕ್ಕೆ? ಅದು ಯಾವಾಗಲೂ ಅವನ ಸಂಗಡವೇ ಇರುವುದು. ರಾತ್ರಿಯೆಲ್ಲ ಬೆಚ್ಚಗೆ ಮನೆಯ ಒಳಗೇ ಮಲಗುತಲಿತ್ತು. ಅದಕ್ಕೆ ಏನೆಂದು ಹೆಸರು ಇಡಬೇಕು ತಿಳಿಯದಾಯ್ತು.

ಒಂದುದಿನ ಅದನ್ನು ಕಂಡುಕೊಂಡ. ಊಟ ಮಾಡಿ ಉರುಫ್, ಅಂದರೆ ಮುದ್ದೆ ನುಂಗಿ—ತಂಬಾಕು ತಿನ್ನುತ್ತ ನಿಂಗ ಕುಳಿತಿದ್ದ. ಲೋಕಲ ಗಾಡಿ ಬರುವ ಸಮಯ. ಆ ಹೊತ್ತಿಗೆ, ಆ ಕತ್ತೆ ಆ ಕಡೆಯಿಂದ, ಹಿತ್ತಿಲ ಬಾಗಿಲಿಗೆ ಕೂಗಿಕೊಂಡು ಹೋಯಿತು. ಯಾಕೆ, ಏನು, ಎಂತ ಆಲೈಸಿದ. ಅದರ ಹತ್ತಿರ ರಂಗಿ ಮಾತನಾಡುತ ಇದ್ದಳು. ಅವಳ ಅಂಗೈಲಿದ್ದ ಈರುಳ್ಳಿ ಬೆಲ್ಲ ತಿನ್ನುತಲಿತ್ತು ಆ ಕತ್ತೆ. ಆಶ್ಚರ್ಯವಾಯಿತು. ಹಿಂದು ಗಡೆಯಿಂದ ಹೋದ. ತಮಾಷೆಗೆ ಗದ್ದರಿಸಿದ. ಹೆದರಿ ತಿರುಗಿ

ದಳು ರಂಗಿ, 'ಏನೇ ಯಾರ ಹತ್ತಿರವೇ ಮಾತು? ಓಡಿಸಿಬಿಟ್ಟೇನು ಅಡಿಗೇಮನೆ ಬಿಡಿಸಿ!' ಅವಳೇಕೆ ಹೆದರ್ಯಾಳು, 'ಓಟೇ ಹೋಯ್ತು, ಮರ್ರ್ಸೋಯ್ತು, ಮಸೀ ಮಡಿಕೇಲಿ ಬಾನ ಬಸಿಯೋದೆ ತಪ್ಪಿತು, ನಾನು ನಿಮ್ಮ ಸೋಬಾನಿ ಸಂಗಾತೀಲಿ, ನಿಮ್ಮ ಸೋಭಾನೆ ಕೇಳಿಕೊಂಡು ಇರತೀನಿ. ನೀವು ಬಾವುಟ ಬೀಸುವಾಗೆಲ್ಲ, ನಿಮ್ಮ ಜೊತೇಲೇ ಇರತೀನಿ. ರೈಲು ಬರೋದು ತಡ ಆದ್ರೆ ಈ ಬಾಳು ಮುಸುಡಿ ಅಪ್ಪಿಗೊಂಡು ಕೂತಿರುತೀರಲ್ಲ! ಬಾವುಟ ಬಲಗೈಲಿ, ಇದರ ಕಿವಿ ಸಂದೀಲಿ ಎಡಗೈ, ಆ ಮರಗೈ ಬಗ್ಗಿಸಿಕೊಂಡು, ಕಂಬದ ಹಾಗೆ ನಿಂತಿರಾಣ, ಟೇಷನ್‌ದಾಗೆ ಮಾಸ್ತಾರ್ರು ನೋಡತಾ ಇರೋಣ! ನನ್ಯಾಕೆ ಮದಿವ್ಯಾದ್ರೂ? ನಮ್ಮನೇವ್ರು ನನ್ನ ಒಂದು ಕತ್ತೆಗಾದ್ರು ಕೊಟ್ಟು ಮದಿವೆ ಮಾಡ್ಲಿಲ್ಲ' ಹೀಗೆ ಹೀಯಾಳಿಸಿದಳು.

ನಿಂಗನ ಮನಸ್ಸು ಎಲ್ಲೋ ಏನೋ, "ಅದಿರಲೆ, ಮುಚ್ಚಂಜೆ ದೀಪ ಹತ್ತಿಸಿದಾಗ ಹೇಳೂವಿ. ಈಗ ಬೊಗಳೆ, ಅದೇನಂತ ಕರೀತಿ ಈ ಕತ್ತೆಯ ಮರಿಯು?" ಈ ಮಾತು ಕೇಳಿ ರಂಗೀಗೆ ಹೇಗಾಗಿದ್ದೀತು? ಹೇಳಿದಳು—'ನಿಂದು ಈ ಕತ್ತೆ, ಈ ಬಿಳಿ ಮುಸುಡಿ, ಈ ಹಣೆದಾಸಿ, ಈ ಕರಿಗಿವಿ, ಈ ನಿಮ್ಮ ಸೋಬಾನಿ!' 'ಹಾ!' ಎಂದ ನಿಂಗ. 'ಎಲ್ಲಾಕಿಂತ ಸೋಬಾನಿ ಚೆಂದಾಗೈತಿ!' ಎಂದುಕೊಂಡ.

ದುಡದುಡನೆ ಹೋದ ರೈಲ್ವೆ ನಿಲ್ದಾಣಕ್ಕೆ. ಅಧಿಕಾರಿಗಳಿಂದ ಬೀಗದಕ್ಕೆ ತೆಗೆದುಕೊಂಡು ಬಂದು, ಕೈ ಬೀಳಿಸಿ ನಿಂತ 'ನೋಡೋಣ ಹೊಸ ಹೆಸರ—' ಎಂದ. ಕಂಬಿಯ ಆಚೆ ದೂರದಲ್ಲಿ–ಮೇಯುತ್ತ ಇತ್ತು ಕತ್ತೆ. 'ಸೋಬಾನೀ, ಸೋಬಾನೀ!' ಎಂತ ಕೂಗಿದ. ರಂಗಿ ಅರೆಬಾಗಿಲು ಮಾಡಿಕೊಂಡು ಜೋಳ

ಬೀಸುತ್ತ ಇದ್ದವಳು ಹಾಗೇ ದುರುಗುಟ್ಟಿ ನೋಡಿದಳು. ಕತ್ತೆ ಎಲ್ಲಿತ್ತೋ ಏನೋ ನಾಗಾಲೋಟದಿಂದ ಓಡಿ ಬಂದೇ ಬಂದಿತು. ರಂಗಿಗೂ ಕೂಡ ಆನಂದ, ತಾನು ಹಾಸ್ಯಕ್ಕೆ ಇಟ್ಟ ಹೆಸರೇ ಸ್ಥಿರ ವಾಯಿತಲ್ಲ ಎಂದು.

ಸೋಬಾನಿ ಬಂದು, ಬಳಿಯಲ್ಲಿ ನಿಂದು, ಕಿವಿ ಅಲ್ಲಾಡಿಸಿ, ತಲೆ ಕೊಡವಿ, ಹಿಂಗಾಲು ಹಾರಿಸಿ, ಬಾಲ ಎತ್ತಿ ಕಿರಿಚುವುದಕ್ಕೆ ಆರಂಭಿಸಿತ್ತು. ಅಷ್ಟು ಹೊತ್ತಿಗೆ ಪಾಯಿಂಟಿನ ಕಬ್ಬಿಣದ ಹಿಡೀ ಮೇಲೆ ಕುಳಿತಿದ್ದವನು, ಆ ನಮ್ಮ ನಿಂಗ ದಢಕ್ಕನೆ ಎದ್ದು ಹೋಗೀ ಬಾಲ ಎಳೆದು ಹಿಡಿದ. ಕತ್ತೆ ಕೂಗೋದು ಬಿಟ್ಟು ನಿಂಗನ್ನ ಮೂಸಿ ನೋಡಿತು.

‘ ನೀನೇನೋ ಕತ್ತೆ ನಿಜ. ನಮುಗೆ ಓದಸೋ ಉಪಾದ್ರೂ ಹೇಳಿಟ್ಟದ್ದೂ ನಿಜ—ಕತ್ತೆ ಕಿರಿಚುವುದು—ಎಂತ. ನಾನು ನಿನಗೆ ಹೊಸ ಹೆಸರಿಡಿಸಿ ಲಕ್ಷಣವಾಗಿ ಕರೆದರೆ—ಹೈಕಿ ನೈಕಿ—ಎಂತ ಕಿರುಚುವುದೇನು ಚಂದ? ಅಲ್ಲಿ ರೈಲಿಂಜನ್ ಕೂಗಸ್ತಾ ಇದ್ದಾನೋ ಹೇಗೊ. ಈ ಕತ್ತೆ ಜೊತೇಲಿ ಇದ್ದಾಗ್ಗೆ, ಆ ದೊಡ್ಡ ಕತ್ತೆ ಹೊಟ್ಟೇ ಕಿಚ್ಚಿಗೆ ಕಿರಿಚಿಕೊಳ್ಳದೆಲೆ, ನಾನು ಬಾವುಟ ಬೀಸೋಕೆ ಮುಂಚೇಲಿ ಬಂದುಬಿಟ್ಟೇತು. ಸೋಬಾನಿ, ನೀನು ಕೂಗುತಿ ಆದ್ದರಿಂದ ನಿನ್ನ ನೀಳಾ ನೀಟಾದ ಬಾಲದ ಗೊಂಡೇ ಚಾರೀನ ಎರಡು ಜಡೆ ಮಾಡಿ ಈ ಪಾಯಿಂಟು ಹಿಡೀಗೆ ಕಟ್ಟಿರತೀನಿ; ಇದನ್ನ ಒದೀಬೇಡ. ಬಾವುಟ ಬೀಸೋಕ್ಕೆ ಹೋಗಲ?’ ಎಂತೆಲ್ಲ ಹೇಳಿಕೊಂಡು ಹೊರಟ.

ಅದೇನು ಆಶ್ಚರ್ಯವೋ ಕಾಣೆ. ನಿಂಗ ಕೈಮುರ ಬಗ್ಗಿಸಿದ ಕೂಡಲೆ ರೈಲು ಕೊಗೋದು. ಅವನು ಬಾವುಟ ಹಿಡಿದು ಹಸುರು ತೋರಿಸಿದ ಕೂಡಲೆ ಅದು ಒಳಗೆ ನುಗ್ಗಿಬಿಡೋದು. ಅವನಿಗೆ

ರೈಲು ಬರಿಸೋದು ಹೋಗಿಸೋದು ಅಂದರೆ, ರೈತರ ಮನೇಲಿ ದನ ಕಟ್ಟಿದ ಹಾಗೆ, ದನ ಬಿಚ್ಚಿದ ಹಾಗೆ.

ರಂಗೀಗೆ ಜೋಳಾ ಬೀಸೋದು, ರಾಗೀ ಒಡೆಯೋದು, ಹುರುಳಿ ತಿರುವೋದು, ರೊಟ್ಟಿ ಚಟ್ನಿ, ಕಾಫಿ, ವೊದಲಾದ್ದೆಲ್ಲ ಕಾಯಿಸಿ ಬೇಯಿಸಿ ಮಾಡುವ ಕೆಲಸ. ನಿಂಗನಿಗಾದರೋ ಏಳೋದು ಚರಿಗೇಲಿ ವೋರೇ ತೊಕ್ಕೊಂಬೋದು, ಅಂಬಲಿ ರೊಟ್ಟಿ ಉಂಬೋದು, ವುಂಜಾನೆ ರೈಲಿಗೆ ಹೋಗೋದು ಮಾಸ್ತ್ರಾರ್ರ ಹತ್ತಿರ ಬೀಗದೆಸಳ ಇಸಗೊಳ್ಳೋದು, ಬೀಗ ತಕ್ಕೊಳ್ಳೋದು, ಬಾವುಟ ಸೋದು, ರೈಲು ಬರಿಸೋದು, ಜನ ಇಳಿಸೋದು, ಯಾರಾದರೂ ಕೂಲಿ ಕರೆದರೆ ಹೋಗೋದು, ಮತ್ತೆ ಮನೆಗೆ ಬಂದು ಕೂತಿರೋದು. ಸೂರ್ಯ ಮೂಡ್ದಾಗ್ಗೆ ಏಳೋದು, ಪಡೂಲಿ ಮುಳುಗಿದಾಗ್ಗೆ ಮಲಗೋದು ಹೀಗೇ ಕಾಲ ಸಾಗಿತು.

ಒಂದು ದಿನ ವೂತ್ರ ಎಲ್ಲ ಬದಲಾವಣೆ ಆಯಿತು. ಆ ದಿನವೋ ಶಾನಭಾಗರ ಮನೇಲಿ ಮದುವೆ. ಮನೆತನದ ಅಗಸ ಹೋಗಬೇಕಾಗಿ ಬಂತು. ಆ ದಿನ ಎರಡು ಮೂರು ಬಾರಿ ಹೋಗಿ ಬಂದ. ಕಡೆಗೆ ನಾಲ್ಕನೇ ಬಾರಿಗೂ ಕಡ್ಡಾಯವಾಗಿ ಹೋಗಲೇಬೇಕಾಗಿ ಬಂತು. ಲೋಕಲಗಾಡಿ ಬರೋ ಹೊತ್ತು. ಕೈಮರದ ಕೀಲೀ ತೆಗೆದುಕೊಂಡು ಬಂದು, ಬೀಗ ತೆಗೆದು, ಪದ್ಧತಿ ಪ್ರಕಾರ, ಸೋಬಾನಿಯ ಸೊಗಸಾದ ಬಾಲದ ಗೊಂಡೇ ಚೌರಿಗೆ ಎರಡು ಜಡೆ ಹೆಣೆದು ಅದನ್ನ ಪಾಯಿಂಟು ಹಿಡಿಗೆ ಬಿಗಿದು ಕುಳಿತಿದ್ದನು. ಆ ಸಮಯಕ್ಕೆ ಮದುವೆಯ ಮನೆಯಿಂದ, ವಿಾರಲಾಗದ ಕರೆಬಂತು. ಹೆಂಡತಿ ರಂಗಿ ಕೂಡ ಓಡಿ ಬಂದಳು. ‘ ಸೋಬಾನಿ, ನನ್ನವ್ವ, ಓಡಿ ಬರತೇನೆ ಈಗ, ನೋಡಿಕೋ ನನ ದೇವೀ, ಕೋಟೇ ದುರಗವ್ವ, ಹೋಳೀಗಿ ಪೀಳೀಗಿ ತಂದೇನು

ನಿಂಗಾಗಿ. ಇದೋ ಬಂದೆ . . . .' ಎಂದು ಹೊರಟವನು, ಮತ್ತೆ ಹಿಂದಕ್ಕೆ ಹೋಗಿ ಹಸುರು ಬಾವುಟ ಬಂದ ಹೊತ್ತಿಗೆ ಕಾಣುವ ಹಾಗೆ ಕೈಗಿರಲಿ ಎಂದುಕೊಂಡು, ಅದನ್ನು ಸೋಬಾನಿಯ ಕೊರಳಿಗೆ ಗೆಜ್ಜೇಪಟ್ಟಿಯ ಮೇಲ್ಭಾಗದ ಕೊಂಡಿಗೆ ಬಿಗಿಯಾಗಿ ಸಿಕ್ಕಿಸಿ ಹೊರಟುಹೋದನು.

ಶಾನುಭಾಗರ ಮನೆಯಲ್ಲಿ ಭಾರಿ ಚಪ್ಪರ ಹಾಕಿದ್ದಾರೆ. ಬಹಳ ನೆಂಟರು ನೆರೆದಿದ್ದಾರೆ. ಈ ಅಗಸರ ಮಗನ್ನ ಕೇಳುವವರಾರು? ಲೋಕಲಗಾಡಿ ಬರುವ ಹೊತ್ತು. ಗಾಡಿ ತುಂಬ ಜನ ಇರುತ್ತೆ. ಈ ಚಪ್ಪರ ತುಂಬಿ ಆಗಿ ಮಿಗುತ್ತೆ. ಇಷ್ಟೊಂದು ಜನ ಬಂದು ಹೋಗಲು ಯಾರ ಕೈವಾಡ? ನಿಂಗಂದು. ಇವನು ಹಸುರು ಬೀಸಿದರೆ ಅಷ್ಟೊಂದು ಜನರನ್ನು ಹೊಟ್ಟೆಯಲ್ಲಿಟ್ಟುಕೊಂಡ ಆ ಮಹಾ ಬೆಂಕಿಯ ಸರ್ಪ ಬರಬೇಕು, ಮತ್ತೊ ಕೆಂಪು ಬೀಸಿದರೆ ನಿಲ್ಲಬೇಕು. ಆದರೂ ಕೂಡ ಇಲ್ಲಿ ಚಪ್ಪರಕಂಬದಡಿ ನಿಂಗನಾರು? ಅಗಸರ ನಿಂಗ ಮಾತ್ರ.

ಹೊತ್ತಾಯಿತು. ಎದ್ದ—'ಬುದ್ಧೀ, ಸ್ವಾಮಿಾ, ಶಾನಭಾಗ ಸರಕಾರ್ರೇ, ನನ್ನ ಕೆಲಸದ ಬಾಯಾಗೆ ಮಣ್ಣು ಬಿದ್ದೀತು, ಹೊರಟೇ' ಎಂದು ಕೂಗಿದ. ಒಳಗಿನಿಂದ ಒಂದು ಮಗುವು ಗೆಜ್ಜೆಗಾಲಲ್ಲಿ ಪುಟ ಪುಟ ಓಡಿ ಬಂದು 'ಇಂಗ, ತಿಂಗು' ಎಂದು ಒಂದು ಹೋಳಿಗೆ ತಂದಿತು. 'ಇಸಗೊಳ್ಳಪ್ಪ' ಎಂದಳು ಒಳಗಿನಿಂದ ಮದುವಣಗಿತ್ತಿ. ನಿಂಗ ತಿಂದ. 'ಸಾಕು' ನಮ್ಮಪ್ಪ ಶಾನುಭಾಗರಿಗೆ ಹೋಗಿ ಹೇಳಿಬಿಡಿ, ನಾನು ರೈಲು ಬರಿಸೋ ಹೊತ್ತು ಬಂತು ರಂಗೀ ಕೈಲಿ ಎಲ್ಲ ಕಳಿಸಿ' ಎಂದು ಮತ್ತೊಮ್ಮೆ ಹೇಳಿ ಓಡಿಬಂದುಬಿಟ್ಟ.

ಅಗ್ರಹಾರ, ಪೇಟೆ, ದೇವಸ್ಥಾನಗಳ ಮುಂದೆ ಬಂದರೆ

ಯಾರಾದರೂ ಮಾತನಾಡಿಸಿಯಾರೆಂದು, ಯಾರಿಗೂ ಕಾಣದ ಸಂದಿ ಗೊಂದಿ ಹೊಕ್ಕು ಓಡಿಬಂದುಬಿಟ್ಟ.

ಸ್ಟೇಷನ್ ನಾಲ್ಕು ಹೆಜ್ಜೆಯಿದೆ. ಮಾಸ್ಟರು ನಿಂತಿದಾರೆ ಯಾರ ಕೈಲೋ ಮಾತನಾಡುತ್ತ. ಎಲ್ಲೆಲ್ಲೂ ಗದ್ದಲ. ನಿಟ್ಟಿಸಿ ನೋಡಿದ. 'ಗಾರ್ಡು!' ನಿಂಗನಿಗೆ ಎದೆ ಬಿಚ್ಚಿಹೋಯಿತು. ರೈಲು ಬಂದು ತುಸ ಅತ್ತಕಡೆ ಹೋಗಿ ನಿಂತಿದೆ; ನಿಂಗನಿಗೆ ಪ್ರಾಣ ಹಾರಿಹೋಯಿತು ಕೈಕಾಲು ಬಿದ್ದುಹೋಯಿತು. ಹೇಗೋ ಕಾಲು ಹಾಕಿದ. ಟಿಕಿಟ್ಟುಗೇಟುಹತ್ತಿರ ಬಂದ. ಎಡವಿ ಬಿದ್ದುಬಿಟ್ಟ.

ಸ್ಟೇಷನ್ ಮಾಸ್ಟರು ತಿರುಗಿ ನೋಡಿದರು. 'ಎಲ್ಲಿ ಹೋಗಿದ್ದೆ ನಿಂಗಾ?' ಎಂದರು. ಗಾರ್ಡು ನಕ್ಕರು. 'ಇರಲಿ ಬಿಡಿ. ಈ ಸಾರಿ ಸಂಬಳ ಆ ಕತ್ತೆಗೇ ಕೊಡಿಸಿದರಾಯಿತು' ಎಂದರು. ನಿಂಗನಿಗೆ ದಿಗಿಲ್ ಎಂತು ಒಳಗೊಳಗೆ! 'ಆದೇನು ಕತ್ತೆಯ ವಿಚಾರ ಬಂತು. ಸೋಬಾನಿ ಏನು ಮಾಡಿತೋ! ಯಾರನ್ನಾದರೂ ಒದ್ದೇಬಿಟ್ಟಿತೋ, ಏನು ಗತಿ!' ಎಂದುಕೊಂಡನು. ಹಾಗೇ ತಿರುಗಿ ನೋಡುತ್ತಾನೆ. ಅಲ್ಲಿ ಜನದ ಗುಂಪು. ಅದರ ನಡುವೆ ಸೋಬಾನಿ ಇತ್ತು. ತಾನು ಹೊದಿಸಿದ್ದ ರೇಶ್ಮೆ ವಸ್ತ್ರ ಮೈಮೇಲೆ ಹಾಗೇ ಇತ್ತು. ಸಿಕ್ಕಿಸಿದ್ದ ಹಸುರು ಬಾವುಟ ಹಾಗೇ ಬಿಚ್ಚಿಕೊಂಡು ಹಾರಾಡುತ್ತಿತ್ತು. ಜನರಾದರೋ ಹೊತ್ತು ಮಾರುವವರಿಂದ ಕೊಂಡುಕೊಂಡು ಬಿಸ್ಕತ್ತು ಬಾಳೇಹಣ್ಣು, ಪೇಪರಮೆಂಟು ತಿನ್ನಿಸುತ್ತಲಿದ್ದರು.

ಏನೂ ತೋಚದೆ ನಿಂತುಬಿಟ್ಟ ನಿಂಗ. ಕಡೆಗಂದರು ಸಿಲ್ದಾಣದ ಅಧಿಕಾರಿಗಳು 'ನಿಂಗಾ, ಬಾವುಟ ಇಸುಗೊ ನಿನ್ನ ಕತ್ತೆ ಕಡೆಯಿಂದ, ರೈಲು ಹೋಗಲಿ, ಗಂಟೆ ಹೊಡೆದು, ಸಿಗ್ನಲು

ಕೊಡು. ಮೊದಲನೇ ಕೆಲಸ ಅದೇ ಮಾಡಿಬಿಟ್ಟದೆ. ನಿನ್ನ ಪುಣ್ಯ ಈ ದಿನ. ನಿನ್ನ ಕತ್ತೆಯಿಂದ, ನಾನು ಬದುಕಿದೆ, ನನ್ನಿಂದ ನೀನು ಉಳಿದೆ. ನಡೆ ಹೋಗು, ಚಲೋ ಕೆಲಸ ಮಾಡಿದಿ' ಎಂದು ಅರ್ಧ ಸಿಟ್ಟು, ಕಾಲು ನಗು, ಇನ್ನು ಕಾಲು ಆಕ್ಷೇಪಣೆಯಲ್ಲಿ ಹೇಳಿದರು. ಗಾರ್ಡು ನಕ್ಕು ಹೋಗಲಿ ಬಿಡ್ರಿ, ಪಾಪ. ಏನೋ ಎಲ್ಲಿ ಹೋಗಿದ್ದನೋ. ಆದರೂ ಅಂಥ ಕತ್ತೆ ಇತ್ತಲ್ಲ ಅವನ ಬದಲಿಗೆ' ಎಂದು ಮರುಗಿದರು.

ಅಂದಿನ ಸಂಜೆಯ ಸೂರ್ಯ ಆ ಊರಲ್ಲಿ ಅಷ್ಟೊಂದು ಉತ್ಸಾಹವನ್ನು ಎಂದೆಂದೂ ಕಂಡಿರಲಿಲ್ಲ. ಊರಲ್ಲೆಲ್ಲ ಮೆರವಣಿಗೆ ಮಾಡಿಬಿಟ್ಟರು ಆ ಸೋಬಾನಿಗೆ. ಹೂವಿನ ಹಾರಗಳ ಹೊದ್ದಿಕೆಯಲ್ಲಿ ಅದು ಹೂವಿನ ಕತ್ತೆಯಾಗಿಬಿಟ್ಟತು. ಉಳಿದ ಕತ್ತೆಗಳಿಗೆಲ್ಲ ಹೀಗಾಗಿದ್ದೀತು ಆಗ. ದೇವರೇ ಬಲ್ಲ ಆ ಮೂಕಜಂತುಗಳ ಮನಸ್ಸನ್ನು !

ಮನೆಗೆ ಬಂದಕೂಡಲೆ, ರಂಗಿ ಅದನ್ನ ತಬ್ಬಿ ಮುದ್ದಾಡಿಬಿಟ್ಟಳು. ' ನನ್ನ ದೇವಿ, ನನ್ನಮ್ಮ, ನನ ಸೋಬಾನಿ, ಸುಬಾನೇ ತಂದಿಯಲ್ಲ. ನನ್ನಾತನ ಜೀವ ಉಳಿಸಿದೆಯಲ್ಲಮ್ಮ, ನನ್ನ ಕೊರಳ ಕಟ್ಟಾಣಿ, ನನ್ನ ತಾಳೀ ಬಾಗ್ಯ' ಎಂತೆಲ್ಲ ಹೊಗಳಿದಳು.

ಕತ್ತೆ ಬೆಪ್ಪಾಗಿ ನಿಂತುಬಿಟ್ಟತು. ' ನಾನು ಏನು ಮಾಡಿದ್ದೇನು? ಇವರ್‍ಯಾಕೆ ಹೀಗೆ ಗೋಳಾಡಿಸುತ್ತಿದ್ದಾರೆ ನನ್ನ? ನಾನಿನ್ನೇನು ಮಾಡಿದೆ, ರೈಲು ಕೂಗಿದ ಕೂಡಲೆ ಇನ್ನೊಂದಾವುದೋ ಕತ್ತೆ ಅಂದುಕೊಂಡು ಹಿಂಗಾಲು ಹಾರಿಸಿದೆ. ಯಾವ್ರದೊ ಧಡಕ್ಕೆಂತು, ಹೆಗಲಮೇಲೇನೋ ಪಟಪಟ ಎಂತು. ಇಷ್ಟೇ ನನಗೆ ತಿಳಿದಿರೋದು.' ಇಷ್ಟೇ ಆದರೂ ನಿಂಗನಿಗೆ ಅದು ಮಹತ್ತಾಗಿತ್ತು. ರಂಗಿ ಕೇಳಿದಳು 'ನಿಂಗ ನೀನೂ ಕೂಡ ಮುದ್ದಾಡಿದ್ಯಾ

ಸೋಬಾನೀನ ?' 'ಇನ್ನೇನ ಮಾಡಲಿ ಮತ್ತೆ' ಎಂದನು ನಿಂಗ. ರಂಗಿ ಮತ್ತೆ ಮತ್ತೆ ಕತ್ತು ಓರೆಮಾಡಿಕೊಂಡು—'ಏನಾದರೂ ಮಾಡು ನಾನಂತೂ ಈ ದಿನ ಶಾನಭಾಗರ ಮನೇ ಹೋಳಗೀ, ಪರಮಾನ್ನ, ಲಡ್ಡೂ, ಫೇಣೀ, ಎಲ್ಲ ನಮ್ಮ ಮನೆ ಸೋಬಾನೀಗೇ ಕೊಡತೇನಿ, ನಿನಗಲ್ಲ ಕಂಡ್ಯಾ?' ಎಂದು ಎದ್ದು ಹೋದಳು. ನಿಂಗ ಹಾಸ್ಯವಾಗಿ ಹೇಳಿದ. 'ನಿಂಗೀ, ಅದು ಕರಗಿವಿ, ಬಿಳಿಮುಸುಡಿ, ಸೊಟ್ಟಗಾಲು, ಕತ್ತೆ ಅಲ್ವೇನೇ?'

ರಂಗಿ ಒಳಗಿಂದ ಗಮಗಮಿಸುವ ತಿಂಡಿ ತುಂಬಿದ ಬುಟ್ಟಿಯನ್ನು ತಂದವಳೆಂದಳು—'ಯಾಕಾದೀತು ಅದು ನನ್ನ ಭಾಗ್ಯ, ನನ್ನ ಸೋಬಾನಿ. ಇಂದು ನೀನು ಕತ್ತೆಯಾಗಿ ನನ್ನ ಮನೆ ಹಾಳು ಮಾಡಿಬಿಡುತಿದ್ದಿ. ಸೋಬಾನಿ ನನ್ನ ಭಾಗ್ಯವಾಗಿ ಉಳಿಸಿತು, ನಿನ್ನ ಮಾನ, ನನ್ನ ಪ್ರಾಣ. ಇವತ್ತು ಅದು ತಿಂದು ಮಿಕ್ಕದ್ದನ್ನೇ ತಿನ್ನು ನೀನು.'

ಇದು ನಡೆದುದಲ್ಲವೆಂದು ಯಾರ್ರಿ ಅನ್ನುವರು! ಸೋಬಾನಿಯ ಚಿತ್ರವನ್ನು—ಟೈಮ್ಸ್ ಆಫ್ ಇಂಡಿಯ ಪತ್ರಿಕೆಯವರು, ರೈಲ್ವೆ ಇಲಾಖೆಯವರ ಹೇಳಿಕೆಯ ಮೇರೆಗೆ ಪ್ರಕಟಿಸಿದ್ದನ್ನು ನೀವು ನೋಡಲಿಲ್ಲವೆ? ನೋಡದಿದ್ದರೆ ನೋಡಿ, ಆ ರೈಲ್ವೆ ಸ್ಟೇಷನ್ನಿನಲ್ಲಿ! ಇನ್ನು ಮೇಲೆ ಕತ್ತೆಗಳನ್ನು ಹೀನಾಯವಾಗಿ ಕಾಣಬಾರದು ಕಂಡಿರಾ!

ಮುದ್ದು ರಾಮು

ಮನೆಯ ಹಿತ್ತಿಲಲ್ಲಿ ಒಂದು ಮಾವಿನ ಮರವಿತ್ತು. ಮಳೆಗಾಲದಲ್ಲಿ ಒಂದು ಸಾರಿ ಆಲಿಕಲ್ಲು ಬಿತ್ತು. ಅಮ್ಮ, ಅಚ್ಚಕ್ಕ, ನೆರೆಮನೆ ರಂಗು ನಾನು—ಎಲ್ಲರೂ ಇಲ್ಲೊಂದು ಅಲ್ಲೊಂದು

ಟುಪುಟುಪು ಬಿದ್ದ ಆಲಿಕಲ್ಲುಗಳನ್ನು ಆರಿಸಿಕೊಂಡು ಬಂದು ಸೂರಿನ ಕೆಳಗಡೆ ನಿಂತು ಬಾಯಿಗೆ ಹಾಕಿಕೊಳ್ಳುತ್ತಲಿದ್ದೆವು. ಆಗ ಧಡೇರೆಂದು ಶಬ್ದವಾಯಿತು. ಮಾವಿನ ಮರ ಬಿತ್ತು. ಓಹೋ ಬನ್ನಿ ಬನ್ನಿ ಎಂತ ಎಲ್ಲರೂ ಓಡಿಹೋದೆವು. ಅಷ್ಟು ಹೊತ್ತಿಗಾಗಲೆ ಅಪ್ಪ ಹೋಗಿ ಹಣ್ಣಾರಿಸುತ್ತಲಿದ್ದನು. ಹಳೇ ಮರ. ಯಾರಿಗೂ ಬಾಧೆ ಕೊಡದೆ ಬಿತ್ತಲ್ಲ ಎಂದು ಅಪ್ಪನಿಗೂ ಅಮ್ಮನಿಗೂ ಸಮಾಧಾನ.

ನಾನು ಹಣ್ಣಾರಿಸುವ ನೆವದಲ್ಲಿ ಮರದ ಕೊಂಬೆಗಳನ್ನೆಲ್ಲ ಅರಗು ಮಾಡಿಕೊಂಡು ಆ ಮರದಮೇಲೆ ಬೆಳೆದಿದ್ದ ಶ್ರೀತಾಳದಂಡೆ ಹೂವನ್ನ ಕುಯ್ಯಲು ಹೋದೆನು. ಅಲ್ಲಿಗೆ ಹೋದೆನೋ ಇಲ್ಲವೊ ಚಿಯ್ಯೋ ಚಿಯ್ಯೋ ಎಂತ ಕೂಗು ಕೇಳಿಸಿತು. ಅಲ್ಲೊಂದು ಪೊಟ್ಟರೆ ಯಿತ್ತು. ಅದರೊಳಗೆ ನೋಡಿದರೆ ಒಂದು ಪುಟ್ಟದೊಂದು ಮರಿ ಯಿತ್ತು. ಪಂಚೆಯ ಸೆರಗಿನಲ್ಲಿ ಅದನ್ನು ಹಗುರವಾಗಿ ಸುತ್ತಿ ಹಿಡಿದು ತಂದೆನು.

ಅಚ್ಚಕ್ಕ ಅದನ್ನ ನೋಡಿ 'ಇಲೀಮರಿ, ಇಲೀಮರೀ' ಎಂತ ಕೂಗಿ ಚಪ್ಪಾಳೆ ಹೊಡೆದಳು. 'ಎರಡೇ ಕಾಲಿದೆ. ಇದೇನೆ ಅಮ್ಮ?" ಎಂತ ಅಮ್ಮನನ್ನು ಕರೆದಳು. ಅಮ್ಮ ಅಪ್ಪ ಎಲ್ಲರೂ ಬಂದು ನೋಡಿ ಅದು ಪಂಚರಂಗಿನ ಗಿಳಿಮರಿಯೆಂದು ಹೇಳಿ— ಒಂದು ಕೈಲು-ಬುಟ್ಟಿಯೊಳಗೆ ಒಂದಿಷ್ಟು ಹರಕು ಬಟ್ಟೆ ಹಾಕಿ, ಅದರಲ್ಲಿ ಆ ಮರಿಯನ್ನ ಬೆಚ್ಚಗಿಟ್ಟರು. 'ಆ ಗೂಟಕ್ಕೆ ನೇತುಹಾಕು' ಎಂತ ಅಪ್ಪ ಹೇಳಿದ.

ಅಚ್ಚಕ್ಕ ಅದನ್ನ ಬಿಟ್ಟು ಹೋಗಲೊಲ್ಲಳು. ಊಟಕ್ಕೆ ಕೂತಾಗ ಹತ್ತಿರ ಕೂರಿಸಿಕೊಂಡು ಅದಕ್ಕೆ ಅನ್ನ ತಿನ್ನಿಸಬೇಕು ಎಂತ ಅವಳಾಸೆ.

'ಅಯ್ಯೋ ಭ್ರಾಂತೆ, ಅದು ಅನ್ನ ತಿನ್ನುತ್ತೆಯೆ—ಅದಕ್ಕೆ ಹಾಲು ಹಾಕಬೇಕು.'

'ಅವರ ಮನೆಯ ಗಿಳಿ ಮೆಣಸಿನಕಾಯಿ ತಿನ್ನುತ್ತೆ-ಹೋಗಲಿ ಬಿಡು, ಆ ಕಾಸಿದ ಹಾಲು ಕೊಡು, ಬೇರೇನಾದರೂ ಕೊಡೆ' ಯೆಂದು ಅಚ್ಚಿ ಕುಣಿದಾಡಿದಳು. ಒಂದೆರಡು ಸಾರಿ ಆ ಮರಿ ಚಿಂವ್ ಅಂದ ಹಾಗೆಲ್ಲ ಹಾಲು ಹಾಕಹೋದಳು. ಆ ಹಾಲು ಅದರ ಮೂಗಲ್ಲೆಲ್ಲ ಬಂದುಬಿಟ್ಟಿತು. ಅಚ್ಚಿಗೆ ಗಾಬರಿಯಾಗಿ ಅಮ್ಮನ ಕೈಲಿ ಕೊಟ್ಟಳು. ಅಮ್ಮ ಅದಕ್ಕೆ ಹತ್ತಿಯಲ್ಲಿ ಬತ್ತಿಮಾಡಿ ಅದರಲ್ಲಿ ಹಾಲು ಚೀಪಿಸಿದಳು. ಆ ರಾತ್ರಿ ನಮಗಾರಿಗೂ ನಿದ್ರೆಯೆ ಯಿಲ್ಲ. ಗಿಳಿಮರಿ ನೋಡಿಕೊಳ್ಳುವ ಗದ್ದಲ. ಅದಕ್ಕೆ ಸುಖವಿಲ್ಲ, ನಮಗೆ ನಿದ್ದೆ ಇಲ್ಲ.

ಅಂತು ಇಂತು ಒಂದು ತಿಂಗಳು ಕಳೆಯಿತು. ಗಿಳಿಮರಿಗೆ ಅಲ್ಲೊಂದು ಇಲ್ಲೊಂದು ಗರಿ ಮೊಳಕೆಯಾಯಿತು. ಅಚ್ಚಕ್ಕ "ಅದು ಕೆಂಪು, ಇದು ಹಸುರು, ಇದು ಹಳದಿ, ಎಂತೂ ಐದು ಬಣ್ಣ ಬರಲೇಬೇಕಲ್ಲ" ಎಂದು ಗುರುತಿಟ್ಟು ನೋಡುತ್ತಿದ್ದಳು. ಇಷ್ಟು ಹೊತ್ತಿಗೆ ಹಿಂಸೆ ಮಾಡಿ ಅಪ್ಪನ ಕೈಯಿಂದ ದುಡ್ಡು ಹಾಕಿಸಿ ಒಂದು ಪಂಜರವನ್ನು ತಂದೆವು.

ಗಿಳಿಯ ಮರಿ ಏನೇನು ಮಾಡಿದರೂ ಅದರೊಳಕ್ಕೆ ಹೋಗದು. "ಬೆಕ್ಕಿನ ಕಾಟ ಒಂದಿಲ್ಲದಿದ್ದರಪ್ಪ ಹೊರಗೇ ಇರ ಲೀಂತ ಅನ್ನಬಹುದಾಗಿತ್ತು. ಬಿಡೋ, ಅಣ್ಣ! ಅದು ಮನೆ ಯಲ್ಲೇ ಹಾರಾಡಿಕೊಂಡಿರಲಿ! ನಾನೂ ಇಸ್ಕೂಲಿಗೆ ಹೋಗಿ ಬಿಟ್ಟರೆ—ನೀನೂ ಹೋಗಿಬಿಟ್ಟರೆ—ಅಪ್ಪ ತಿರುಗಾಟ ಹೋಗಿ ಬಿಟ್ಟರೆ—ಅಮ್ಮಗೆ ಬೇಜಾರಾಗುತ್ತೆ—ಅಲ್ಲವೆ? ಅದ್ಯಾಕೆ ಬೇಜಾ ರಾಗುತ್ತೆ! ನಮ್ಮ ಮುದ್ದು ರಾಮು ಇರುತ್ತಲ್ಲ. ಅದು ಹಾಲ

ಕರೀಬೇಕಾದರೆ—ಅಡಿಗೇ ಮಾಡಬೇಕಾದರೆ ಜೊತೇಲೇ ಹಾರಿ ಕೊಂಡಿರುತ್ತೆ. ಅಮ್ಮಯ್ಯ, ಅಗ್ಗಣ್ಣಿ ಮಾಡೇ—ಕರೂ ಬಿಡೇ ಅಮ್ಮಯ್ಯ, ಅಂತೆಲ್ಲ ನಾವಾಡಿದ ಹಾಗೆಯೇ ಆಡುತ್ತೆ ಅಲ್ಲವೊ? ಸರಿ. ಈಗ ಮಾತ್ರ ಒಳಗಿರು ಮುದ್ದು" ಎಂದು ಉಪಚಾರ ಮಾಡಿ ಒಳಗಿಟ್ಟೆವು. ಬಾಗಿಲು ಹಾಕಿ ಕಡ್ಡಿ ಸಿಕ್ಕಿಸಿದೆವು.

ಒಂದು ದಿನ ಬೆಳಗ್ಗೆ ನಾನು ಸ್ಕೂಲಿಂದ ಬರುವ ಹೊತ್ತಿಗಾಗಲೆ, ಅಚ್ಚಕ್ಕನು ಬಂದು ಪಂಜರದ ಹತ್ತಿರ ನಿಂತುಕೊಂಡು ಗಿಳಿಯ ಮರಿಗೆ ಪಾಠ ಹೇಳುತ್ತಿದ್ದಳು—"'ಧರಣಿಮಂಡಲ' ಬೇಕೋ 'ಕಿರುತಾರೆಗೆ' ಬೇಕೋ ಮುದ್ದು—ಮುದ್ರಾಮೂ" ಅಂತ ಕೇಳಿದ ಹಾಗೆಲ್ಲ ಅದು ಆ ಕಡೆ ತಲೆನೋರೆ ಮಾಡಿ 'ಹೂಂ ಅಚ್ಚಕ್ಕ' ಎನ್ನುತ್ತಲಿತ್ತು.

'ಹುಚ್ಚುಮುರುವಿ, ಅದಕ್ಕೆ ಅದೆಲ್ಲ ಯಾತಕ್ಕೆ' ಎಂತ ಅಮ್ಮ ಎಂದಳು. ಆದರೂ ಅಚ್ಚಕ್ಕನ ಆಶೆಯೇ ಬೇರೆ. ಇಸ್ಕೂಲಲ್ಲಿ ತಾನು ಒಪ್ಪಿಸಬೇಕಾದ ಪದ್ಯವನ್ನೆಲ್ಲ ಗಿಳಿಗೆ ಹೇಳಿಕೊಟ್ಟಿರುವದು. ಗಿಳಿ ಮರೆಯುವುದಿಲ್ಲವಷ್ಟೆ! ಇನಸ್ಪೆಕ್ಟರು ಬಂದಾಗ ಅದನ್ನು ಮಡಿಲಲ್ಲಿಟ್ಟುಕೊಂಡು ಹೋಗುವುದು. ಸ್ವಲ್ಪ ಸ್ವರ ಎತ್ತಿದರೆ ಸಾಕು ಗಿಳಿ ಪೂರ್ಣ ಹೇಳಿಬಿಡುವುದು. ನಂಬರು ಬರುತ್ತೆ. ಮೇಲಕ್ಕೆ ಕಳುಹಿಸುವರು. ಇನಾಮು ಬರುತ್ತೆ—ಹೀಗೆಲ್ಲ ಹುಚ್ಚಾಬಟ್ಟೆ ಅಚ್ಚಕ್ಕನ ಯೋಚನೆ.

ಅಚ್ಚಕ್ಕನಿಗೆ ಪ್ರತಿಯಾಗಿ ಏನಾದರೂ ಮಾಡಬೇಕೆಂದು, ನಾನು ಅವಳಿಗೆ ತಿಳಿಯದ ಹಾಗೆ ಗಿಳಿಯನ್ನು ಅಟ್ಟಕ್ಕೆ ತೆಗೆದುಕೊಂಡು ಹೋಗಿ, ಪಾಠ ಹೇಳಿಕೊಡುತ್ತಿದ್ದೆನು. ನನ್ನನ್ನು ಕಂಡಾಗ ಮಾತ್ರ ನಾನು ಹೇಳಿಕೊಟ್ಟಿದ್ದನ್ನು ಹೇಳುತ್ತಿದ್ದಿತು. ಮತ್ತೊಂದು ದಿನ ಅಚ್ಚಕ್ಕನು ಹೆಮ್ಮೆಯಿಂದ ಗಿಳಿಯನ್ನು ತಂದು

'ನಾನು ಇದಕ್ಕೆ ಮಗ್ಗಿ ಹೇಳಿಕೊಟ್ಟದ್ದೇನೆ' ಎಂದಳು.

'ಮುದ್ದು ರಾಮು, ಅಚ್ಚಕ್ಕನ್ನ ಮಾತಾಡಿಸು' ಎಂದೆನು. ಆಗ ಅದು ಅಚ್ಚಿ ಹೇಳಿಕೊಟ್ಟದ್ದನ್ನ ಮರೆತು— 'ಮುತ್ತು ಕೊಟ್ಟೇನು—ಕತೆ ಹೇಳೆ, ಅಚ್ಚಿ ಮುತ್ತು ಕೊಟ್ಟೇನೆ' ಎಂದಿತು. ಅಚ್ಚಿಗೆ ಬಲು ರೇಗಿತು. ಅಳುತ್ತ ಓಡಿ ಹೋದಳು. ಅಂದಿನಿಂದ ಎರಡು ಮೂರು ದಿನ ಅವಳು ಗಿಳಿಯನ್ನು ಮುಟ್ಟುತ್ತಿರಲಿಲ್ಲ.

ನಾಲ್ಕಾರು ವರುಷಗಳು ಕಳೆದವು. ಪಂಚರಂಗಿನ ಗಿಳಿಗೆ ನಾವಿನ್ನೇನನ್ನೂ ಹೇಳಿಕೊಟ್ಟಿರಲಿಲ್ಲ, ಆದರೂ ಅದು ಏನೇನೋ ಹೊಸದಾಗಿ ಹೇಳಿತು. "ಅಚ್ಚಿ, ನಿನ್ನ ಮದುವೇಲಿ ಜೊತೆ ಇದ್ದು ಹೇಳುವುದಕ್ಕೆ ಉರಟಣಿ ಹಾಡು ಹೇಳಿಕೊಟ್ಟದ್ದಿಯಾ?' ಎಂದು ಅವಳನ್ನು ಕರೆದು ಹಾಸ್ಯಮಾಡಿದೆವು. ಅವಳು ನಾಚಿ 'ಇಲ್ಲಪ್ಪ' ಎಂದಳು.

ಅಪ್ಪ:—ಮತ್ತೆ ಗಂಡ ಬಂದಾಗ್ಗ ಜೊತೇಗೆ ಹೇಳೋರು ಯಾರು?

ಅಮ್ಮ:—ಇಲ್ಲ ಕಣೆ, ಕೇಳು ಏನೇನು ಹೇಳುತ್ತೆ.

ನಾನು ಆಗ ಅದನ್ನ ಕೈಮೇಲೆ ಕೂರಿಸಿಕೊಂಡು 'ಏನೋ ಮುದ್ರಾಮು—ಅಚ್ಚೀಗೆ ಮುತ್ತು ಕೊಟ್ಟೇಯ?' ಎಂದೆನು ಆಗ ಅಚ್ಚಿ 'ಮಾಡಿ ಹಾಸ್ಯ ಮಾಡಿ' ಅಂತ ಅಳುವುದರಲ್ಲಿದ್ದಳು. ಗಿಳಿ ತಲೆ ಓರೆಮಾಡಿ 'ಸದ್ದೊ, ಸದ್ದೊ ಎದ್ದಾರೊ, ಸದ್ದೊ, ಸದ್ದೊ ಎದ್ದಾರೋ' ಎಂದಿತು. ಇದನ್ನು ಯಾರು ಹೇಳಿಕೊಟ್ಟವರು. ನಾವಾರೂ ಏನೇನೂ ಈ ಮಾದರಿಯಾಗಿ ಹೇಳಿಕೊಟ್ಟಿರಲಿಲ್ಲ. ಹಾಗಾದರೆ ಯಾರು ಕಲಿಸಿದವರು.

ಆಗ ಅಚ್ಚಕ್ಕನ ಮದುವೆಗೆ ಬೇಕಾದಷ್ಟು ಒಡವೆ, ಉಡುಗೊರೆ ಬಟ್ಟೆಗಳನ್ನು ತಂದುಹಾಕಿದ್ದರು. ಅವನ್ನೆಲ್ಲ ಜೋಡಿಸಿಟ್ಟು

ನಾನು ಹೊರಗಡೆ ಕೋಣೆಯಲ್ಲಿ ಮಲಗಿದ್ದೆನು. ಗಿಳಿಯ ಪಂಜರ ವನ್ನು ಮನೆ ಚೌಕಿಯ ಕಿಟಕಿಗೆ ಎದುರಾಗಿ ನೇತುಹಾಕಿದ್ದೆವು. ಅರ್ಧ ರಾತ್ರಿಯ ಸಮಯಕ್ಕೆ ಏನೋ ಬೆಳಕು ಹತ್ತಿ ಆರಿದ ಹಾಗಾಯಿತು. ಮಿಣುಕು-ಹುಳುವೆಂದು ನಾನು ಸುಮ್ಮನಿದ್ದೆ. ಮುದ್ದುರಾಮು ಎಚ್ಚತ್ತು ರೆಕ್ಕೆ ಬಡಿಯಿತು. 'ಅಚ್ಚಿ ಮುತ್ತು ಕೊಟ್ಟೇನು ಕತೇ ಹೇಳೇ-' ಎಂತ ಎರಡು ಮೂರು ಸಾರಿ ಹೇಳಿ ಸುಮ್ಮನಾಯಿತು. ಹೊರಗೆ ಮತ್ತೊಂದು ಸಾರಿ ಬೆಳಕಾಯಿತು. ಪಿಸಿಮಾತಿನ ದನಿ ಕೇಳಿತು: 'ಸದ್ದೂ ಸದ್ದು' ಎಂತ ಒಬ್ಬನೆಂದರೆ ಇನ್ನೊಬ್ಬನು 'ಯಾರೋ ಎದ್ದಿದ್ದಾರೊ ನಡಿ' ಎಂದ ಹಾಗಾ ಯಿತು. ನಾನು ಅಪ್ಪನ್ನ ಕೂಗಿದೆ, ಅಷ್ಟೊತ್ತಿಗೆ ಹಜಾರದಲ್ಲಿ ಪಟಾ ಪಟ ಹೆಜ್ಜೆಯ ಸದ್ದಾಯಿತು. ಆ ರಾತ್ರಿ ಕೈಗೆ ಯಾರೂ ಸಿಕ್ಕಲಿಲ್ಲ.

ಬೆಳಗ್ಗೆ ನಮ್ಮೆಲ್ಲರಿಗೆ ಎಷ್ಟೋ ಸಂತೋಷ—ಮುದ್ದು ರಾಮು ನಮ್ಮನ್ನ ಬದುಕಿಸಿತು ಎಂದುಕೊಂಡೆವು. ಪೊಲೀಸಿಗೆ ತಿಳಿಸಿ ಬಾಂದಿಯನ್ನು ರಾತ್ರಿ ಮನೆಯಲ್ಲಿ ಮಲಗಿಸಿಕೊಂಡು ಒಂದೆರಡು ದಿನ ಕಾದೆವು. ಗಿಳಿ ಎರಡು ರಾತ್ರಿಯೂ ಸುಮ್ಮನೇ ಇತ್ತು.

ಮೂರನೆಯ ರಾತ್ರಿ ನಮಗೆಲ್ಲ ಜೊಂಪು ಹತ್ತಿತ್ತು. ಆಗ ಮುದ್ದು ರಾಮು—'ಸದ್ದೂ! ಸದ್ದೂ! ಎದ್ದಿದ್ದಾರೆ!' ಎಂದು ಎರಡು ಮೂರು ಸಾರಿ ಹೇಳಿತು. ನಾನು ಸುಳುವು ತಿಳಿದು ಪೊಲೀಸಿನವರನ್ನು ಎಬ್ಬಿಸಿದೆನು. ಅಂತು ಆ ದಿನ ಐದು ಜನ ಕಳ್ಳರನ್ನು ಹಿಡಿದರು.

ಇಷ್ಟೊಂದು ಸಹಾಯಮಾಡಿದ ಗಿಳಿಯನ್ನು ನೋಡ ಬೇಕೆಂದು ಕಛೇರಿಯಲ್ಲಿ ಅಧಿಕಾರಿಗಳು ಹೇಳಿದರು. ನಾನದನ್ನು ತರಿಸಿದೆನು. ಆದರೆ ಅದು ಎಲ್ಲವನ್ನು ಮರೆತು ಮೂಕವಾಗಿತ್ತು. ನಾನು ಕೈಗೆ ತೆಗೆದುಕೊಂಡಮೇಲೆ 'ಅಚ್ಚಕ್ಕ ಮುತ್ತ ಕೊಟ್ಟೇನು.

ಕಥೆ ಹೇಳೆ' ಎಂದು ಎರಡಾವರ್ತಿ ಹೇಳಿತು. ಆಗ ಕಳ್ಳರ ಪೈಕಿ ಒಬ್ಬನು ಹಲ್ಲುಕಡಿದು ಗೊಣಗಿದನು. 'ಆ ಭೂತವೇ ನಮಗೆ ವಂಚನೆ ಮಾಡಿದ್ದು !'

ಈ ಕಥೆಯೆಲ್ಲ ನಡೆದು ಬಲು ವರ್ಷಗಳಾದುವು. ಅಚ್ಚಕ್ಕ ಈಗ ನಾಲ್ಕುಮಕ್ಕಳ ತಾಯಿ. ಈಗಲೂ ಕೂಡ ಅವಳು-' ಮುದ್ದು ರಾಮು ಏನು ಬೇಕೋ?' ಎಂದರೆ 'ಕಥೇ ಹೇಳೆ' ಎನ್ನುವುದು. ಅವಳದನ್ನು ಪಂಜರದಿಂದ ಈಚೆಗೆ ತೆಗೆದು ಕೈಮೇಲೆ ಕೂರಿಸಿ ಕೊಂಡು 'ನೀನೇನು ಕೊಡುವಿಯಪ್ಪ! ನನಗೆ?' ಎನ್ನುವಳು. ಅದು 'ಮುತ್ತು ಅಚ್ಚಕ್ಕ' ಎನ್ನುವುದು.

ನಿನ್ನೆಯ ದಿನ ಸಂಕ್ರಾಂತಿಯ ಹಬ್ಬ. ಎರಡು ಮೂರು ದಿನದಿಂದ ಕೊರಗುತ್ತಿದ್ದ ಮುದ್ದು ರಾಮುವು ಈಗ ಕಣ್ಣು ಮುಚ್ಚಿಕೊಂಡಿದೆ. ಸಾಯುವುದಕ್ಕೆ ಮುಂಚೆ—'ಅಚ್ಚಿ, ಅಚ್ಚಕ್ಕ ಕಥೆ ಹೇಳೇ ? ಸದ್ದೂ ಸದ್ದು ಎದ್ದಿದ್ದಾರೆ' ಎಂದು ರೆಕ್ಕೆ ಬಡಿದು ನನ್ನ ಹಾಸಿಗೆಯ ಮೇಲೆ ಸತ್ತುಬಿದ್ದಿದೆ.

ಈಗ ತಾನೆ ಅಚ್ಚಕ್ಕನ ಕಡೆಯಿಂದ ಪುಟ್ಟದೊಂದು ಬಾಂಗಿ ಬಂತು. 'ಮುದ್ದುರಾಮೂ ಕಾಲಿಗೆ ಇದನ್ನು ಇಡು' ಎಂದು ಒಂದು ಪುಟ್ಟ ಬಂಗಾರದ ಗೊಲಸನ್ನು ಕಳಿಸಿದ್ದಾಳೆ. ಅವಳಿಗೆ ಏನು ಉತ್ತರ ಬರೆಯಲಿ ?

ಅಕ್ಕಸಾಲಿಯ ಆಸೆ

ಒಂದು ಊರು. ಆ ಊರಿನಲ್ಲಿ ತುಂಬ ಜನರಿದ್ದರು. ಅವರೆಲ್ಲ ತಮ್ಮ ತಮ್ಮ ಕೆಲಸಮಾಡಿಕೊಂಡು ಸುಖವಾಗಿದ್ದರು. ಆದರೆ ಅಲ್ಲಿ ಒಂದು ಮನೆಯಲ್ಲಿ ಒಬ್ಬ ಬಡಗಿ ಸುಖವಾಗಿರಲಿಲ್ಲ.

ಅವನು ಒಳ್ಳೆಯದೊಂದು ಕುರ್ಚಿ, ಒಂದು ಮೇಜ ಮತ್ತು ಪೆಟ್ಟಿಗೆಯೊಂದನ್ನು ಮಾಡಿದ್ದನು. ಅವು ಮೂರು ಆ ಊರಿನ ಪಂಚಾಯಿತಿ ಸಭೆಗೆ ಬೇಕಾಗಿತ್ತು. ಈ ಬಡಗಿ ಆ ಪಂಚಾಯಿತಿ ಸಭೆಗೆ ಅವನ್ನು ಕೊಟ್ಟಿದ್ದರೂ ಅವನಿಗೆ ಹಣ ಮಾತ್ರ ಸಂದಿರಲಿಲ್ಲ. ಕುರ್ಚಿ, ಮೇಜ, ಪೆಟ್ಟಿಗೆ ಮೂರನ್ನೂ ತೆಗೆದುಕೊಂಡವರು ಹಣಕೊಡಲಿಲ್ಲವೇಕೆ?

ಹಣ ಕೊಡಲಿಲ್ಲವೇಕೆಂದರೆ ಆ ಕುರ್ಚಿಯಲ್ಲಿ ಕುಳಿತ ಪಂಚಾಯಿತಿ ಮನುಷ್ಯನಿಗೆ ಏನೋ ಬೇನೆ, ದಿನವೆಲ್ಲ ಬೇನೆ! ಆ ಮೇಜಿನ ಸುತ್ತ ಕುಳಿತವರಿಗೆ ದಿಕ್ಕೇ ತೋಚುತ್ತಿರಲಿಲ್ಲ; ಏನಾದರೂ ಬರೆದು ಪಟ್ಟಮಾಡಿ ಕಳಿಸಿದರೆ ಶೇಕದಾರರು ಮತ್ತು ಅಮಲ್ದಾರರ ಕೈಲಿ ಬೈಸಿಕೊಂಡು ಶಿಕ್ಷೆ ಹೊಂದುತ್ತಿದ್ದರು! ಮತ್ತೆ ಆ ಪೆಟ್ಟಿಗೆ ಇತ್ತಲ್ಲವೆ? ಆ ಪೆಟ್ಟಿಗೆಯಲ್ಲಿ ಎಷ್ಟು ಹಣ ತಂದಿಟ್ಟರೂ ಅದಷ್ಟೂ ಏನಾದರೂ ನೆಪದಿಂದ ಖರ್ಚಾಗಿ ಹೋಗುತ್ತಿತ್ತು! ಆದುದರಿಂದ ಆ ಪಂಚಾಯಿತಿಯವರು ಸಿಟ್ಟಾಗಿ ಈ ಬಡಗಿಯ ಕುರ್ಚಿ, ಮೇಜ ಮತ್ತು ಪೆಟ್ಟಿಗೆಗಳಿಗೆ ಹಣ ಕೊಡಬಾರದೆಂದು ಹಟ ಹಿಡಿದರು.

ಬಡಗಿ ಈ ವಿಚಾರವನ್ನು ತನ್ನ ಹೆಂಡತಿಗೆ ಹೇಳಿದನು. ಗಂಡ ಹೆಂಡತಿಯರು ಬಹಳ ಯೋಚಿಸಿದರು. ಏನು ಉಪಾಯವೂ ತೋರಲಿಲ್ಲ. ಅತ್ತಲಾಗಿ ಪಂಚಾಯಿತಿಯವರು ಏನು ಹೇಳಿದರೂ ಕೇಳಲಿಲ್ಲ: ಇತ್ತಲಾಗಿ ಬೇರೆ ಕುರ್ಚಿ, ಮೇಜ, ಪೆಟ್ಟಿಗೆ ಮಾಡುವುದಕ್ಕೆ ಬಡಗಿಯ ಹತ್ತಿರ ಸಾಮಾನು ಇರಲಿಲ್ಲ.

ಹೆಂಡತಿ ಎದ್ದು ಕೆಲಸಕ್ಕೆ ಹೋದಳು. ಅಡುಗೆ ಮಾಡದಿದ್ದರಾದೀತೆ? ಸಂಜೆಗೆ ಏನಾದರೂ ಹೇಗಾದರೂ ಅಡಿಗೆ ಮಾಡಬೇಡವೇ? ಹೊಟ್ಟೆ ಕೇಳುತ್ತದೆಯೇ ಸುಮ್ಮನಿದ್ದರೆ!

ಗಂಡನಾದ ಬಡಗಿ ಅಲ್ಲೇ ಕೂತುಬಿಟ್ಟನು "ಏನು ಮಾಡಲಿ, ಹೇಗೆ ತರಲಿ ! ಅಯ್ಯೋ ನನ್ನ ಮನೆದೇವರೇ, ಅಯ್ಯೋ ತಾಯಿ ಭವಾನಿ ! " ಎಂದು ಕಿರಿಚುತ್ತಾ ತನ್ನ ತಲೆಕೂದಲನ್ನು ಹಿಡಿದೆಳೆದು ಕೊಂಡು, ತಲೆಯನ್ನು ಗೋಡೆಗೆ ಚಚ್ಚಿಕೊಂಡನು. ಆಗ ಏನೋ ಆಗಿಹೋಯಿತು, ಚಿತ್ರ ವಿಚಿತ್ರ.

ಬಡಗಿಯ ಎದುರಿನಲ್ಲಿ ಒಂದು ದೇವತೆ ಬಂದು ನಿಂತಿತು. ಇವನು ಕಣ್ಣು ಬಿಟ್ಟಿದ್ದರೆ ಏನೇನು ಕಾಣುತಿತ್ತೊ ನನಗೆ ಗೊತ್ತಿಲ್ಲ. ಇವನು, ಈ ಬಡಗಿ, ಕಣ್ಣು ಬಿಡದಿದ್ದರೂ ಇಷ್ಟು ಮಾತ್ರ ಅವನ ಕಿವಿಗೆ ಕೇಳಿಸಿತು—" ಲೋ, ಬಡಗಿ, ಎದ್ದೇಳು. ನಾನು ಈ ಮನೆಯ ಮನೆದೇವರು. ನನಗೆ ನೀನು ಅನ್ನ ಹಾಕಲಿಲ್ಲ. ಈಗಲೇ ಏಳು, ನನ್ನ ಹೆಸರಿನಲ್ಲಿ ಹತ್ತು ಜನಕ್ಕೆ ಅನ್ನ ಹಾಕು ! "

ಆಗ ಬಡಗಿಗೆ ಬಹಳ ಸಿಟ್ಟು ಬಂದಿತು–" ಎಲೌ ಮನೆದೇವಿ, ತಿಳಿದೂ ಹಿಂಸೆ ಮಾಡುವಿಯಾ ? ಆ ನನ್ನ ಮೇಜ, ಕುರ್ಚಿ, ಪೆಟ್ಟಿಗೆ ಗಳಿಗೆಲ್ಲ ಶಾಪ ಹಾಕಿ ಹಾಳು ಮಾಡಿದೆ. ಅವುಗಳ ಹಣ ಇನ್ನೂ ಬಂದಿಲ್ಲ. ಮನೆಯಲ್ಲಿ ಕಾಸಿಲ್ಲ, ಹಾಗು ಕಾಳಿಲ್ಲ ! ನಾನು ಅನ್ನ ಹೇಗೆ ಹಾಕಲಿ ! ನನ್ನ ಕೈತುಂಬ ಹಣ ಬರಲಿ—ಮನೆ ತುಂಬ ಕಾಳು ತುಂಬಿಸುತ್ತೇನೆ. ಆಗ ನನ್ನ ಹೆಂಡತಿ ನಿನ್ನ ಹೆಸರಿನಲ್ಲಿ ಏನು ಬೇಕಾದರೂ ಅಡಿಗೆ ಮಾಡಿ ಎಷ್ಟು ಜನಕ್ಕಾದರೂ ಬಡಿ ಸುತ್ತಾಳೆ. ಹಾಗೆ ಅನುಗ್ರಹ ಮಾಡುವುದನ್ನು ಬಿಟ್ಟು ಹೀಗೆಲ್ಲ ಹೀಯಾಳಿಸುತ್ತೀಯಲ್ಲ ! ಇದು ನಿನಗೆ ಸರಿಯೇ ? " ಎಂದು ಸಿಡಿಗುಟ್ಟಿ ನುಡಿದನು.

ಆಗ ಆ ಮನೆದೇವಿ ಹೇಳಿದಳು—" ಹಾಗಿದ್ದರೆ, ಎದ್ದೇಳು. ಇಲ್ಲಿ ಇನ್ನು ಕೂರಬೇಡ. ನಿನ್ನ ಮೂಗಿನ ನೇರಕ್ಕೆ ಹೋಗು. ಮೂರು ದಿನ ಹೋಗು. ನಾಲ್ಕನೆಯ ಬೆಳಗ್ಗೆ ನಿನ್ನ ಎದುರಿನಲ್ಲಿ

ಒಂದು ದೊಡ್ಡ ಹೊನ್ನೇಮರ ನಿಂತಿರುತ್ತದೆ. ಅದು ಎಲ್ಲ ಮರಗಳಿಗೂ ರಾಣಿ. ಎತ್ತರವಾಗಿ, ದಪ್ಪನಾಗಿ ನಿಂತಿರುತ್ತದೆ. ಅದನ್ನು ಕತ್ತರಿಸು. ನಿನಗೆ ಅನುಕೂಲವಾಗುತ್ತದೆ. ಇನ್ನು ಮೇಲಾದರೂ ನನ್ನ ಹೆಸರಿನಲ್ಲಿ ವರ್ಷೇವರ್ಷೇ ಅನ್ನ ಹಾಕು. ಏಳು ಎದ್ದೇಳು. ಪಂಚಾಯಿತಿಯವರು ನಿನ್ನ ಹಣವನ್ನು ಈಗಲೇ ಎಣಿಸಿ ಕೊಡುತ್ತಾರೆ. ನಡಿ, ಬುತ್ತಿ ಕಟ್ಟಿಕೊ! ಹೊರಡು!"

ಆ ವೇಳೆಗೆ ಇವನು ಕಣ್ಣು ಬಿಟ್ಟನು. ಇದಾರಿರಬಹುದು, ಈ ಮನೆದೇವಿ ಎಂದು ನೋಡಿದರೆ ಅಲ್ಲಿ ಎದುರಲ್ಲಿ ಯಾರೂ ಕಾಣಲಿಲ್ಲ. ದೂರದಲ್ಲಿ ಪಂಚಾಯಿತಿ ಆಳು ಬರುತ್ತ ಇದ್ದ. ಅವನು ಈ ಬಡಗಿಗೆ ಹೀಗೆಂದ–" ಏ ಬಡಗಿ, ನಿನ್ನ ಹಣವಂತೆ! ಹಿಡಿ! ಈಗ ತಾನೆ, ಆ ಕುರ್ಚಿಯಲ್ಲಿ ಕೂತಿದ್ದವರಿಗೆ ತುಂಬಾ ಸಂತೋಷವಾಗಿ, ಆ ಮೇಜಿನ ಮೇಲಿದ್ದ ಕಾಗದಕ್ಕೆ ತುಂಬಾ ಬೆಲೆ ಬಂದು, ಆ ಪೆಟ್ಟಿಗೆಯಲ್ಲಿ ತುಂಬಾ ಹಣ ಮಿಕ್ಕುಹೋಗಿದೆ, ನಿನಗೇಂತ ಈ ಹಣ ಕಳಿಸಿದ್ದಾರೆ. ಹಿಡಿ!" ಎಂದು ಹಣ ಎಣಿಸಿ ಹೊರಟುಹೇಸೀದನು.

ಆ ಕೂಡಲೇ, ಆ ಬಡಗಿ ಅಂಗಡಿಗೆ ಹೋಗಿ ಬೇಕಾದ ಸಾಮಾನೆಲ್ಲ ತಂದು ಅಡಿಗೆ ಮಾಡಿಸಿ, ಹತ್ತು ಜನಕ್ಕೆ ಅನ್ನ ಹಾಕಿಸಿ, ತಾನು ಬುತ್ತಿಕಟ್ಟಿಕೊಂಡು ಹೊನ್ನೇ ಮರದ ಬಳಿಗೆ ಮರುದಿನ ಯಾತ್ರೆ ಹೊರಟನು.

ಬಡಗಿ ಹೋದ, ಹೋದ, ಹೋದ; ಮೂರು ಹಗಲು ಮೂರು ರಾತ್ರಿ ಕಳೆದುವು. ಅನಂತರ ಸೂರ್ಯನು ಮೂಡಲ ದಿಕ್ಕಿನಲ್ಲಿ ಮೂಡುವ ಸಮಯಕ್ಕೆ ಒಂದು ಹೊನ್ನೆಯ ಮರದ ಬಳಿಗೆ ಬಂದನು. ಆ ಮರ ಬಹು ದೊಡ್ಡದು, ಬಹು ಎತ್ತರವಾಗಿತ್ತು. ಎಲ್ಲಾ ಮರಗಳ ತಲೆಯನ್ನೂ ಮೆಟ್ಟಿ ನಿಂತು ಎಲ್ಲ

ರಿಗೂ ರಾಣಿಯಾಗಿತ್ತು. ಆ ಬಡಗಿ ಅಲ್ಲಿ ಹೋಗಿ ನಿಂತಾಗ ಸೂರ್ಯನ ಬೆಳಕು ಗುಲಾಬಿಯಾಗಿತ್ತು. ಹಕ್ಕಿಗಳ ಕೂಗು ಸಂಗೀತವಾಗಿತ್ತು. ಹೂಗಳ ವಾಸನೆ ಸೊಗಸಾದ ಪರಿಮಳ ವಾಗಿತ್ತು. ಎಲೆಗಳ ಮೇಲೆ ಹಿಮದ ನೀರು ಮಣಿ ಮಣಿಯಾಗಿ ನಿಂತು ನೆಲದಮೇಲೆ ಉದುರುತ್ತಿತ್ತು. ಬಡಗಿ ಮರದಬಳಿಗೆ ಹೋಗಿ ನಿಂತು ನೋಡಿದ. ಮನೆದೇವರು ಹೇಳಿದ ಮರವೂ ಅದೇ ಆಗಿತ್ತು. ತನ್ನ ಮನೆದೇವರು ಹೇಳಿದ್ದನ್ನು ಆ ಮರಕ್ಕೆ ಹೇಳಿ ಒಂದು ಪ್ರದಕ್ಷಿಣೆ ಬಂದನು. ಆಗ ಆ ಮರ ಜಲ್ ಜಲ್ ಎಂದು ಮೈಕೊಡವಿದ ಹಾಗಾಯಿತು. ಅದರಲ್ಲಿದ್ದ ಹೂವು ಕಾಯಿಗಳೆಲ್ಲ ಉದುರಿದುವು. ಹಣ್ಣಾದ ಎಲೆಗಳೆಲ್ಲ ಉದುರಿ ಹಾರಿಹೋದವು. ಆಗ ಆ ಮರವು ಹೀಗೆಂದಿತು—"ಎಲೆ ಬಡಗಿ, ಎಲೆ ಮಗನೇ, ಇನ್ನು ಮೂರು ದಿನ ಮುಂದೆ ಹೋಗು, ಆಗೊಂದು ಬಾವಿ ಸಿಗುತ್ತದೆ. ಅದರೊಳಗೆ ನನ್ನ ಬೇರು ಇಳಿದುಹೋಗಿದೆ. ನೀನು ಆ ಬಾವಿಯಲ್ಲಿ ಸ್ನಾನಮಾಡಿ ನನ್ನ ಆ ಬೇರನ್ನು ಎತ್ತಿ ನೆಲದಮೇಲೆ ಹಾಕು. ಅಲ್ಲಿಂದ ಇತ್ತ ಹಿಂತಿರುಗಿ ಬಾ. ನಿನ್ನ ಆಸೆ ಪೂರೈಸುತ್ತದೆ."

ಬಡಗಿ ಇನ್ನೂ ಮುಂದೆ ಹೋಗಿ ಮೂರು ದಿನ ಯಾತ್ರೆ ಮಾಡಿ ಆ ಬಾವಿಯಲ್ಲಿ ಮಿಂದು, ಬುತ್ತಿಯುಂಡು ಆ ಹೊನ್ನೇ ಮರದ ಬೇರನ್ನ ಎತ್ತಿ ಮೇಲೆ ಹಾಕಿ, ಅಲ್ಲಿಂದ ಹಿಂತಿರುಗಿದನು.

ಹಿಂದೆ ಬರುವವೇಳೆಗೆ ಆ ಹೊನ್ನೇಮರವು ಒಣಗಿಹೋಗಿತ್ತು. ಬಡಗಿ ಹೊನ್ನೇಮರವನ್ನು ಕಡಿಯುವಾಗ ಕಾಡಿಗೆ ಕಾಡೇ ನಡುಗಿ ಹೋಯಿತು. ಬಡಗಿ ಹಿಂತಿರುಗಿ ಬರುವವೇಳೆಗೆ ಆ ಮರದಲ್ಲಿದ್ದ ಪ್ರಾಣಿ, ಪಕ್ಷಿ, ಇರುವೆ, ಜೇನು ಇವೆಲ್ಲ ಜೇರೆ ಕಡೆ ಹೊರಟುಹೋಗಿ ಮನೆಮಾಡಿಕೊಂಡಿದ್ದವು. ಹೊನ್ನೇಮರವು ಬೀಳುವ ವೇಳೆಗೆ

ಉಳಿದ ಮರಗಳೆಲ್ಲ ಓರೆಯಾಗಿ ಅತ್ತ ಇತ್ತ ಬಾಗಿದವು. ಉರುಳಿದ ಮರದ ತುದಿಯನ್ನು ನೋಡೋಣವೆಂದು ಆ ಬಡಗಿ ಅದರ ಬಳಿ ಹೋದಾಗ-ಅಲ್ಲೇನು ಕಂಡನು?

ಮರದಿಂದ ಎರಡು ದೊಡ್ಡ ಮೊಟ್ಟೆಗಳು ಉರುಳಿ ಕೆಳಗೆ ಬಿದ್ದಿದ್ದವು. "ಅಯ್ಯೋ ಮೊಟ್ಟೆಗಳೆ-ಒಡೆದುಹೋದುವೆ-ಅನ್ಯಾಯವಾದುವೆ?" ಎಂದು ಹತ್ತಿರ ಹೋಗಿ ಬಾಗಿ ನಿಂತು ನೋಡುತ್ತಿದ್ದನು.

ಆ ಮೊಟ್ಟೆಗಳೆರಡೂ ಒಡೆದುಹೋಗಿದ್ದವು. ಒಂದು ಮೊಟ್ಟೆಯಿಂದ ಒಂದು ಹಕ್ಕಿಯ ಮರಿ ಆಗ ತಾನೆ ಹೊರಗೆ ಚಿಲಪಿಲನೆಂದು ಬಂದುಬಿಟ್ಟಿತು. ಬಡಗಿಯು ಆ ಮೊಟ್ಟೆಯಿಂದ ಬಂದ ಆ ಪುಟ್ಟ ಹಕ್ಕಿಯನ್ನು ನೋಡುತ್ತಿದ್ದಂತೆಯೇ ಅದಕ್ಕೆ ಗರಿಗಳು ಮೊಳೆತವು. ಸ್ವಲ್ಪ ಹೊತ್ತಿನಲ್ಲಿಯೇ ರೆಕ್ಕೆ ಪುಕ್ಕಗಳು ಕಂಡುಬಂದುವು. ಹಕ್ಕಿ ನೆಲವನ್ನು ಬಿಟ್ಟು ಮೇಲೇರಿ ಹಾರಿಹೋಯಿತು. ಮೇಲೆ ಮೇಲೆ ಹೋಗುತ್ತಾ ಹಾಡಿಕೊಂಡು ಹೋಗುತ್ತಿತ್ತು. ಸ್ವಲ್ಪ ಹೊತ್ತಿನಮೇಲೆ ಹಾಡು ನಿಂತು ಈ ಮಾತುಗಳು ಕೇಳಿಬಂದವು— "ಅಯ್ಯೋ ಬಡಗಿ, ನನ್ನ ಆಸೆ ಬಿಡು. ಅಲ್ಲಿ ಬಿದ್ದಿರುವ ಇನ್ನೊಂದು ಮೊಟ್ಟೆಯಲ್ಲಿ ಒಂದು ಉಂಗುರವಿದೆ. ಅದನ್ನು ತೆಗೆದುಕೊಂಡು ಹೋಗು. ಅದೊಂದು **ವರದುಂಗುರ.** ಅದರಿಂದ ನಿನಗೆ ಬೇಕಾದ ಯಾವುದಾದರೊಂದು ವರವನ್ನು ಪಡೆದುಕೋ. **ಒಂದೇ ವರ,** ನೆನಪಿರಲಿ. ಮತ್ತೊಂದಿಲ್ಲ. ನಾನು ಹೊರಟೆ. ಈ ಮೊಟ್ಟೆಯಿಂದ ನಾನು ಹೊರಗೆ ಬರಲು ನೀನು ಸಹಾಯಮಾಡಿದ್ದೀಯೆ. ಅದಕ್ಕಾಗಿ ಅದು ನನ್ನ ಬಹುಮಾನ ನಿನಗೆ" ಹೀಗೆಂದು ಹೇಳಿ ಆ ಹಕ್ಕಿ ಹದ್ದಿನ ಹಾಗೆ ಅಂತರಿಕ್ಷದಲ್ಲಿ ಹಾರಿಹೋಯಿತು.

ಬಡಗಿಯು ಇತ್ತ ಕಡೆ ನೋಡಿದನು. ಅಲ್ಲೊಂದು ಉಂಗುರ

ಏತ್ತು. ಅದನ್ನು ಕೈಗಿಟ್ಟುಕೊಂಡನು. ಆ ಮರವನ್ನು ಅಲ್ಲೇ ಮರೆತನು. ಹಿಂತಿರುಗಿ ತನ್ನ ಊರಿಗೆ ಹೊರಟನು.

ಊರಿಗೆ ಹೊರಟನೆಂದು ಹೇಳಿದೆನು. ಊರು ತಲುಪುವ ಮುಂಚೆ ಇನ್ನೊಂದೂರು ಸಿಕ್ಕಿತು.

ಬಡಗಿ ತನ್ನ ಉಂಗುರವನ್ನು ಬೆರಳಿಗೆ ಇಟ್ಟುಕೊಂಡು ತಿರುಗಿಸಿ ತಿರುಗಿಸಿ ನೋಡಿಕೊಳ್ಳುತ್ತಾ ಹೊರಟನು.—"ವರದುಂಗುರ! ವರದುಂಗುರ! ಆದರೆ ಒಂದೇ ವರ. ಒಳ್ಳೇ ವರವನ್ನೇ ಕೇಳಬೇಕು. ಹೆಚ್ಚು ವರಗಳನ್ನು ಕೇಳುವಂತಿಲ್ಲ. ಒಂದೇ ವರ, ಕಡೇ ಆಸೆಯನ್ನು ಕೊಡುವಂಥಾ ಒಂದೇವರ! ಆದುದರಿಂದ ಏನು ಕೇಳಬೇಕು? ನನ್ನಾಕೆ ಇರುವಲ್ಲಿಗೆ ಹೋಗಿ ಅವಳನ್ನು ಕೇಳಿ, ಈ ಉಂಗುರದ ವರವನ್ನು ನಿಶ್ಚಯಿಸೋಣ"—ಹೀಗೆ ಯೋಚಿಸಿಕೊಳ್ಳುತ್ತ ಬರುತ್ತಿದ್ದನು.

ಆಗ ನಡುವೆ ಸಿಕ್ಕಿದ ಊರಿನಲ್ಲಿ ಒಬ್ಬ ಅಕ್ಕಸಾಲಿ ಒಂದು ಜಗಲಿಯಮೇಲೆ ಕುಳಿತು—"ಕೊಟ್ಟಾ, ಕೊಟ್ಟಾ, ಕೊಟ್ಟೋನು ಕೆಟ್ಟ, ಕೊಟ್ಟಾ ಕೊಟ್ಟಾ!" ಎಂತ ಸುತ್ತಿಗೆಯಿಂದ ಬಡಿಯುತ್ತ ಇದ್ದ. ಇದ್ದಕ್ಕಿದ್ದ ಹಾಗೆ ನಮ್ಮ ಬಡಗಿಗೆ ಏನೋ ಹೆಮ್ಮೆ ಬಂತು. ಜಗುಲಿಯಮೇಲಿದ್ದ ಅಕ್ಕಸಾಲಿಯ ಬಳಿಗೆ ಹೋಗಿ—"ಏನಯ್ಯಾ, ನೀನೇನು ಮಹಾ ಬುದ್ಧಿವಂತನೇನಯ್ಯಾ? ಹಾಗಿದ್ದರೆ, ನೋಡು ಈ ಉಂಗುರವನ್ನ! ಇದರ ಬೆಲೆ ಎಷ್ಟು ಹೇಳು ನೋಡೋಣ!"—ಎಂದನು.

ಅಕ್ಕಸಾಲಿಯು ಆ ಉಂಗುರವನ್ನು ತೆಗೆದುಕೊಂಡು ಆ ಮಾತು ಈ ಮಾತು ಆಡುತ್ತ ಉಜ್ಜಲಾರಂಭಿಸಿದನು. ಅದು ನೋಡುವುದಕ್ಕೆ ಬಂಗಾರದ ಹಾಗೆ ಇದ್ದರೂ ಉಜ್ಜಿದಾಗ ಒರೆಗಲ್ಲು ಸವೆಯಿತೇ ಹೊರತು, ಬಂಗಾರ ಸವೆಯಲಿಲ್ಲ. ಆಗ

ಅಕ್ಕಸಾಲಿ ಹೇಳಿದನು.—"ಎಲ ಎಲಾ ಬಡಗಿ! ಇದೆಲ್ಲಿ ಮೋಸ ಹೋದೆ! ಇದು ಬಂಗಾರವೇ ಅಲ್ಲ. ಕುರುಡು- ಕಾಸಿಗೂ ಹೋಗುವುದಿಲ್ಲ ಇದು. ಯಾರೋ ಮೋಸಮಾಡಿದ್ದಾರಯ್ಯಾ ನಿನಗೆ!"

ಬಡಗಿ ಹೇಳಿದನು–"ಮೋಸವಲ್ಲಯ್ಯಾ! ಇದು ಮನುಷ್ಯರು ಮಾಡಿದ್ದಲ್ಲ. ಮೊದಲು ನನ್ನ ಕೈಗೆ ಕೊಡು, ಇದನ್ನ ನಿನ್ನ ಕೈಗೆ ಕೊಟ್ಟದ್ದೇ ತಪ್ಪು. ಇಲ್ಲಿ ತಾ!" ಹೀಗೆಂದು ತನ್ನ ಕೈಗೆ ತೆಗೆದು ಕೊಂಡು ಬೆರಳಿಗೆ ಇಟ್ಟುಕೊಂಡು, ಅದನ್ನು ತಿರುತಿರುಗಿಸಿ ನೋಡುತ್ತಾ ಬಲು ಹೆಮ್ಮೆಪಡುತ್ತಾ ಅದರ ಕತೆಯನ್ನು ಅಕ್ಕಸಾಲಿಗೆ ವಿವರಿಸಿದನು. ಅಕ್ಕಸಾಲಿ ಆಶ್ಚರ್ಯದಿಂದ ಸುಮ್ಮನಾದನು.

ಬಡಗಿ ಹೊರಡುವ ಯತ್ನದಲ್ಲಿದ್ದನು. ಇನ್ನೇನು ಹೊರಟೇ ಬಿಟ್ಟನು! ಆಗ ಅಕ್ಕಸಾಲಿಗೆ ಏನೋ ಒಂದು ಯೋಚನೆ ಬಂದಿತು. ಆ ಕ್ಷಣವೇ ಜಗುಲಿಯಿಂದ ಇಳಿದು, ಬರಿಯಕಾಲಲ್ಲೇ ನಡೆದು ಬಡಗಿಯ ಬಳಿಗೆ ಬಂದು, ಕಾಲುಮುಟ್ಟಿ ನಮಸ್ಕಾರಮಾಡಿ ಹೇಳಿದನು. "ಮಹಾಸ್ವಾಮಿ, ತಾವು ದೊಡ್ಡವರು! ಮೊಟ್ಟೆಯು ಉಂಗುರಕೊಟ್ಟ ಕಥೆಯನ್ನು ಕೇಳಿ ನನಗಂತೂ ಅತ್ಯಾಶ್ಚರ್ಯವಾಗಿದೆ. ನಿಮ್ಮಂಥಾ ಪುಣ್ಯಾತ್ಮರು ನನ್ನ ಜಗುಲಿಗೆ ಬಂದು ವೃಥಾ ಹೋಗುವುದು ನನಗೆ ಶ್ರೇಯಸ್ಕರವಲ್ಲ. ದಯಮಾಡಿ ಬನ್ನಿ. ಈ ರಾತ್ರಿ ಇಲ್ಲಿ ತಂಗಿದ್ದು ನಾಳೆ ಬೆಳಗ್ಗೆ ಎದ್ದು ತಾವು ತಮ್ಮ ಊರಿಗೆ ಹಿಂತಿರುಗಬಹುದಲ್ಲವೆ? ದಯಮಾಡಿ ನನ್ನ ಮಾತಿಗೆ ಒಪ್ಪಿ ಬನ್ನಿರಿ!" ಹೀಗೆಂದು ವಿಧವಿಧವಾಗಿ ಬೇಡಿಕೊಂಡನು.

ಬಡಗಿ ಒಪ್ಪಿ ಅಕ್ಕಸಾಲಿಯ ಮನೆಯಲ್ಲಿ ಆ ರಾತ್ರಿ ಉಳಿದು ಕೊಂಡನು. ಮನೆಗೆ ಬಂದ ಬಡಗಿಗೆ ಚೆನ್ನಾಗಿ ನಿದ್ದೆಹತ್ತಿದ ಮೇಲೆ ಅಕ್ಕಸಾಲಿಯು ತನ್ನಲ್ಲಿದ್ದ ಒಂದು ಉಂಗುರವನ್ನು, ಉಜ್ಜಿ

ಸರಿಪಡಿಸಿ ವರದುಂಗರದಂತೆಯೆ ಮಾಡಿ ಬಡಗಿಯ ಬೆರಳಿಗೆ ಇಟ್ಟು ಆತನ ಹೆಮ್ಮೆಯ ಉಂಗುರವನ್ನು ಕೆಟ್ಟ ಆಸೆಯಿಂದ ತೆಗೆದುಕೊಂಡನು. ಆಮೇಲೆ ಅಕ್ಕಸಾಲಿಗಂತೂ ನಿದ್ದೆ ಹತ್ತಲಿಲ್ಲ. ಯಾವಾಗ ಬೆಳಗಾದೀತೋ, ಬಡಗಿಯನ್ನು ಯಾವಾಗ ಹೊರಗೆ ಕಳುಹಿಸಿಬಿಟ್ಟೇನೋ, ವರದುಂಗುರವನ್ನು ಯಾವಾಗ ಪರೀಕ್ಷೆಮಾಡಿಯೇನೋ-ಎಂದು ನಿದ್ದೆಯಿಲ್ಲದೆ ರಾತ್ರಿಯೆಲ್ಲ ಕಾದಿದ್ದನು.

ಬೆಳಗಿನ ಜಾವ. ನಿಧಾನವಾಗಿ ಏಳುವುದಕ್ಕೆ ಬಿಡದೆ ಬಡಗಿಯನ್ನು ಎಬ್ಬಿಸಿದನು. ಅವನಿಗೆ ಬಹಳ ಉಪಚಾರಮಾಡಿ, ತಿಂಡಿ ತೀರ್ಥಗಳನ್ನು ತಂದುಕೊಟ್ಟು "ಬಿಸಿಲೇರುವುದಕ್ಕೆ ಮೊದಲೇ ಹೊರಡಿ.ಇನ್ನೇನು ಬಿಸಿಲೇರುತ್ತದೆ. ಪಾಪ,ಮನೆ ಸೇರುವ ಹೊತ್ತಿಗೆ ಇನ್ನೆಷ್ಟು ದಣಿವಾದೀತೋ! ಮನೆಯುವರು ಪಾಪ, ಒಂದು ವಾರದಿಂದಲೂ ಕಾದಿರುವಹಾಗಿದೆ. ನೀವು ಹೊರಟು ಬಹಳ ದಿನವಾಗಿಲ್ಲವೆ? ಒಂದು ಕೊಂಚ ಬುತ್ತಿ ಕಟ್ಟಿಕೊಡೋಣವೆ?"-ಎಂದು ವಿಧವಿಧವಾಗಿ ಉಪಚರಿಸಿ, ಅವನನ್ನು ಬೇಗ ಮನೆಯಿಂದ ಹೊರಡಿಸಿದನು.

ಏನೂ ಅರಿಯದ ಆ ಬಡಗಿ ಉಂಗುರದ ಮಹಿಮೆಯೇ ಅದೆಂದು ಭಾವಿಸಿ ತನ್ನ ಕೈಲಿ ಉಂಗುರವಿದೆಯೆಂಬುದನ್ನು ಮಾತ್ರ ನೋಡಿಕೊಂಡು ತೃಪ್ತಿಪಟ್ಟು ಹೊರಟನು.

ಬಡಗಿಯು ಹೊರಟು ಹೋಗುವುದನ್ನೇ ಕಾದಿದ್ದ ಅಕ್ಕಸಾಲಿಯು ತನ್ನ ಹೆಂಡತಿ ಮಕ್ಕಳಿಗೆ ಕೂಡ ಹೇಳದೆ ಒಳಗೆ ಹೋಗಿ ಬಾಗಿಲು ಹಾಕಿಕೊಂಡನು. ಉಂಗುರವನ್ನು ಕೈಗೆ ತೆಗೆದುಕೊಂಡನು. ಅಂಗೈಯಲ್ಲಿ ಇಟ್ಟುಕೊಂಡನು. ಇನ್ನು ತನ್ನ ಆಸೆಯನ್ನು ಅದಕ್ಕೆ ಹೇಳಿ ವರವನ್ನು ಕೇಳಿಕೊಳ್ಳಬೇಕು. ಅಷ್ಟೇ ಉಳಿದಿತ್ತು.

ಬಹಳ ಯೋಚಿಸಿದನು. ಏನು ಕೇಳಬೇಕು. ಕೇಳುವುದಾದರೂ ಒಂದೇ ಒಂದು ವರ. ಅದು ಸರಿಯಾದ ವರವಾಗಿರಬೇಕು. ಇನ್ನೊಂದನ್ನು ಅಪೇಕ್ಷೆಪಡುವಂತೆ ಇರಲೇಬಾರದು. ಅದಕ್ಕಾಗಿ ಮೇಲೆ ಕೆಳಗೆ ನೋಡಿನೋಡಿ ಕಡೆಗೆ ಬಂಗಾರದ ನಾಣ್ಯಗಳನ್ನು ಕೇಳುವ ಆಸೆಯಿಂದ ಹೀಗೆ ಕೂಗಿದನು—"ಎಲೈ ಉಂಗುರ ದೇವತೆಯೆ, ನನಗೊಂದು ವರ ಕೊಡು. ನೂರುಕೋಟಿ ಬಂಗಾರದ ನಾಣ್ಯಗಳೇ ನನಗೆ ಬೇಕು. ಅದಿಷ್ಟು ಕೊಡಿಸು ಸಾಕು!" ಅಗ ನಾಣ್ಯಗಳು ಥಳಥಳ ಹೊಳೆಯುತ್ತ ಉದುರಲಾರಂಭಿಸಿದವು. ಅವು ಎಲ್ಲಿಂದ ಬಿದ್ದವೋ ಅವನಿಗೆ ಗೊತ್ತಾಗಲಿಲ್ಲ. ಅಂತು ಬೀಳಲಾರಂಭಿಸಿದವು.

"ಓಹೋ, ಬಂಗಾರದ ನಾಣ್ಯ!, ನೂರುಕೋಟಿ! ನಾನೇ ಪುಣ್ಯವಂತ! ಓಹೋ, ಎಷ್ಟು ದೊಡ್ಡ ನಾಣ್ಯಗಳು! ಎಷ್ಟು ತೂಕ! ಎಷ್ಟು ಸೊಗಸು—"ಹೀಗೆಂದು ಒರೆಹಚ್ಚಿ ನೋಡಿ ಕುಣಿದು ಕುಪ್ಪಳಿಸಿದನು. ಅವನ ನೆಗೆತಕ್ಕೆ ಹಲವುಬಾರಿ ತಲೆಗೆ ಮಾಳಿಗೆ ತಗುಲಿತು. ಕಾಲು ನೆಲಕ್ಕೆ ಅಪ್ಪಳಿಸಿತು.

ಬಂಗಾರದ ನಾಣ್ಯಗಳು ತಲೆಯಮೇಲೆ ಬಿದ್ದವು. ಅವನ್ನು ತಪ್ಪಿಸಿಕೊಳ್ಳಲು ಅತ್ತ ಇತ್ತ ಸರಿದಾಡಿದನು. ನಾಣ್ಯಗಳು ಬೆನ್ನಮೇಲೆ ಬಿದ್ದವು. ಹಾಗೆ ಹೀಗೆ ಹೊಸಕಾಡಿದನು. ಅವು ಕೈಮೇಲೆ, ಕಾಲಮೇಲೆ, ಮೂಗಿನಮೇಲೆ ಬೀಳಲಾರಂಭಿಸಿದವು.

ಅಯ್ಯೋ ಇಲ್ಲಿ ಬಿತ್ತಲ್ಲ ಎಂದು ತಿರುಗಿದಾಗ ಅಲ್ಲಿ ಬಿತ್ತು. ಅಲ್ಲಿಂದ ಬಿತ್ತೆಂದು ತಿರುಗಿದಾಗ ಇಲ್ಲಿ ಬಿತ್ತು. ಭಾರವಾದ, ಹೊಳಪಾದ ಬಂಗಾರದ ನಾಣ್ಯಗಳು ಮಳೆ ಬಂದಂತೆ ಬೀಳುತ್ತಾ ಬಂದವು. ಅಕ್ಕಸಾಲಿಗೆ ತುಟಿ, ಕಣ್ಣು, ಮೂಗೆಲ್ಲ ನಾಣ್ಯ ಬಿದ್ದು ಗಾಯವಾಗಿ ರಕ್ತ ಹರಿಯಲಾರಂಭಿಸಿತು. ಇನ್ನೂ ಸ್ವಲ್ಪ

ಹೊತ್ತಿನಮೇಲೆ, ಕಿವಿ ಹರಿಯಿತು, ತಲೆ ನೆನೆಯಿತು ರಕ್ತದಿಂದ! ಮೈಯೆಲ್ಲ ಬಾಸುಂಡೆಬಂದು ಬಾತುಕೊಂಡಿತು. ಇನ್ನು ನಾಣ್ಯ ಬೇಡ, ಸಾಕು ಸಾಕೆಂದು ಕೂಗಿಕೊಂಡನು. ನೂರುಕೋಟಿ ಮುಗಿಯದೆ, ಬಂಗಾರದ ಮಳೆ ನಿಲ್ಲುವುದು ಹೇಗೆ! ಅದು ನಿಲ್ಲಲಿಲ್ಲ. ಸುರಿದೇ ಸುರಿಯಿತು—ಫಳಫಳ, ಠಣಠಣ-ಎಲ್ಲ ಹೊಸ ಬಂಗಾರ. ಹೊಸ ನಾಣ್ಯಗಳೇ ಎಲ್ಲ.

ನಾಣ್ಯಗಳು ಬಿದ್ದವು, ಬಿದ್ದವು—ಹೆಜ್ಜೆ ಮುಳುಗಿದರೂ ಬಿದ್ದವು. ಮೊಳಕಾಲುವರೆಗೆ ಸುರಿದವು. ಮತ್ತೂ ನಾಣ್ಯಗಳು ಇನ್ನೂ ನಾಣ್ಯಗಳು ಬೀಳಲಾರಂಭಿಸಿದವು. ಅಕ್ಕಸಾಲಿಯು ನಡುವಿನವರೆಗೆ ಹೂತುಹೋದನು—"ಅಯ್ಯೋ ಉಂಗುರದೇವಿ, ನಿಲ್ಲಿಸು ನಿಲ್ಲಿಸು. ಸಾಕು ತಾಯಿ, ಸಾಕು ನಾಣ್ಯ! ಇನ್ನೂ ಮುಗಿಯಲಿಲ್ಲವೇ! ನಿನ್ನ ವರ? ಯಾಕಾದರೂ ಕೇಳಿದೆನೊ! ಯಾಕಾದರೂ ಆ ಬಡಗಿಗೆ ಮೋಸಮಾಡಿದೆನೋ ಕಾಣೆನಲ್ಲಾ"—ಎಂದು ವ್ಯಥೆಗೊಂಡು ಹಲವುಬಾರಿ ಕಿರಿಚಿಕೊಂಡನು.

ಅಕ್ಕಸಾಲಿಯು ತಾನು ಕೇಳಿದ ವರದ ಮಹತ್ವದಿಂದ ತಾನೇ ಸೋತು ನೊಂದು ನರಳಿ ಸಾಯಲಾದನು. ಆ ರಾಸಿಯಮೇಲೇ ಕುಳಿತುಬಿಟ್ಟನು. ಹೊನ್ನಿನ ನಾಣ್ಯಗಳ ಸುರಿಮಳೆ ಹೆಚ್ಚಾಯಿತು. ನಾಣ್ಯಗಳಲ್ಲಿ ಅಕ್ಕಸಾಲಿಯ ಎದೆಯೆಲ್ಲ ಮುಚ್ಚಿತ್ತು. ಆಗಲೂ ಅಕ್ಕಸಾಲಿ ಬೇಡಿಕೊಂಡನು.—"ಸಾಕವ್ವಾ ತಾಯಿ, ಉಂಗುರ ಮಾತೇ. ನಾನು ಕೇಳಿದುದೇ ತಪ್ಪು. ಆ ಬಡಗಿಗೆ ಮೋಸ ಮಾಡಿದುದೇ ತಪ್ಪು. ಈಗಲೂ ಹೋಗಿ ಆತನನ್ನು ಕರೆತಂದು ಇದನ್ನೆಲ್ಲ ಆತನಿಗೇ ಕೊಡುತ್ತೇನೆ. ನಿಲ್ಲಿಸವ್ವಾ! ಈ ನಿನ್ನ ವರದ ಸುರಿಮಳೆ"—ಎಂದು ಕಿರಿಚಿಕೊಂಡನು. ಆದರೆ ನೂರುಕೋಟಿ ಇನ್ನೂ ಸುರಿದು ಮುಗಿದಿರಲಿಲ್ಲ! ಹೊಸಾ ಹೊಸ ಬಂಗಾರದ

ನಾಣ್ಯಗಳು ಠಣಾ ಠಣಾ ಠಣ್ ಠಣಾರೆಂದು ಬೀಳುತ್ತಲೇ ಇದ್ದವು. ಅಕ್ಕಸಾಲಿಯು ಕಿರಿಚಿ ಕೂಗಿದ ಸದ್ದು ಯಾರಿಗೂ ಕೇಳಲಿಲ್ಲ.

ಹೊನ್ನಿನ ಸುರಿಮಳೆ ಸುರಿದು ಮುಗಿಯುತ್ತಾ ಬಂತು. ಅಕ್ಕಸಾಲಿ ತನ್ನ ಹೊನ್ನ ವರ್ಷದಲ್ಲಿ ತಾನೇ ಮುಳುಗಿದನು. ಅಕ್ಕಸಾಲಿ ನಾಣ್ಯಗಳಲ್ಲಿ ಹೂತು ಹೋದಾಗಲೂ ತೊಂಬತ್ತೊಂಬತ್ತು ಕೋಟಿಯೇ ಆಗಿದ್ದುದು. ಇನ್ನೂ ನಾಣ್ಯಗಳು ಉದುರುತ್ತಲೇ ಇದ್ದುವು. ಅಗಾಧವಾದ ನಾಣ್ಯದಮಳೆ. ಯಾರೂ ನಂಬಲಾರದಷ್ಟು ಬಂಗಾರದ ನಾಣ್ಯಗಳ ರಾಶಿಯಾಯಿತು ಆ ಕೋಣೆಯಲ್ಲಿ!

ಆಗ ಇನ್ನೊಂದು ಅನಾಹುತವಾಯಿತು.

ಅಕ್ಕಸಾಲಿ ಕುಳಿತಿದ್ದ ಕೊಟಡಿಯ ನೆಲವೇ ಕುಸಿದು ಬಿಟ್ಟಿತು.

ಆ ಕೋಣೆಯ ಬುಡದಲ್ಲಿ ಒಂದು ನೆಲಮಾಳಿಗೆಯಿತ್ತು. ಆದುದರಿಂದ ನೆಲ ಕುಸಿದುಬಿದ್ದಿತು. ಅಕ್ಕಸಾಲಿಯು ತಾನು ಬಯಸಿದ ನಾಣ್ಯಗಳ ರಾಶಿಯ ಸಮೇತ ನೆಲಮಾಳಿಗೆಯ ಪಾತಾಳಂಕಣಕ್ಕೆ ಉರುಳಿಕೊಂಡನು. ಆಗ ಅಗಾಧ ಶಬ್ದವಾಯಿತು. ಆ ಗುಡಗುಡಾರ್, ದಡದಢಾರ್, ಜಣಝಣ ಶಬ್ದಗಳನ್ನೆಲ್ಲ ಕೇಳಿದವರು ಬಂದು ಆ ಕೋಣೆಯ ಬಾಗಿಲಲ್ಲಿ ನಿಂತರು. ಕೂಗಿಯೇ ಕೂಗಿದರು. ಆ ಬಾಗಿಲನ್ನು ತಟ್ಟಿದರು.

ಬಾಗಿಲು ತೆಗೆಯುವವರಾರು?

ಅಕ್ಕಸಾಲಿಯಾದರೋ ಬಂಗಾರದಲ್ಲಿ ಮುಳುಗಿಯೇ ಹೋಗಿದ್ದನು!

ಕೊನೆಗೆ ಸಂಜೆಯವೇಳೆಗೆ ಆ ಸುರಿಮಳೆ, ನಾಣ್ಯದ ಬಿರುಮಳೆ ನಿಂತಿತು. ಆ ಮನೆಯವರೆಲ್ಲ ಕೂಗಿ ಕೂಗಿ ಸಾಕಾಗಿ ಬಲಪ್ರಯೋಗಮಾಡಿ, ಹಾರೆಕೋಲುಗಳಿಂದ ಮೀಟಿ ಆ ಕೋಣೆಯ

ಬಾಗಿಲನ್ನು ತೆಗೆದರು. ಅಂಚಿನಲ್ಲಿದ್ದ ನಾಣ್ಯಗಳು ಬಾಗಿಲಾಚೆಗೂ ಠಣಾರ್ ಠಣಾರನೆ ಸಿಡಿದು ಬಿದ್ದುವು. ಮಳೆ ನಿಂತಮೇಲೆ ಮನೆಯವರೆಲ್ಲ ಆ ಬಂಗಾರದ ರಾಸಿಯನ್ನು ನೋಡಿ ಆನಂದಪಟ್ಟರು. ಯಾರೂ ಎಂದೂ ಕಂಡಿರಲಿಲ್ಲ ಅಷ್ಟೊಂದು ನಾಣ್ಯಗಳನ್ನು.

ಆದರೆ ಅಕ್ಕಸಾಲಿ!

ಅಕ್ಕಸಾಲಿಗಾಗಿ ಹುಡುಕಿದರು. ನಾಣ್ಯಗಳನ್ನೆಲ್ಲ ತೆಗೆದು ಹೊರಗೆಸೆದರು. ಅದು ಮಹಾರಾಸಿಯಾಯಿತು. ಕಟ್ಟಕಡೆಗೆ ಅಕ್ಕಸಾಲಿಯ ತಲೆಯನ್ನು ಕಂಡರು. ಆಗ ಆ ಮನೆಯವರೆಲ್ಲ ನಾಣ್ಯಗಳ ರಾಸಿಯನ್ನು ತೆಗೆದು ಮುಗಿಯದೆ ಊರವರನ್ನೆಲ್ಲ ಕರೆದರು. ಅವರೆಲ್ಲ ಎಲೆಗುದ್ದಲಿಗಳನ್ನು ತಂದರು. ಹೊಸಾ ಹೊಸ ಬಂಗಾರದ ನಾಣ್ಯಗಳನ್ನೆಲ್ಲ ಅಗೆದು ತೆಗೆದರು. ಅಯ್ಯೋ ಕೋಣೆಯ ನೆಲ ಕುಸಿದು, ಪಾತಾಳಂಕಣಕ್ಕೆ ಹೋಗಿಬಿಟ್ಟದೆಯೆಂದರು. ಕಡೆಗೆ ಬಂಗಾರದ ನಾಣ್ಯಗಳ ಹೊಡೆತಕ್ಕೆ ಸಿಕ್ಕಿ ಜಜ್ಜಿ ಅಜ್ಜಿಬಜ್ಜಿಯಾದ ಅವನ ಶರೀರವನ್ನು ತೆಗೆದು ಸಮಾಧಿ ಮಾಡಿದರು.

ಅಕ್ಕಸಾಲಿಯ ಮಕ್ಕಳು ಮೊಮ್ಮಕ್ಕಳೆಲ್ಲ ಅವನ ನಾಣ್ಯಗಳನ್ನು ಹಂಚಿಕೊಂಡರು. ಊರಿನವರಿಗೂ ನಾಣ್ಯಗಳನ್ನು ಬೊಗಸೆ ಬೊಗಸೆಗಳಲ್ಲಿ ಕೊಟ್ಟರು. ಇನ್ನೂ ಮಿಕ್ಕಿತ್ತು, ಮತ್ತೂ ಮಿಕ್ಕಿತ್ತು ನಾಣ್ಯಗಳು.

ಹಾಗಿತ್ತು ಆ ಉಂಗುರ ಕೊಟ್ಟ ವರದ ಮಹಾಮಹಿಮೆ.

ಹಾಗಿತ್ತು ಆ ಅಕ್ಕಸಾಲಿಯ ಅದೃಷ್ಟ—ಅಲ್ಲ ದುರದೃಷ್ಟ!

(೨) ಬಡಗಿಯ ಬದುಕು

ಇತ್ತ ಬಡಗಿಯು ಇದಾವುದನ್ನೂ ಅರಿಯದೆ ತನ್ನ ಕೈಲಿದ್ದ ಉಂಗುರದಲ್ಲಿ ಬಹಳ ಭಕ್ತಿಯನ್ನು ಇಟ್ಟುಕೊಂಡು ಮನೆಯಕಡೆ ಬಂದನು. ವರಕೊಡುವ ಉಂಗುರಕ್ಕಿಂತ ಇದಕ್ಕೆ ಹೊಳಪು ಹೆಚ್ಚಾಗಿತ್ತು. ಬಡಗಿ ಹೀಗೆಂದುಕೊಂಡನು—"ಹದ್ದು ಹೇಳಿದ ಮಾತೆಲ್ಲ ದಿಟ. ಈ ಉಂಗುರವು ಮಹಾಮಹಿಮೆಯುಳ್ಳದ್ದಾದುದ ರಿಂದ ದಾರಿ ಸಾಗಿದ ಹಾಗೆಲ್ಲ ಹೆಚ್ಚು ಹೆಚ್ಚು ಹೊಳೆಯುತ್ತಿದೆ. ನನ್ನ ಭಾಗ್ಯ ಮತ್ತು ನನ್ನ ಹೆಂಡತಿಯ ಭಾಗ್ಯ! ಮುಖ್ಯ ದೇವರ ಕೃಪೆ. ಈ ಉಂಗುರದೇವತೆಯಿಂದ ಒಳ್ಳೆಯದೊಂದು ವರ ವನ್ನು ಪಡೆದುಕೊಂಡರೆ ಸಾಕು ನನ್ನ ಸಂಸಾರವೇ ಕಾಲ ಕಾಲಾಂ ತರಕ್ಕೂ ತಲೆ ತಲಾಂತರಕ್ಕೂ ಸುಖವಾಗಿ ಬಾಳಿಕೊಂಡು ಹೋಗು ತ್ತದೆ"—ಹೀಗೆಂದು ಹಿಗ್ಗುತ್ತಾ ಊರಬಳಿಗೆ ಬಂದನು.

ಬಡಗಿಯ ಹಿಗ್ಗೇ ಹಿಗ್ಗು. ಊರುದ್ದಕ್ಕೂ ಜನ ಇವನ ಮೋರೆಯನ್ನು ಕಂಡು ಸಂತೋಷಪಟ್ಟರು. ಏನೇನೋ ಭಾವಿಸಿದ್ದವ ರೆಲ್ಲ ಈಗ ಇವನನ್ನು ಕರೆದು ಕೈಲಿ ಹಣವನ್ನು ಕೊಟ್ಟು—"ಇದೋ ಹಿಡಿ, ಎಲ್ಲಿಗೆ ಹೋಗಿದ್ದೆಯಯ್ಯಾ! ಇದೋ ಹಿಡಿ, ಈ ಹಣವನ್ನು ಮುಂಗಡವಾಗಿ ತೆಗೆದುಕೊಂಡು ನಮಗೊಂದು ಕುರ್ಚಿ ಮಾಡಿ ಕೊಡು. ಒಳ್ಳೆಯ ಕುರ್ಚಿ! ಅದರಲ್ಲಿ ಕುಳಿತರೆ ಹಿಗ್ಗಾಗಿ, ಸುಖ ಮುಖವಾಗಿ ಕೆಲಸವಾಗಿ ತುಂಬಾ ಹಣ ಸಂಪಾದನೆಯಾಗಬೇಕು ನೋಡು! ಪಂಚಾಯಿತಿಗೆ ನೀನು ಮಾಡಿಕೊಟ್ಟ ಪದಾರ್ಥಗಳನ್ನು ಎಲ್ಲರೂ ಕೊಂಡಾಡುತ್ತಾರೆ. ಹಿಡಿ ಮುಂಗಡ! ಸಾಮಾನು

ಮಾಡಿಕೊಡಪ್ಪ—ಹೀಗೆಂದು ಬಡಗಿಯನ್ನು ದಾರಿಯಲ್ಲಿ ಹಿಡಿದು ನಿಲ್ಲಿಸಿ ಹತ್ತಾರು ಜನ, ಆ ಕೆಲಸ ಈ ಕೆಲಸ ಹೇಳಿದರು. ಕುರ್ಚಿ, ಮೇಜ, ಬೀರು, ಪೆಟ್ಟಿಗೆ ಮೊದಲಾಗಿ—ತಮಗೆ ಬೇಕಾದ್ದನ್ನು ಚೆನ್ನಾಗಿ ಚೆಲುವಾಗಿ ಮಾಡಿಕೊಡೆಂದು ಕೇಳುತ್ತಾ ಬಂದರು. ಬಡಗಿಯ ಮುಖದ ಗೆಲುವಿನ ನಗುವಿಗೆ ಅವನ ಕೈಲಿದ್ದ ಉಂಗುರವೇ ಕಾರಣ. ತನಗೆ ಆದ ಮೋಸದ ವಿಷಯವೇ ತಿಳಿಯದೆ ಆ ಬಡಗಿಯು ತಾನು ಧರಿಸಿದ್ದ ಉಂಗುರವೇ ಸತ್ಯದ ಉಂಗುರವೆಂದು ಭಾವಿಸಿದ್ದನು. ಆದುದರಿಂದ ಅವನು ಉತ್ಸಾಹಭರಿತನಾಗಿ ನಗುಮುಖನಾಗಿ ಊರೊಳಗೆ ಹೊರಟಿದ್ದನು.

ಅವನ ಆನಂದದ ನಗುಮುಖವೇ ಇನ್ನಿತರರ ಉತ್ಸಾಹಕ್ಕೆ ಕಾರಣ. ಇತರರ ಉತ್ಸಾಹವೇ ಬಡಗಿಯ ಭಾಗ್ಯ. ಬಡಗಿಯ ಭಾಗ್ಯಕ್ಕೆ ಆ ಉಂಗುರ ಕಾರಣವಲ್ಲ. ಉಂಗುರದಲ್ಲಿದ್ದ ಅವನ ಭರವಸೆ ಮತ್ತು ಅವನ ಭಕ್ತಿ ಮತ್ತು ಅವನ ನಂಬಿಕೆ. —"ನನ್ನಲ್ಲಿ ವರವನ್ನು ಕೊಡುವ ಒಂದು ಉಂಗುರವಿದೆ ಅದು ನನ್ನ ಭಾಗ್ಯವಿಧಾತ. ಅದರಿಂದ ನಾನು ಪ್ರಪಂಚವನ್ನೇ ಗೆಲ್ಲುತ್ತೇನೆ. ನನ್ನ ಮನೆದೇವರೇ ನನಗೆ ಒಲಿದಿದ್ದಾರೆ. ನನಗೇನು ಕಡಿಮೆ. ನಾನು ಏನು ಮಾಡಿದರೂ ಗೆಲ್ಲುತ್ತೇನೆ. ನಾನು ಚೆನ್ನಾಗಿ ಬಾಳುತ್ತೇನೆ. ಬದುಕು ಮಾಡುತ್ತೇನೆ"—ಹೀಗೆಂದು ಉಬ್ಬಿದ ಮನದಿಂದ ಆ ಬಡಗಿಯು ಮನೆಗೆ ಹೋದನು. ನಡೆದ ವಿಚಾರವನ್ನೆಲ್ಲ ತನ್ನ ಹೆಂಡತಿಗೆ ಹೇಳಿದನು. ಆಕೆ ಆನಂದಪಟ್ಟು ಹೇಳಿದಳು—"ಹಾಗಾದರೆ, ಹೀಗೇಕೆ ಮಾಡಬಾರದು! ನೀವೆಂತಿದ್ದರೂ ಬಡಗಿಗಳಷ್ಟೆ?"

"ಹೇಗೆ ಮಾಡಲಿ ಹೇಳು!"

"ತುಂಬ ಮರದ ಹಲಗೆಗಳನ್ನು ತರಿಸಿಕೊಳ್ಳಿರಿ. ಅದರಿಂದ ಒಳ್ಳೆಯ ನಾಜೂಕಾದ ಪದಾರ್ಥಗಳನ್ನು ಮಾಡಿರಿ. ಜನರು ಬಂದು ಮುತ್ತಿಕೊಳ್ಳುವರು. ಹಣ ಸುರಿದು ಹೋಗುತ್ತೆ."

ಆಗ ಆ ಬಡಗಿಗೆ ನೆನಪು ಬಂತು. ಯಾವ ನೆನಪು ಹೇಳಿ, ನೋಡೋಣ! ನೆನಪಾವುದೇ—ಅದೇ ಆ ಹೊನ್ನೆಯ ಮರದ ಆ ಸವಿ ನೆನಪು. ಅದು ಅವನಿಗಾಗಿ ಒಣಗಿಹೋಗಿ ಕಾದಿತ್ತು. ಅದನ್ನು ಮನೆಯ ತನಕ ಸಾಗಿಸಿಕೊಂಡು ಬಂದರೆ ಸಾಕಲ್ಲವೆ? ಅದು ಹೊನ್ನಿನ ಮರವಲ್ಲವೆ?—ಹೀಗೆಲ್ಲ ಯೋಚಿಸಿ ತನ್ನ ಹೆಂಡತಿಗೆ ಹೇಳಿದನು—"ಕೇಳೇ ಜಾಣೆ. ಈ ಉಂಗುರ ನಮಗೆ ಕೊಡುವು ದಾದರೂ ಎಷ್ಟು ವರವೆಂದು ತಿಳಿದಿದ್ದೀಯೆ? ಹೇಳು ನೋಡೋಣ? ಒಂದೇ ಒಂದು ವರವಲ್ಲವೆ? ಆ ಒಂದೇ ವರವನ್ನು ಒಣ ಮರದ ಹಲಗೆಗಳಿಗಾಗಿ ವೆಚ್ಚಮಾಡಿಬಿಡೋಣವೇನು? ಅಯ್ಯೋ ಹುಚ್ಚಿ! ಬೇಡ."

ಆಗ ಆಕೆಯು ಕಣ್ಣೀರಿಟ್ಟು ಹೇಳಿದಳು—"ಬೆಣ್ಣೆಯಿಟ್ಟು ಕೊಂಡು ತುಪ್ಪಕ್ಕೆ ಅಳುವ ನಿಮಗೆ ನಾನೇನು ಹೇಳಲಿ! ಈಗ ಹಣವೆಲ್ಲಿದೆ? ಹಲಗೆ ಎಲ್ಲಿದೆ? ನೀವು ಕುರ್ಚಿ ಮೇಜು ಮಾಡಿ ಹಣ ತಂದು ಕಾಳುತಂದು ನಾನು ಅಡಿಗೆಮಾಡಿ ಬಡಿಸುವುದು ಹೇಗೆ ಹೇಳಿರಿ ನೋಡೋಣ."

ಆಗ ಬಡಗಿಯು ತನ್ನ ಕೈಚೀಲದಲ್ಲಿದ್ದ ಮುಂಗಡದ ಹಣ ವನ್ನು ಅವಳ ಮುಂದೆ ಸುರಿದನು. ಕಾಡಿನಲ್ಲಿ ತೆನಗಾಗಿ ಕಾದಿದ್ದ ಹೊನ್ನೆಮರದ ಕಥೆಯನ್ನು ಹೇಳಿದನು. ಆ ಉಂಗುರವನ್ನು ತೆಗೆದು ಆಕೆಯ ಕೈಗೆ ಕೊಟ್ಟು ಹೀಗೆಂದನು—"ಈ ಉಂಗುರ ವನ್ನು ನಿನ್ನ ಬೆರಳಲ್ಲಿ ಇಟ್ಟುಕೋ. ಇನ್ನಾವುದಾದರೂ ಒಳ್ಳೆಯ ದೊಂದು ವರವನ್ನು ನೆನಸಿಕೋ. ಆಗ ನಾವಿಬ್ಬರೂ ಸೇರಿ

ಕೇಳಿಕೊಳ್ಳೋಣ. ಈ ದಿನ ಸಾಮಾನು ತಂದು ಹತ್ತು ಜನಕ್ಕೆ ಅನ್ನ ಹಾಕೋಣ. ನಮ್ಮ ಮನೆದೇವರಿಗೆ ಆನಂದವಾಗುವಂತೆ ಮಾಡೋಣ. ಅನಂತರ ನಾನು ಕಾಡಿಗೆ ಹೋಗಿ ಮರವನ್ನು ತರುತ್ತೇನೆ. ತುಂಬಾ ಸಾಮಾನುಗಳನ್ನು ಮಾಡುತ್ತೇನೆ. ಈಗ ಮುಂಗಡ ಹಣಕೊಟ್ಟವರಿಗೆಲ್ಲ ಕುರ್ಚಿಯೋ, ಮೇಜವೋ, ಪೆಟ್ಟಿಗೆಯೋ ಏನೇನು ಬೇಕೋ ಅದೆಲ್ಲ ಮಾಡಿಕೊಡೋಣ. ಆಗ ಕೈ ತುಂಬ ಹಣ ಬರುತ್ತದೆ. ನಿತ್ಯ ನಾವು ಉಂಡು ಹಸಿದು ಬಂದವರಿಗೂ ಅಶನವಿತ್ತು ನಮ್ಮ ಮನೆದೇವರನ್ನು ತೃಪ್ತಿಗೊಳಿಸಿಬಿಡೋಣ. ನಮ್ಮ ಕೈಲೇ ಆಗುವ ಇಷ್ಟು ಕೆಲಸಕ್ಕಾಗಿ ಉಂಗುರದಲ್ಲಿರುವ ಶಕ್ತಿಯನ್ನೆಲ್ಲ ಖರ್ಚುಮಾಡೋಣ ಬೇಡ!" ಹೀಗೆ ಹೇಳಿದ ಗಂಡನ ಮಾತಿನಲ್ಲಿ ನಂಬಿ ಸಂತಸಪಟ್ಟು ಆ ಹೆಂಗಸು ಅಂಗಡಿಗೆ ಹೋಗಿ ಸಾಮಾನುಗಳನ್ನೆಲ್ಲ ತಂದಳು. ಅಡುಗೆಮಾಡಿದಳು. ಊರಲ್ಲಿ ಗಣ್ಯರಾದ ಐವರನ್ನೂ ಬಡವರಾದ ಐವರನ್ನೂ ಊಟಕ್ಕೆ ಕರೆದರು. ಅವರು ಉಂಡು ತಣಿದು ಸಂತೋಷದಿಂದ ಹೋಗುವಾಗ ತಮಗೆ ಬೇಕಾದ ಮರದ ಸಾಮಾನುಗಳಿಗೆ ಇನ್ನಾರನ್ನೂ ಕೇಳವೆ ಈ ಬಡಗಿಯನ್ನೇ ಕೇಳಬೇಕೆಂದುಕೊಂಡು ಅವರು ಹೊರಟರು.

ಬಡಗಿಯಾದರೋ ನೆರೆಹೊರೆಯುವರಿಗೆಲ್ಲ ತನ್ನ ಕಥೆಯನ್ನು ಎಷ್ಟಾಗಿ ಹೇಳಬಹುದೊ, ಅಷ್ಟು ಮಾತ್ರ ಹೇಳಿದನು. ಅವರಾದರೋ ಅವನ ಉತ್ಸಾಹವನ್ನೂ ಪ್ರಯತ್ನಶೀಲತೆಯನ್ನೂ ಕೇಳಿ ಕೇಳಿ ಸಂತೋಷವನ್ನು ಸೂಚಿಸಿದರು. ಅಲ್ಲದೆ ಅವನನ್ನು ಬಲ್ಲವರೆಲ್ಲರೂ ಬಡಗಿಯಂತೆಯೇ ದೇವರಲ್ಲಿ ನಂಬಿಕೆಯಿಟ್ಟು ತಮ್ಮ ತಮ್ಮ ಪ್ರಯತ್ನವನ್ನು ಮಾಡುತ್ತಲೇ ಇದ್ದರು. ಯಾಕೆ ಹೇಳಿ?

ವರವನ್ನು ಕೊಡುವ ಶಕ್ತಿಯುಳ್ಳ ಉಂಗುರವನ್ನು ತನ್ನ ಕೈ

ಬೆರಳಲ್ಲಿ ಧರಿಸಿದ್ದರೂ ಬಡಗಿಯು ಮಾತ್ರ ತನ್ನಲ್ಲಿರುವ ಮಾನುಷ ಶಕ್ತಿಯನ್ನೆಲ್ಲ ಮೊದಲು ಉಪಯೋಗಿಸಿ ಅನಂತರ ದೇವರನ್ನು ವರಕ್ಕಾಗಿ ಬೇಡುವ ಉತ್ತಮ ಗುಣವನ್ನು ತೋರಿಸಿದ್ದನು. ಬಡಗಿಯ ಅಭಿವೃದ್ಧಿಗೆ ಅದೇ ಕಾರಣವಾಗಿತ್ತು.

ಅನಂತರ ಬಡಗಿಯು ಕಾಡಿಗೆ ಹೋಗಿ ಆ ಮರವನ್ನು ಭಕ್ತಿಯಿಂದ ಹೇರಿಸಿಕೊಂಡು ಊರಬಳಿಗೆ ಬಂದನು. ಅದು ಅತಿ ದೊಡ್ಡ ಮರ. ಊರ ಅಗಸೆ ಬಾಗಿಲು ಹಿಡಿಸಲಿಲ್ಲ. ಆದುದರಿಂದ ಊರ ಹೊರಗೇ ಬಿಟ್ಟ. ಅಲ್ಲಿಯೇ ಅದನ್ನು ಹಲಗೆ ಮರಮುಟ್ಟುಗಳಾಗಿ ಕತ್ತರಿಸಿ ಕೊಯಿಸಿದನು. ಒಳ್ಳೆಯ ಗಳಿಗೆಯಲ್ಲಿ ಅವುಗಳನ್ನು ಮನೆಗೆ ತಂದಿಟ್ಟುಕೊಂಡನು. ಹಲವು ಬಡಬಗ್ಗರಿಗೆ ಅನ್ನ ಹಾಕಿದನು. ಅನೇಕರಿಗೆ ಸಾಮಾನುಗಳನ್ನು ಮಾಡಿಕೊಟ್ಟನು. ಮಕ್ಕಳ ಆಟದ ಸಾಮಾನುಗಳನ್ನೂ ಮನೆ ಸಾಮಾನುಗಳನ್ನೂ ದೇವರ ಮಂಟಪಗಳನ್ನೂ ಕಟ್ಟಿಕೊಡುತ್ತಾ ಬಂದಾಗ, ಆ ಬಡಗಿಗೆ ದಿನದಲ್ಲಿ ಇಪ್ಪತ್ತುನಾಲ್ಕು ಗಂಟೆಗಳೂ ಸಾಲದಾದವು. ಸಾಮಾನುಗಳನ್ನು ಚೆನ್ನಾಗಿ ಸರಿಯಾಗಿ ಸಮಯ ಸಮಯಕ್ಕೂ ಸಲ್ಲಿಸುತ್ತ ಬರುವುದು ಕಷ್ಟವಾಯಿತು. ಆಗ ನೆರೆಹೊರೆಯ ಮಕ್ಕಳು ಬಂದು ಬಡಗಿಗೆ ನೆರವಾಗುತ್ತ ನಿಂತರು. ಕೆಲವೇ ತಿಂಗಳಲ್ಲಿ ಬಡಗಿಯ ಮನೆಯ ಹಜಾರವೆಲ್ಲ ಸಾಮಾನುಗಳಿಂದ ತುಂಬಿಹೋಯಿತು. ಕೆಲಸಗಾರರು ಜೇನುನೊಣಗಳಂತೆ ಗುಂಯಿಗುಟ್ಟಿ ಗುಡುಗಾಡಿಕೊಂಡು 'ಉಫೇ'ಯೆನ್ನಿಸುತ್ತ ಕೆಲಸಗಳನ್ನು ಮುಗಿಸುತ್ತಾ ಬಂದರು. ನೆರೆಯೂರಿನವರೆಲ್ಲ ಬಡಗಿಯ ಬಳಿಗೆ ಬಂದು ತಮಗೆ ಬೇಕಾದ ಮರದ ಸಾಮಾನುಗಳನ್ನು ಮಾಡಿಸಿಕೊಂಡು ಹೋಗಲಾರಂಭಿಸಿದರು. ಚಲ್ ಚಲ್ ಚಕ ಚಕ ಗರಗರ, ಗಸಗಸ–ಎಂಬ ಕೆಲಸದ ಉಳಿ, ಗರಗಸ, ಬೈರಿಗೆ, ಕೊಡತಿಗಳ ಶಬ್ದಗಳ ಸಂಗಡ

ಕೆಲಸಗಾರರಾದ ಹುಡುಗರೂ, ದೊಡ್ಡವರೂ, ನಲಿಯುತ್ತ ನಲಿಯುತ್ತ, ಹಾಡುತ್ತ, ಹರಸುತ್ತ, ನಲಿದಾಡಿಕೊಂಡು ಸಾಮಾನುಗಳನ್ನು ಮಾಡುತ್ತ ಇದ್ದರು. ನಿಜವಾಗಿಯೂ ಅದು ಅದೃಷ್ಟವಂತನಾದ ಆ ಬಡಗಿಯ ಭಾಗ್ಯದ ಜೇನುಗೂಡೇ ಆಗಿತ್ತು. ಮನೆದೇವರು ಒಲಿಯುವುದೆಂದರೆ ಇದಕ್ಕಿಂತ ಇನ್ನೇನು. ಎಂಥಾ ಬಡಗಿಗಾದರೂ ಇಷ್ಟು ಭಾಗ್ಯ ಬಂದರೆ ಸಾಕಾಗಿತ್ತು. ಆದರೆ ಬರಬೇಕಲ್ಲ! ಈ ರೀತಿಯ ಭಾಗ್ಯ! ಎಲ್ಲರಿಗೂ ಬಂದೀತೆ? ಇಲ್ಲ. ಇಂಥಾ ಬಡಗಿಗೆ ಮಾತ್ರ ಬಂದೀತು ಈ ಭಾಗ್ಯ! ಅಂಥಾ ಅಕ್ಕಸಾಲಿಗೆ ಬಂದೀತೆ?

ಒಂದು ವರ್ಷ ಕಳೆಯಿತು. ಮನೆದೇವರು ಸಂತೋಷಪಟ್ಟು ಈ ಬಡಗಿಯ ಮನೆಗೊಬ್ಬ ದೇವತೆಯನ್ನು ಕಳುಹಿಸಿದಳು. ಆ ದೇವತೆಯು ಒಂದು ಪುಟ್ಟ ಹೆಣ್ಣು ಕೂಸಾಗಿ ಬಂದು ಬಡಗಿಯ ಹೆಂಡತಿಯ ಮಗ್ಗುಲಲ್ಲಿ ಮಲಗಿಬಿಟ್ಟಿತು. ಆಗ ಅವರ ಸಂತೋಷಕ್ಕೆ ಪಾರವೇ ಇರಲಿಲ್ಲ.

ಬಡಗಿಯ ಹೆಂಡತಿಯು ಇಂಥಾ ಪುಟ್ಟ ಮಗುವಿಗಾಗಿ ಬಹು ದಿನಗಳಿಂದ ಬಯಸಿದ್ದಳು. ಅದು ಬರುವುದೆಂದೂ ಅವಳಿಗೆ ತಿಳಿದಿತ್ತು. ಆದರೆ ಬಡಗಿಗೆ ಮಾತ್ರ ತಿಳಿದಿರಲಿಲ್ಲ. ಅವನಿಗೆ ಆಶ್ಚರ್ಯವಾಗುವ ಹಾಗೆ ಒಂದು ದಿನ ಆ ಪುಟ್ಟ ಮಗುವನ್ನು ತೋರಿಸಬೇಕೆಂದಿದ್ದಳು. ಬಡಗಿಯೂ ಆ ಮಗುವನ್ನು ಕಂಡು ಆಶ್ಚರಿಪಟ್ಟು ಅದು ತನ್ನ ಭಾಗ್ಯದೇವತೆಯಾದ ಮನೆದೇವಿಯೆಂದೇ ಭಾವಿಸಿದ್ದನು. ಅದು ಎಲ್ಲಿ ಹೊರಟುಹೋದೀತೋ ಮಾಯವಾಗಿ ಎಂದು ಅಂಜಿಕೊಂಡಿದ್ದನು. ಅವನ್ನು ಗಳಿಗೆ ಗಳಿಗೆಗೂ ಬಂದು ನೋಡುತ್ತಿದ್ದನು.

ಮಗಳಾಗಿ ಬಂದಿದ್ದ ದೇವತೆಯು ಅಷ್ಟು ಸುಲಭವಾಗಿ

ಮನೆ ಬಿಟ್ಟು ಹೋಗುವಹಾಗೆ ಕಾಣಲಿಲ್ಲ. ಬಡಗಿಯ ಮನೆಯಲ್ಲೇ ಹಾಲುಕುಡಿದು, ಲಲ್ಲೆಯಾಡಿ, ಅಲ್ಲೇ ತೊಟ್ಟಲತುಂಬ ಮಲಗಿ ಅಲ್ಲೇ ದೊಡ್ಡದಾಗುವುದೆಂದು ಬಡಗಿಗೆ ಮನವರಿಕೆಯಾಯಿತು.

ಮಗುವಿಗೆ ಚಪ್ಪರ ತೊಟ್ಟಿಲು, ರಂಗಾಣಿ, ಬಸವ, ಹಿಡಿದುಕೊಂಡು ನಿಲ್ಲುವುದಕ್ಕೆ ಮತ್ತು ನೂಕುವುದಕ್ಕೆ ಗಾಡಿಗಳು—ಹೀಗೇ ಅದು ಬೆಳೆದಂತೆಲ್ಲ ಬೇಕುಬೇಕಾದ ಮರದ ಸಾಮಾನುಗಳೆಲ್ಲ ಮನೆ ತುಂಬ ಇಟ್ಟಾಡಿದುವು. ಆ ಮಗುವಿಗೆ ಮನೆಯೇ ಸಾಲದಾಯಿತು. ಅದರ ಲಲ್ಲೆಗೆ, ಕೂಗಿಗೆ, ಹಟಕ್ಕೆ ಏನಾದರೂ ಸಾಲದು, ಎಷ್ಟಾದರೂ ಸಾಲದೆಂತ ಬಡಗಿಗೆ ಮನದಟ್ಟಾಯಿತು.

ಒಂದು ದಿನ ಊಟವಾದಮೇಲೆ ಅವನ ಹೆಂಡತಿಯು ಬಂದು ಬಡಗಿಯು ಎಲೆಅಡಕೆ ಹಾಕಿಕೊಳ್ಳುತ್ತಿರುವಾಗ ಹೀಗೆಂದಳು—"ನೋಡಿದಿರಾ ನಿಮ್ಮ ಈ ಕೂಸನ್ನ! ಈ ಹೆಣ್ಣಿಗೆ ಎಷ್ಟು ಜಾಗವಾದರೂ ಸಾಲದಂತೆ. ಬಡಬಡ ಹೋಗಿ ಹೊಸ್ತಿಲಾಚೆ ಬಗ್ಗಿ ಉರುಡಿಕೊಳ್ಳುವುದಲ್ಲ! ಇದಕ್ಕೇನಾದರೂ ಉಪಾಯ ಮಾಡಬಾರದೆ?''

ಆಗ ಬಡಗಿಯೆಂದನು—''ಏನು ಮಾಡೋಣ ಹೇಳು. ಹೊರಗೆ ಹೋಗಲು ಬಿಡಬಾರದು. ಇನ್ನೇನುಪಾಯ ಇದಕ್ಕಿಂತ?"

ಆಕೆಯು ಉಪಾಯವನ್ನು ಸೂಚಿಸಿದಳು ಹೀಗೆ-''ಇದೇನು ಮರೆತುಬಿಟ್ಟಿರಾ ನಿಮ್ಮ ಉಂಗುರವನ್ನು. ಒಂದು ವರವನ್ನು ಕೇಳಿಕೊಳ್ಳಬಾರದೆ? ಇಂಥಾ ಸೌಭಾಗ್ಯವನ್ನು ಮನೆದೇವರು ಕೊಟ್ಟಿರುವಾಗ ನಮಗೆ ಸೊಗಸಾದೊಂದು ಮನೆಯೂ ಬೇಡವೆ? ಏನು ಹೇಳಿ ನಿಮ್ಮ ಮನಸ್ಸಿನಲ್ಲಿರುವುದನ್ನು! ಇಷ್ಟಾದರೂ ಕೇಳಿಕೊಳ್ಳಬೇಡವೆ?

(ಒಂದು ದಿನ ಊಟವಾದಮೇಲೆ ಬಡಗಿಯು ಎಲೆ ಅಡಕೆ

ಹಾಕಿಕೊಳ್ಳುತ್ತಿರುವಾಗ ಅವನ ಹೆಂಡತಿಯು ಬಂದು ಹೀಗೆಂದಳು —"ನೋಡಿದಿರಾ ನಿಮ್ಮ ಈ ಕೂಸನ್ನ! ಈ ಹೆಣ್ಣಿಗೆ ಎಷ್ಟು ಜಾಗವಾದರೂ ಸಾಲದಂತೆ. ಬಡಬಡ ಹೋಗಿ ಹೊಸಿಲಾಚೆ, ಬಗ್ಗಿ ಉರುಡಿಕೊಳ್ಳುವುದಲ್ಲ! ಇದಕ್ಕೇನಾದರೂ ಉಪಾಯ ಮಾಡಬಾರದೆ?"

ಆಗ ಬಡಗಿಯೆಂದನು—"ಏನು ಮಾಡೋಣ ಹೇಳು. ಹೊರಗೆ ಹೋಗಲು ಬಿಡಬಾರದು. ಇನ್ನೇನುಪಾಯ ಇದಕ್ಕಿಂತ?"

ಆಕೆಯು ಉಪಾಯವನ್ನು ಹೀಗೆ ಸೂಚಿಸಿದಳು—"ಇದೇನು ಮರೆತುಬಿಟ್ಟಿರಾ ನಿಮ್ಮ ಉಂಗುರವನ್ನು? ಒಂದು ವರವನ್ನು ಕೇಳಿ ಕೊಳ್ಳಬಾರದೆ? ಇಂಥಾ ಸೌಭಾಗ್ಯವನ್ನು ಮುಂದೇವರು ಕೊಟ್ಟಿರುವಾಗ ನಮಗೆ ಸೊಗಸಾದೊಂದು ಮನೆಯೂ ಬೇಡವೆ? ಏನು ಹೇಳಿ ನಿಮ್ಮ ಮನಸ್ಸಿನಲ್ಲಿರುವುದನ್ನು! ಇಷ್ಟಾದರೂ ಕೇಳಿಕೊಳ್ಳ ಬೇಡವೆ?"

ಆಗ ಬಡಗಿಯು ಹೀಗೆಂದನು—"ಅಯ್ಯೋ ಮರುಳೆ! ಇನ್ನು ಸ್ವಲ್ಪ ಕಷ್ಟಪಟ್ಟರೆ, ನೆರೆಯೂರಿನವರಿಗೆ ಬೇಕಾದ ಸಾಮಾನುಗಳನ್ನೆಲ್ಲ ಮಾಡಿಕೊಡಬಹುದು. ಆಗ ಇನ್ನೂ ಮುನ್ನೂ ಹಣ ಸುರಿದು ಹೋಗುತ್ತದೆ. ನಾವು ಇನ್ನು ಸ್ವಲ್ಪ ಶ್ರಮಪಟ್ಟರೆ ಸಾಕು, ಒಂದು ದೊಡ್ಡ ಮನೆಯನ್ನೇ ಕಟ್ಟಿಕೊಳ್ಳಬಹುದು. ಇಷ್ಟಕ್ಕೇ ನಾವು ಉಂಗುರಕ್ಕಿರುವ ಒಂದೇ ಶಕ್ತಿಯನ್ನು ಹಾಳು ಮಾಡಿಬಿಡುವುದೇ! ಬೇಡ ಬೇಡ. ನಿನಗೆ ಬೇಕಾದಂಥಾ ಮನೆಯನ್ನು ನಾನು ಕಟ್ಟಿ ಕೊಡುತ್ತೇನೆ. ಇಂಥಾ ಮಕ್ಕಳು ಇನ್ನು ಹತ್ತು ನಮ್ಮ ಮನೆಗೆ ಬಂದರೂ ಸಾಕಾಗಿ ಮಿಗುವಂಥ ಮನೆಯನ್ನು ಕಟ್ಟಿಸಿ ಬಿಡೋಣಂತೆ. ನೀನು ನಿಶ್ಚಿಂತಳಾಗಿರು. ಉಂಗುರದ ವರವನ್ನು ಮುಂದೆಂದಾದರೂ ಉಪಯೋಗಿಸಿಕೊಳ್ಳೋಣ. ಅದು

ನಮಗೆ ಆಪದ್ಧನ. ಅದು ಹಾಗೇ ಮೀಸಲಾಗಿರಲಿ ಬಿಡು. ಕಷ್ಟ ಕಾಲಕ್ಕೆ ಉಪಯೋಗಿಸಿಕೊಳ್ಳೋಣ!"

ಹೀಗೆಂದು ಹೇಳಿ ಅದೇ ವರ್ಷ ಮುಗಿಯುವುದರೊಳಗೇ ಒಂದು ದೊಡ್ಡ ಮನೆಯನ್ನು ಕಟ್ಟಿಸಿದನು. ಆ ಮನೆಗೆ ಬೇಕಾದು ದೆಲ್ಲ ಆ ಬಡಗಿಯ ಸಾಮರ್ಥ್ಯದಿಂದಲೇ ಒದಗಿಹೋಯಿತು.

ಬಡಗಿ ಉಂಗುರವನ್ನು ಪರೀಕ್ಷೆಮಾಡಿ ನೋಡಲೇ ಇಲ್ಲ. ನೋಡದೆ ಇದ್ದುದೇ ಒಳ್ಳೆಯದಾಗಿತ್ತು. ಬಡಗಿಯ ನಂಬಿಕೆಯೇ ಅವನಿಗೆ ಗೆಲುವುಗುರಾಣಿಯಾಗಿತ್ತು.

ಬಡಗಿಯ ಮನೆ ಬೆಳೆದು ಹೊರವಾಯಿತು. ಆಳು ಕಾಳು, ಮಕ್ಕಳು ಮರಿ, ದನಕರು, ನಾಯಿ ಬೆಕ್ಕು, ಗಿಳಿ ಗೊರವಂಕ ಪಾರಿವಾಳಗಳು, ಹೋಗುವವರು ಬರುವವರು, ಬಡವರು ಭಿಕ್ಷು ಕರು—ತುಂಬಿಕೊಂಡು ಗಿಜಗಿಜ ಎನ್ನುತ್ತಿತ್ತು ಆ ಬಡಗಿಯ ಮನೆ! ಬಡಗಿಯ ಹೆಂಡತಿ ಅಡಿಗೆ ಮನೆಗೂ ಉಗ್ರಾಣಕ್ಕೂ, ತೊಟ್ಟಿಲ ಬಳಿಗೂ ಮತ್ತು ಒಲೆಯ ಮುಂದಕ್ಕೂ ಓಡಾಡಲಾರದೆ ಓಡಾಡು ತ್ತಿದ್ದಳು. ಒಂದೊಂದು ದಿನವಂತೂ ಸೋತೇಹೋಗುತ್ತಿದ್ದಳು. ಅಷ್ಟೊಂದು ವೈಭವವನ್ನೆಲ್ಲ ನಿಂತುನಿಧಾನಿಸಿ ನೋಡುವುದಕ್ಕೆ ಆಕೆಗೆ ಪುರುಸೊತ್ತಿರಲಿಲ್ಲ.

ಬಡಗಿಯಾದರೋ ಇದನ್ನೆಲ್ಲ ಅರಿಯದವನಾಗಿರಲಿಲ್ಲ. ತನ್ನ ಹೆಂಡತಿಗೆ ಸಹಾಯವಿಲ್ಲವೆಂದು ಅರಿತು ಸರಿಯಾದ ಜನರನ್ನೆಲ್ಲ ಆರಿಸಿಕೊಂಡು, ದನಕರುಗಳನ್ನೂ ಅಡಿಗೆ ಉಗ್ರಾಣಗಳನ್ನೂ ನೋಡಿಕೊಳ್ಳುವುದಕ್ಕಾಗಿ ಆಳುಗಳನ್ನು ನೇಮಿಸಿದನು. ಎಷ್ಟಾ ದರೂ, ಏನಾದರೂ ಆ ಮನೆಯ ತಾಯಿಗೆ ಮನಸ್ಸಿನ ತೃಪ್ತಿಯೇ ಇರಲಿಲ್ಲ. ಎಲ್ಲಾ ಕಡೆಯಲ್ಲೂ ಹೋಗಿ ನಿಂತು ನೋಡುತ್ತಿದ್ದಳು. ಹೀಗೆ ಎಲ್ಲರಿಗೂ ಸಲಹೆ ಕೊಟ್ಟು, ಹಾಗೇ ಮಾಡಿರಿ ಹೀಗೇ ಮಾಡಿರಿ

ಎಂದು ಹೇಳುವುದೆಲ್ಲ ಆ ತಾಯಿಯ ಪಾಲಿಗೆ ಬಂತು. ಬಡಗಿಯಾದರೋ ಹಲವಾರು ಊರುಗಳಿಗೆಲ್ಲ ಬೇಕಾದ ಮರದ ಸಾಮಾನುಗಳನ್ನು ಮಾಡಿಸುವ ಗದ್ದಲವಲ್ಲಿದ್ದನು. ನೂರಾರು ಜನಗಳನ್ನು ನೇಮಿಸಿಕೊಂಡು, ಅಲ್ಲಿ ಇಲ್ಲಿ ತಿರುಗುತ್ತ ಹಾಗೆ ಹೀಗೆ ಮಾಡಿರೆಂದು ಯೋಗ್ಯವಾದ ಸಲಹೆಗಳನ್ನು ಕೊಡುತ್ತ ಇರುವುದೇ ಆತನಿಗೆ ನಿತ್ಯದ ಕೆಲಸವಾಗಿತ್ತು.

ಇಷ್ಟು ದೊಡ್ಡ ಸಂಸಾರವನ್ನು ತೂಗಿಸಿಕೊಂಡು ಹೋಗುವುದಕ್ಕೆ ಆ ಬಡಗಿಯ ಹೆಂಡತಿಗೆ ಕಷ್ಟವಾಗಿತ್ತು, ಊಟ ತಿಂಡಿ ತೀರ್ಥಗಳನ್ನು ಒದಗಿಸುವ ಭರದಲ್ಲಿ ಬಡಗಿಯ ಹೆಂಡತಿ ಹೀಗೆ ಹೇಳಿದಳು ತನ್ನ ಗಂಡನಿಗೆ—“ ಇದೇನು ನೀವು ಮರೆತುಬಿಟ್ಟರಲ್ಲ ಉಂಗುರದ ವರವನ್ನು. ಆಯುಸ್ಸೆಲ್ಲ ಕಳೆಯುತ್ತ ಬಂತಲ್ಲವೆ. ಯುವಕರಾಗಿದ್ದು ಗಲ್ಲ ಗುಂಡಾಗಿದ್ದು, ಮೀಸೆ ಚಿಗುರಾಗಿದ್ದು, ಕಣ್ಣು ಹೊಳಪಾಗಿದ್ದು-ಹೆಣ್ಣು ಹೊನ್ನುಗಳಲ್ಲಿ ಆಸೆಯಿದ್ದಾಗಲೂ ಉಂಗುರದ ವರವನ್ನು ಉಪಯೋಗಿಸಲಿಲ್ಲ. ಆಗ ಉಪಯೋಗಿಸಿದ್ದರೆ ನಿಮಗೇ ಗೊತ್ತಾಗುತ್ತಿತ್ತು ಅದರ ಸುಖ; ಈಗಲಾದರೂ ಉಪಯೋಗಿಸಿದರೆ ನಿಮ್ಮ ಮಕ್ಕಳಾದರೂ ಸುಖವಾಗಿರುತ್ತಾರೆ. ಏನಾದರೂ ಕೇಳಿಕೊಳ್ಳಿರಿ, ಯಾವುದಾದರೂ ಒಂದು ವರವನ್ನು ಕೇಳಿಕೊಳ್ಳಿರಿ.”

ಆಗ ಬಡಗಿಯು ಸುಮ್ಮನಿದ್ದು ಯೋಚಿಸಿನೋಡಿದನು. ಸ್ವಲ್ಪ ಹೊತ್ತಿನ ನಂತರ ತನ್ನ ಹೆಂಡತಿಯನ್ನು ಕೇಳಿದನು—“ ಹಾಗಾದರೆ-ನಿನ್ನಿಷ್ಟವೇನಿದೆ ಹೇಳಿಬಿಡು. ನನ್ನಿಂದಾಗದಿರುವ,ಆ ಉಂಗುರವು ದಯಪಾಲಿಸುವಂಥಾ ಸಂಪತ್ತೇನಿದೆ, ಈ ಪ್ರಪಂಚದಲ್ಲಿ ?”

ಆ ಗೃಹಿಣಿಯು ಆಗ ತನ್ನ ಮಕ್ಕಳನ್ನೆಲ್ಲ ನೆನೆದುಕೊಂಡು ಹೀಗೆಂದಳು—“ ನಮ್ಮಿಬ್ಬರನ್ನು ನಂಬಿದ ಈ ಮಕ್ಕಳಿಗೆಲ್ಲ ಆಸ್ತಿಯ

ನ್ನಾದರೂ ಮಾಡಿ ಹೋಗಬೇಕು. ಈಗ ಈ ಮನೆಗಳನ್ನೇನೋ ಕಟ್ಟಿಸಿದ್ದೀರಿ. ಆದರೆ ಭೂಮಿ ಕಾಣಿಗಳಿಲ್ಲ, ತೋಟ ಗದ್ದೆಗಳಿಲ್ಲ, ಕೆರೆ ಕಾಲುವೆಗಳಿಲ್ಲ—ಅವುಗಳನ್ನಾದರೂ ಕೊಡಲಿ, ಆ ನಿಮ್ಮ ಉಂಗುರ!"

ಅದಕ್ಕೆ ಆ ಬಡಗಿಯು ನಕ್ಕುಬಿಟ್ಟನು. ಮಾರನೆಯ ದಿನವೇ ಒಂದು ಗಾಡಿಯನ್ನು ಕಟ್ಟಿಸಿಕೊಂಡು, ತನ್ನ ಹೆಂಡತಿ ಮಕ್ಕಳನ್ನು ಕೂರಿಸಿಕೊಂಡು ಊರನ್ನು ಬಿಟ್ಟು ಒಂದು ಹರಿದಾರಿ ಹೋದನು. ಅಲ್ಲಿ ಒಂದು ಸಣ್ಣ ತೊರೆಯಿತ್ತು, ಕೆರೆಯೂ ಇತ್ತು, ಕಾಲುವೆಗಳು ತುಂಬಿಸೂಸುತ್ತಿದ್ದವು. ಹೊಲ, ಗದ್ದೆ, ತೋಟ, ವನ, ಬಯಲುಗಳಿದ್ದ ಒಂದು ವಿಶಾಲವಾದ ಜಾಗವನ್ನು ಅವರಿಗೆ ತೋರಿಸಿದನು. ಅಲ್ಲಿ ದೂರದಲ್ಲಿ ಒಂದು ಸಣ್ಣ ಗುಡ್ಡದ ಮೇಲೆ ಒಂದು ಸೊಗಸಾದ ಮನೆಯಿತ್ತು. ಅಲ್ಲಿ ಅವರನ್ನೆಲ್ಲ ಇಳಿಸಿದನು. ಅಲ್ಲಿ ಕೆಲಸ ಮಾಡುವವರನ್ನೆಲ್ಲ ವಿಚಾರಿಸಿದನು.

"ಇದಾರದು ಈ ನೆಲವೆಲ್ಲ! ಇದನ್ನೆಲ್ಲ ಕ್ರಯಕ್ಕೆ ಕೊಡುತ್ತಾರೆಯೆ?" ಆ ಪ್ರಶ್ನೆಯನ್ನು ಕೇಳಿ ಅಲ್ಲಿದ್ದ ರೈತರು ಹೀಗೆಂದರು—"ದಣಿಯ್ಯೆ, ನೀವು ಯಾವ ಕೆಲಸವನ್ನಾದರೂ ಚೆನ್ನಾಗಿ ಮಾಡುತ್ತೀರಿ. ನೀವು ಮಾಡಿಕೊಟ್ಟ ನೇಗಿಲುಗಳೇ ಇಲ್ಲಿ ಈ ನೆಲವನ್ನೆಲ್ಲ ಹುಲುಸಾಗಿ ಮಾಡಿವೆ. ನಿಮ್ಮ ಕೈಯಲ್ಲಿ ನುರಿತ ಮಕ್ಕಳೇ ಇಲ್ಲಿ ಮನೆ ಮಠ ಕಟ್ಟಿದ್ದಾರೆ—ಇದೆಲ್ಲ ನಿಮ್ಮ ಕಾರ್ಯ ಕುಶಲತೆಯ ಫಲ, ನಿಮ್ಮ ಆಶೀರ್ವಾದ ಬಲ! ಇದೆಲ್ಲ ನಿಮ್ಮದೇ ಆಗಿದೆ. ಆ ಗುಡ್ಡದ ಮನೆಯನ್ನು ಕಟ್ಟಿದವರು ನಾವೆ. ನಿಮ್ಮನ್ನು ಇಲ್ಲಿಗೆ ಕರೆಸಿಕೊಳ್ಳಬೇಕೆಂದಿದ್ದೆವು-ನೀವೇ ಬಂದಿದ್ದೀರಿ. ಇನ್ನು ಇಲ್ಲೇ ಇದ್ದು ಬಿಡಿ!"

ಆಗ ಬಡಗಿಯು ಆಶ್ಚರ್ಯಪಟ್ಟನು. ಆದರೆ ಬಡಗಿಯು

ಹೆಂಡತಿ ಅದಕ್ಕೆಲ್ಲ ಮೈಮರೆಯದೆ ತಾನು ತಂದಿದ್ದ ಸಾವಿರ ಹೊನ್ನುಗಳನ್ನು ಆ ರೈತರೆದುರಲ್ಲಿ ಸುರಿದು—"ಈ ಜಾಗವನ್ನೆಲ್ಲ ನನ್ನ ಮಕ್ಕಳಿಗೆ ಬಿಟ್ಟುಕೊಡಿ. ಅವರು ಇಲ್ಲಿ ಇದ್ದುಕೊಂಡು ಹೊಲ ಮನೆ ಮಾಡಿಕೊಂಡು ಸುಖವಾಗಿರಲಿ. ಈ ಹಣವನ್ನು ನಾನು ಕೂಡಿಟ್ಟದ್ದೇನೆ. ನೀವು ನಿಮ್ಮ ಗುರುಗಳಿಂದ ತೆಗೆದು ಕೊಳ್ಳಬೇಡಿ, ನನ್ನಿಂದ ತೆಗೆದುಕೊಂಡು ಬಿಡಿ" ಹೀಗೆಂದಾಗ ಆ ರೈತರೆಲ್ಲ ಒಪ್ಪಿ ತಮ್ಮ ತಮ್ಮ ಆಸ್ತಿಗಳಲ್ಲಿ ಸ್ವಲ್ಪ ಸ್ವಲ್ಪ ಕೂಡಿಸಿ ಆ ಬಡಗಿಯ ಮಕ್ಕಳಿಗೆ ಬಿಟ್ಟುಕೊಟ್ಟರು.

ವರದ ಉಂಗುರವನ್ನು ಕೇಳಿಕೊಳ್ಳದೆ ತನ್ನ ಮಕ್ಕಳಿಗೆ ಆಸ್ತಿ ಮಾಡಿದಂತಾಯಿತು. ಆ ಬಡಗಿಗೆ ಅದೇ ಒಂದು ಹೆಮ್ಮೆ.

ಆ ಬಡಗಿಯ ಸರಸ ಸಜ್ಜನಿಕೆಯಿಂದ ಅವನ ಕೀರ್ತಿಯು ಎಲ್ಲೆಲ್ಲೂ ಹಬ್ಬಿತು. ಊರಾನೂರುಗಳಿಂದ ಜನಗಳು ಬಂದು ಬಡಗಿಗೆ ನಮಿಸಿ, ತಮ್ಮ ಜೀವನದ ನಷ್ಟ ಕಷ್ಟಗಳನ್ನೆಲ್ಲ ಹೇಳಿ ಕೊಂಡು, ಅವಕ್ಕೆಲ್ಲ ಪರಿಹಾರಗಳನ್ನು ಕೇಳಿಕೊಂಡು ಹೋಗುತ್ತಿದ್ದರು—ಹಾಗೆ ಬಂದವರೆಲ್ಲರಿಗೂ ಅವನ ಮನೆಯಲ್ಲಿ ಊಟ ಉಪಚಾರವೆಲ್ಲ ನಡೆದು ಹೋಗುತ್ತಿತ್ತು.

ಬಡಗಿಯ ಹೆಂಡತಿಯು—ವರವೊಂದು ಉಳಿದೇ ಹೋಯಿತಲ್ಲವೆ, ಅದನ್ನು ಉಪಯೋಗಿಸದೆ ತನ್ನ ಯಜಮಾನನು ಈ ಜನ್ಮವನ್ನು ಕಳೆದುಬಿಡುತ್ತಾನಲ್ಲ—ಎಂದು ಕೊರಗುತ್ತಲೇ ಇದ್ದಳು. ಒಂದು ದಿನವಂತೂ, ಊಟವಾಗಿ, ಮಕ್ಕಳು ಮೊಮ್ಮಕ್ಕಳ ಸಂಗಡ ಸುಖವಾಗಿ ಕುಳಿತಿದ್ದಾಗ ಆ ಉಂಗುರವನ್ನು ದಿಟ್ಟಿಸಿ ನೋಡಿದಳು. ಬಡಗಿಯಾಗಿದ್ದ ತನ್ನ ಗಂಡನ ಕೈ ಹಿಡಿದುಕೊಂಡಳು. ಆ ಉಂಗುರದ ಬೆರಳನ್ನು ಕಣ್ಣಿಗೆ ಒತ್ತಿಕೊಂಡಳು. ಬಡಗಿಯು ಅವಳ ಇಂಗಿತವನ್ನು ಅರಿತು ಕೇಳಿದನು, ನಗುತ್ತಾ—"ಏನು

ಹೇಳಿಬಿಡು ನಿನ್ನಾಸೆ. ಅದು ಒಳ್ಳೆಯದಾದರೆ ಮತ್ತು ಇವರೆಲ್ಲ ಒಪ್ಪುವುದಾದರೆ ಕೇಳಿಕೊಳ್ಳೋಣಂತೆ. ಉಂಗುರದ ವರವಂತೂ ಹಾಗೇ ಕಾದಿದೆ. ಮಂದೇವರ ಪ್ರಸಾದ ಸದಾ ನಮಗಾಗಿ ಕಾದಿದೆ."

ಆಗ ಆ ಗೃಹಿಣಿಯು ತನ್ನ ಮಕ್ಕಳು ಮೊಮ್ಮಕ್ಕಳನ್ನು ಒಂದು ಸಾರಿ ನೋಡಿ—"ಅವರೆಲ್ಲ ಹಾಗಿರಲಿ. ಅವರಿಗೆಲ್ಲ ಬೇಕಾದ್ದೆಲ್ಲ ಮಾಡಿದಿರಿ. ನಿಮಗಾಗಿ ಮತ್ತು ನನ್ನ ಸಲುವಾಗಿ ಈ ಬಾರಿಗೆ ಒಂದು ವರವನ್ನು ಕೇಳಿಕೊಂಡು ಬಿಡಿ." ಎಂದು ಹೇಳುತ್ತಾ ಬಡಗಿಯ ಕಿವಿಯ ಬಳಿಗೆ ಹೋಗಿ ಪಿಸುಮಾತಿನಲ್ಲಿ ಏನೋ ಹೇಳಿದಳು. ಹೇಳಿದವಳೇ ಸೆರಗಿನಿಂದ ತನ್ನ ಮುಖವನ್ನು ಓರೆಮಾಡಿಕೊಂಡು ನಾಚಿ ಕುಳಿತಳು.

ಸುತ್ತ ಇದ್ದ ಹುಡುಗರೆಲ್ಲರ ಗದ್ದಲ ಹೆಚ್ಚಾಯಿತು. ಮನೆಯ ತಾಯಿಯು ಏನೆಲ್ಲ ಹೇಳಿದಳೆಂದು ಕೇಳಲೇಬೇಕೆಂದು ಅವರೆಲ್ಲ ಹಟ ಮಾಡಿ ಕಿರಿಲಿದರು ಚೀರಿದರು, ಕಾಡಿದರು, ಬೇಡಿದರು. ಆಗ ಆ ಬಡಗಿ ತನ್ನ ಹೆಂಡತಿಗೂ ಮತ್ತು ಮಕ್ಕಳಿಗೂ ಹೀಗೆಂದನು—"ಏನೇ ಗೆಳತಿ ಕೇಳು! ಈ ನಿನ್ನ ಸಂತಾನವೆಲ್ಲ ಒಪ್ಪುವುದಾದರೆ ಹಾಗೇ ಆಗಲಿ!" ಎಂದು ಆಕೆಗೆ ಹೇಳಿ, ಆ ಮಕ್ಕಳಿಗೆಂದನು—"ಏನಿರಯ್ಯಾ ಚಿಣ್ಣಣ್ಣಗಳಿರಾ! ನಾನು ರಾಜನಾದರೆ ನಿಮಗೆಲ್ಲ ಒಪ್ಪಿಗೆಯೇ!"

ಅವರೆಲ್ಲ ಕಿರಿಚಿ ಕೇಳಿದರು—"ಹಾಗೆಂದರೇನು?"

ಆಗ ಬಡಗಿಯೆಂದನು—"ನಾನು ರಾಜನಾದರೆ ಕಿರೀಟ ಧರಿಸಿ ಸಿಂಹಾಸನದಲ್ಲಿ ಕೂರುತ್ತೇನೆ. ಸದಾ ಅರಮನೆಯಲ್ಲಿರುತ್ತೇನೆ. ಯಾವಾಗಲೂ ಯುದ್ಧ ಮಾಡುತ್ತಾ ನಾನು ತಿರುಗುತ್ತೇನೆ. ನನ್ನ ಸುತ್ತ ಪಹರೆಯವರಿರುತ್ತಾರೆ. ನೆಲಮುಟ್ಟದೆ, ಯಾವಾಗಲೂ

ಕುದುರೆಯ ಮೇಲೋ, ಆನೆಯ ಮೇಲೋ ಇರುತ್ತೇನೆ. ಸದಾ— ಬೇಟೆ ಅಥವ ಯುದ್ಧ, ಯುದ್ಧ ಅಥವ ಬೇಟೆ! ನಿಮ್ಮ ಜೊತೆ ಮಾತ್ರ ಇಲ್ಲ."

ಆಗ ಆ ಹುಡುಗರು ಕೂಗಿ ಕೇಳಿದರು :—ಆಮೇಲೆ ಎಲ್ಲಾ ಕಥೆಗಳಲ್ಲಿರುವ ರಾಜರಂತೇ ಆಗಿಬಿಡುತ್ತಲ್ಲವೆ? ಆಮೇಲೆ....

ಆಗ ಪುನಃ ಬಡಗಿ ಹೇಳಿದನು— "ಆಮೇಲೆ ಇನ್ನೇನು! ಹೀಗೆ ಎಲ್ಲಿಯಾದರೂ ಕೂರುವ ಹಾಗಿರುವುದಿಲ್ಲ. ಹುಡುಗರು ಮಕ್ಕಳ ಸಂಗಡ ಸೇರುವ ಹಾಗಿರುವುದಿಲ್ಲ. ನಿಮಗೆಲ್ಲ ಕಥೆ ಹೇಳುವ ಹಾಗಿರುವುದಿಲ್ಲ. ರಾಜನಾದರೆ ನಿಮಗೆಲ್ಲ ದೂರ....ದೂರ ....ಬಲುದೂರ!"

ಆಗ ಆ ಹುಡುಗರೆಲ್ಲ—ಕೋಟೆ ಮೇಲೆ ಕುಡುಗೋಲು, ಬೇಲಿಮೇಲೆ ಬೆಲ್ಲಾ....ನಿನ್ನ ಸಂಗ ನಾವು ಬಿಟ್ಟೇಬಿಡುತ್ತೇವೆ... ನೀನು ರಾಜನಾದರೆ... ಆದರೆ, ಖಂಡಿತವಾಗಿ ಕಡಾ ಖಂಡಿತವಾಗಿ ರಾಜನಾಗಬೇಡ ನೀನು." ಹೀಗೆಂದು ಕೂಗಿದವರ ಕಡೆಗೆ ಬೆರಳು ತೋರಿಸಿ ಆ ಬಡಗಿ ಹೆಂಡತಿಯನ್ನು ಹಾಸ್ಯಮಾಡಿದನು.

ಅಂದಿನಿಂದ ಮುಂದೆಂದೂ ಆಕೆಯು ಆ ಉಂಗುರದ ವರದ ಸುದ್ದಿಯನ್ನೇ ಎತ್ತಲಿಲ್ಲ. ಆ ಉಂಗುರವನ್ನು ಮಾತ್ರ ದಿನಕ್ಕೊಮ್ಮೆ ಯಾದರೂ ಕಣ್ಣಿಗೊತ್ತಿಕೊಳ್ಳುತ್ತಿದ್ದಳು. ಅಷ್ಟೇ ಅವಳ ತೃಪ್ತಿ.

ಹೀಗೆ ದಿನಗಳೆಲ್ಲ ಕಳೆದವು. ಉಂಗುರದವರನ್ನು ಕೇಳಿ ಕೊಳ್ಳದೆ ಜೀವನವೆಲ್ಲ ಕಳೆಯಿತು. ಆದರೆ ಬಡಗಿಯು ಮಾತ್ರ ಮಾನವ ಶಕ್ತಿಯನ್ನೇ ಉಪಯೋಗಿಸಿ ಬದುಕಿ ಬಾಳಿದನು. ದೈವಿಕ ವಾದ ಉಂಗುರದ ವರವನ್ನು ಆತನು ಅಪೇಕ್ಷಿಸಲಿಲ್ಲ. ಅದು ತನ್ನ ಬೆನ್ನ ಬಳಿಗೆ ಸಹಾಯಕ್ಕೆ ಇದ್ದೇ ಇದೆಯೆಂದು ಅರಿತಿದ್ದ ಸಾದ್ದರಿಂದ

ಅವನು ಸದಾ ಉತ್ಸಾಹಿತನಾಗಿ, ಹರ್ಷಚಿತ್ತನಾಗಿ, ತನ್ನ ಕೆಲಸ ಮಾಡುತ್ತಿದ್ದನು. ಆದುದರಿಂದಲೇ ಆತನು ತನ್ನ ಜೀವಮಾನ ವನ್ನು ಸುಖವಾಗಿ ಕಳೆದನು.

ಹೀಗೆಯೇ ದಿನಗಳು ಸಂದು ಒಂದು ದಿನ ಶುಭಮುಹೂ ರ್ತದಲ್ಲಿ ಗಂಡ ಹೆಂಡಿರಿಬ್ಬರೂ ಒಂದೇ ದಿನ ಕಾಲವಾದರು. ಅವರಿಬ್ಬರೂ ಒಂದೇ ಸಮಯದಲ್ಲಿ ಒಬ್ಬರ ಪಕ್ಕದಲ್ಲೊಬ್ಬರಿದ್ದು ದೇವಲೋಕಕ್ಕೆ ಸಂದರೆಂದು ಕೇಳಿ ಊರಿಗೆ ಊರೇ ಬಂದು ದರ್ಶನ ಮಾಡಿಕೊಂಡು ಹೋಯಿತು. ಆ ದಿನವೇ ದೊಡ್ಡ ಮೆರ ವಣಿಗೆಯಾಯಿತು. ಅದೇ ದಿನವೇ ಬಡಗಿಯ ಮತ್ತು ಆತನ ಹೆಂಡ ತಿಯ ದೇಹಗಳು ಚೆಂಕಿಯಲ್ಲಿ ಭಸ್ಮವಾದವು. ಊರವರೆಲ್ಲರ ಮನ ದಲ್ಲೂ, ಮಾತಿನಲ್ಲೂ ಅವರಿಬ್ಬರ ನೆನಹುಗಳು ನಲಿದಾಡುತ್ತಿದ್ದವು.

ಬಡಗಿಯ ಮಕ್ಕಳೆಲ್ಲರೂ ಒಟ್ಟಾಗಿ ನಿಂತು ಆತನ ಆಸ್ತಿಯ ನ್ನೆಲ್ಲ ಪಾಲುಮಾಡಿಕೊಂಡರು. ಆದರೆ ಆ ಉಂಗುರ ಒಂದನ್ನು ಮಾತ್ರ ಯಾರೂ ತೆಗೆದುಕೊಳ್ಳಲು ಇಷ್ಟಪಡಲಿಲ್ಲ.

ಊರಿನ ಮಹನೀಯರೆಂದರು—“ ಆ ಉಂಗುರದಲ್ಲಿ ಒಂದು ವರವು ಅಡಗಿದೆಯಂತೆ ! ಅದನ್ನು ಉಪಯೋಗಿಸುವಷ್ಟು ಹೇಡಿ ಯಲ್ಲ ನಾನು, ಕೈಲಾಗದೆ ಕುಸಿದುಬಿದ್ದಾಗ ಮಾತ್ರ ಉಪಯೋಗಿ ಸುತ್ತೇನೆ, ಎಂದು ಬಡಗಿಯಾದ ಆ ಮಹನೀಯನು ಹೇಳುತ್ತಿದ್ದನು. ಅವನು ಸದಾ ಉತ್ಸಾಹಿಯಾಗಿ, ಕಾರ್ಯಶೀಲನಾಗಿದ್ದುದರಿಂದ ಆತನಿಗೆ ದೇವರ ವರವೇ ಬೇಕಾಗಲಿಲ್ಲ. ಈಗ ನೀವಾದರೂ ಅದನ್ನು ಬೆರಳಲ್ಲಿ ಧರಿಸಿ ಉದ್ಧಾರವಾಗುವ ಹಾಗಿಲ್ಲ. ಅದನ್ನು ನಮ್ಮ ದೇವಸ್ಥಾನಕ್ಕೆ ಕೊಟ್ಟುಬಿಡಿರಿ. ಅದು ನಮ್ಮ ನಗರೇಶ್ವರನ ಬೆರಳಲ್ಲಿರಲಿ. ದೇವರ ಉಂಗುರ ದೇವರಿಗೇ ಸೇರಲಿ ! ಈ ಮಾತಿಗೆ ಪ್ರತಿಯಾಗಿ ಆ ಬಡಗಿಯ ಮಕ್ಕಳು ಏನೂ ಹೇಳಲಿಲ್ಲ.

ಉಂಗುರವು ದೇವರ ಕೈ ಸೇರಿತು.
ಆಸ್ತಿಪಾಸ್ತಿಗಳು ಮಕ್ಕಳ ಕೈ ಸೇರಿದವು.
ಬಡಗಿಯು ಪರಲೋಕಕ್ಕೆ ಸಂದನು.
ಹೀಗೆ ಒಳ್ಳೆಯವಸ್ತುವು ಕೆಟ್ಟವನ ಕೈ ಸೇರಿತು; ಕೆಡುಕನ್ನೇ ಕೋರಿತು.
ಕೆಟ್ಟವಸ್ತುವು ಒಳ್ಳೆಯವನ ಕೈ ಸೇರಿತು; ಒಳ್ಳೆಯದನ್ನೇ ಕೋರಿತು.

ಕುದಿ ಕುದಿ ಕುಡಿಕೆ

ಒಂದಾನೊಂದು ಊರು. ಅಲ್ಲಿ ಒಬ್ಬಳು ಹುಡುಗಿ. ಆ ಹುಡುಗಿಗೆ ತಂದೆ ಇರಲಿಲ್ಲ. ತಾಯಿ ಇದ್ದಳು. ಆ ತಾಯಿ ಬಡವಿ. ತಂದೆಯೂ ಇಲ್ಲದೆ ತಾಯಿಯೂ ಬಡವಿಯಾದರೆ ಮಗಳ ಗತಿ ಏನು? ಇನ್ನೇನು ಗತಿ–ಹರುಕು ಲಂಗ, ಹರುಕು ಅಂಗಿ, ಮುರುಕು ರೊಟ್ಟಿ! ಆದರೂ, ನೋಡು, ಆ ಹುಡುಗಿ ಎಂದೂ ಅಳಲಿಲ್ಲ. ಮತ್ತೆ ಇನ್ನೆಂದೂ ಕೊಳಕು ಬಟ್ಟೆ ಹಾಕಲಿಲ್ಲ. ಏಕೆಂದರೆ ಒಬ್ಬರು ಅವಳನ್ನು ಹತ್ತಿರ ಕರೆದು—"ಹಿಡಿಯಮ್ಮಾ ತುಂಗಾ, ನಮ್ಮ ಹುಡುಗರೆಲ್ಲ ತಿಂದು ಇನ್ನು ಒಂದೇ ಒಂದು ಹಿಡಿ ಅವಲಕ್ಕಿ ಉಳಿದಿದೆ. ತಿಂದುಬಿಡು—ಎನ್ನುವರು. ಇನ್ನೊಬ್ಬರು ಅವಳನ್ನು ಹತ್ತಿರ ಕರೆದು—ತುಂಗಾ ಹಿಡಿಯೆ ನಮ್ಮ ಹುಡುಗಿಯ ಲಂಗ, ನಿನಗೆ ಸರಿಯಾಗುತ್ತೇ ನೋಡು, ಹಾಕ್ಕೊಂಡು ನೋಡಮ್ಮಾ"—ಎಂದು ಕರೆದು ಕೊಡುವರು. "ಹೀಗೇ ಬೆಳೆಯಮ್ಮಾ, ಯಾರ ದಯದಿಂದಲಾದರೂ ಬದುಕಿ ಬಾಳಿಕೊಂಡಿರು. ಈ ಊರಿನವರೇ ನಿನಗೆ ತಂದೆ, ಅವರೇ ನಿನಗೆ ತಾಯಿ"—ಹೀಗೆಂದು ಆ

ತುಂಗೆಯ ತಾಯಿ ಹೇಳುತ್ತಿದ್ದಳು. ಆದರೆ ಕಾಲ ಹೀಗೆಯೇ ಇರಲಿಲ್ಲ. ಕಷ್ಟದ ದಿನಗಳು ಬಂದವು. ಆಗ ಒಂದು ದಿನ ಅವರಿಗೆ ಊಟವೇ ಇಲ್ಲ. ಹಿಂದಿನ ಹಗಲೂ ಊಟವಿಲ್ಲ. ರಾತ್ರಿಯೂ ಊಟವಿರಲಿಲ್ಲ! ಮತ್ತು ಆ ದಿನ ಬೆಳಗ್ಗೆಯೂ ಊಟವಿರಲಿಲ್ಲ. ಮಧ್ಯಾಹ್ನದ ಹೊತ್ತಿಗೂ ಊಟ ಸಿಕ್ಕುವ ಭರವಸೆ ಕಾಣಲಿಲ್ಲ. ತುಂಗಮ್ಮನ ತಾಯಿ ಅಳುತ್ತ ಮಲಗಿ ಬಿಟ್ಟಳು. ಆಗಾಗ್ಗೆ ಆಕೆ ಕಣ್ಣುಬಿಟ್ಟು ನೋಡಿ ನೋಡಿ—ಏನು ಮಾಡೋಣೆ ತುಂಗಾ, ಏನುಮಾಡೋಣೇ" ಎಂದು, ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

ಅವರನ್ನು ನೀನೇ ಎಂದು ಮಾತಾಡಿಸುವ ನೆಂಟರಿರಲಿಲ್ಲ. ನೆರೆಮನೆ ಹೊರಮನೆ, ಆಚೆಮನೆ, ಈಚೆಮನೆಗಳಲ್ಲೆಲ್ಲ ಸಾಲ ತಂದಾಗಿತ್ತು. ಇನ್ನು ಸಾಲ ಸಿಕ್ಕದಾಗಿತ್ತು. ಎಲ್ಲೂ ಕೆಲಸ ದೊರಕದು. ಭತ್ತ ಕುಟ್ಟುತ್ತೇನಮ್ಮಾ, ಎಂದರೆ—ನಾವೇ ಕುಟ್ಟಿಕೊಳ್ಳುತ್ತೇವಮ್ಮಾ! ಎನ್ನುವರು. ರಾಗಿ ಬೀಸಲೇನಮ್ಮಾ, ಎಂದರೆ—ನಿನ್ನ ಕೈಲಿ ಬೀಸಿಸಿಕೊಂಡು ನಿನಗೆ ಹಿಟ್ಟು ಕೊಡಬೇಕು. ಅದೇ ಹಿಟ್ಟ ನಾವೇ ರೊಟ್ಟಿ ಮಾಡಿಕೊಂಡು ತಿಂದರಾಗದೆ? ಮೊದಲೇ ದಿನಪಡಿ ಅರೆಪಾವು, ನಮಗೇ ಸಾಲದು–ಎನ್ನುವವರೇ ಬಹಳ ಜನ.

"ಅಮ್ಮಾ ಅಳಬೇಡಮ್ಮಾ, ನಾನು ಎಲ್ಲಿಗಾದರೂ ಹೋಗಿ ಗೆಡ್ಡೆ ಗೆಣಸೊ, ಸೊಪ್ಪು, ಕಾಯಿಯೋ ತರುತ್ತೇನಮ್ಮಾ. ಹುಟ್ಟಿಸಿದ ದೇವರು ಹುಲ್ಲು ಮೇಯಿಸುತ್ತಾನೆಯೆ? ಏನಾದರೂ ತರುತ್ತೇನಮ್ಮಾ. ತಂದೆಯಿದ್ದರು, ಅವರನ್ನ ಕರಕೊಂಡ. ನಮ್ಮ ಅಣ್ಣ ಇದ್ದ. ಅವನನ್ನು ಕರಕೊಂಡ ಇನ್ನು ಇರೋ ನಮಗೂ ಒಂದು ತುತ್ತು ಅನ್ನ ಕೊಡದೆ ನಮ್ಮನ್ನೂ ತನ್ನ ಹತ್ತಿರಕ್ಕೇ ಕರೆದುಕೊಳ್ಳುವುದಾದರೆ ಕರೆದುಕೊಳ್ಳಲಿ ಆ ದೇವರು! ಹೋಗಿಬರ್ತೇನಮ್ಮಾ. ನೀನು ಎದ್ದು ಒಲೆಸಾರಿಸಿ, ಮನೆ ಗುಡಿಸಿ

ಬಾಗಿಲಿಗೆ ರಂಗೋಲಿ ಹಾಕು. ಏಳಮ್ಮಾ, ಏಳು.'' ಎಂದು ಮುದುಕಿಯಾದ ಅವಳಮ್ಮನನ್ನು ಎಬ್ಬಿಸಿ, ಕಣ್ಣೊರಸಿ, ತಾನು ಕೈಕಾಲು ಮುಖ ತೊಳೆದುಕೊಂಡು, ಕುಂಕುಮ ಇಟ್ಟುಕೊಂಡು, ದೇವರಿಗೆ ದೀಪ ಹಚ್ಚಿಟ್ಟು ನಮಸ್ಕಾರ ಮಾಡಿ, ಮನೆಬಾಗಿಲು ಓರೆ ಮಾಡಿಕೊಂಡು,ಮೆಟ್ಟಿಲು ಇಳಿದು ಹೊರಗೆ ಎಲ್ಲಿಗೋ ಹೊರಟಳು.

ತುಂಗೆಗೆ ಎಲ್ಲಿಗೆ ಹೋಗಬೇಕೆಂಬುದು ತಿಳಿಯದು. ಮನೆಗಂತು ಬೇಗ ಬರಬೇಕು. ಏನಾದರೂ ತಿನ್ನುವ ಪದಾರ್ಥ ತರಬೇಕು. ಅದಕ್ಕಾಗಿ ಊರು ದಾಟಿ, ಊರಾಚೆಯ ತೋಪಿಗೆ ಹೋದಳು. ಆ ತೋಪಿನಲ್ಲಿ ಎಲ್ಲೆಲ್ಲೂ ಹಿಪ್ಪೆ ಮರಗಳು ಮತ್ತು ಹೊಂಗೆ ಮರಗಳು. ಹಿಪ್ಪೆ ಹೂವಾದರೂ ಇದ್ದಿದ್ದರೆ ಒಂದೆರಡನ್ನು ಬಾಯಿಗಿಡಬಹುದಾಗಿತ್ತು. ಇನ್ನು ಬೇವಿನ ಹಣ್ಣಾದರೂ ಇದ್ದರೆ ಬಾಯಲ್ಲಿ ಚೀಪಿ, ಚಪಲ ತೀರಿಸಿಕೊಳ್ಳಬಹುದಾಗಿತ್ತು. ಆ ತೋಪಿನಲ್ಲಿ ತುಂಗೆಗೆ ತಿನ್ನುವ ಪದಾರ್ಥ ಏನೂ ಸಿಕ್ಕಲಿಲ್ಲ.

ತುಂಗಾ ಅಲ್ಲಿಂದ ಹೊರಟಳು. ಬೇಲಿ ಸಾಲಲ್ಲಿ ಹುಡುಕುತ್ತ ಹೋದಳು. ಒಂದೆರಡು ಉಪ್ಪಿನ ಹಣ್ಣುಗಳನ್ನು ಬಾಯಿಗಿಟ್ಟು ಕೊಂಡು ಚೀಪುತ್ತ ಹೋದಳು. ಇನ್ನೂ ಮುಂದೆ ತೊಂಡೆಯ ಬಳ್ಳಿಗಳು ಹಬ್ಬಿದ್ದವು. ಅವುಗಳಲ್ಲಿ ಹೂವೇ ಹೊರತು ಕಾಯಿ ಇರಲಿಲ್ಲ. ಇನ್ನೂ ಮುಂದೆ ಹೋದರೆ ಗುಲಗಂಜಿ ಬಳ್ಳಿ. ಅದರ ತುಂಬ ಗುಲಗಂಜಿ. ಒಂದಿಷ್ಟು ಗುಲಗಂಜಿ ಆರಿಸಿಕೊಂಡು ತನ್ನ ಚೀಲಕ್ಕೆ ತುಂಬಿಕೊಂಡಳು—ಆಗ ಅವಳಿಗೆ ಗುಲಗಂಜಿ ಒಗಟು ನೆನಪಾಯಿತು.–

ಅಯ್ಯಯ್ಯೋ, ಗಿಡಗೋಪಾಲಾ
ನಿನಗಾರಿಟ್ಟರೊ ಸಾದಿನಬಟ್ಟಾ !

ಹೀಗೆ ಆ ನುಡಿಯನ್ನೇ ಹೇಳಿಕೊಳ್ಳುತ್ತಾ ಹೊರಟಳು. ಅಲ್ಲೇ ಇತ್ತು ಗಣಪೇಕಾಯಿ. ಇನ್ನೊಂದು ಕಡೆ ಗಜುಗದಕಾಯಿ,

ಮತ್ತೊಂದು ಕಡೆ ಅಳಲೇಕಾಯಿ—ಹೀಗೆ ನಾನಾ ಬಗೆಯ ಕಾಯಿಗಳಿದ್ದವು—ಆದರೆ ಅವು ತಿನ್ನುವಂಥ ಕಾಯಿಗಳಲ್ಲ. ಆದರೂ ಒಂದಿಷ್ಟು ಆ ಕಾಯಿ ಈ ಕಾಯಿಗಳನ್ನು ಆರಿಸಿ ಚೀಲಕ್ಕೆ ತುಂಬಿಕೊಂಡಳು. ಇನ್ನು ಮುಂದಕ್ಕೆ ಹೋಗುವುದಕ್ಕೆ ದಾರಿಯಿರಲಿಲ್ಲ. ಅಲ್ಲೊಂದು ಹೊಳೆಯಿತ್ತು. ಆ ಹೊಳೆಯನ್ನು ದಾಟಿ ಹೋಗಲು ಅವಳಿಗೆ ಮನಸ್ಸಾಗಲಿಲ್ಲ—"ಏನು ಮಾಡೋಣ. ನನ್ನಮ್ಮ ಏನು ಮಾಡುತ್ತಾಳೋ ಕಾಣೆನಲ್ಲಾ. ಒಲೆ ಹೊತ್ತಿಸಿಟ್ಟುಕೊಂಡು ಕಾದಿದ್ದಾಳೋ ಏನೋ. ಈ ಮಗಳಾದ ನಾನು, ಇಲ್ಲಿ ದೂರಬಂದು, ದಾರಿ ತಪ್ಪಿ ಕುಳಿತುಬಿಟ್ಟೆನಲ್ಲಾ." ಎಂದು ಅಲ್ಲೇ ಕುಳಿತು ಏನು ಮಾಡೋಣ ಏನು ಮಾಡೋಣ ಎಂದುಕೊಳ್ಳುತ್ತಿದ್ದಾಗ. . . .

ಏನಾಯಿತು. . . . . ?

ನಾನು ಮುಂದೆ ತಾನು ಮುಂದೆ ಎಂದು ಇಬ್ಬರು ಹೆಣ್ಣು ಹುಡುಗಿಯರು ಓಡಿಬಂದು ನಿಂತರು. ಅವರೊಳಗೆ ಒಬ್ಬಳೆಂದಳು—"ಇವಳೇ ಕಣೇ ತುಂಗಾ, ಆ ಗಂಗಮ್ಮನ ಮಗಳು. ಏನೇ ತುಂಗಾ! ಗಜ್ಜುಗ ಇದ್ದರೆ ತೆಗಿಯೇ ಆಟ ಆಡೋಣ. ಇಲ್ಲಿ ನೋಡೆ, ನಾನು ದೀಪಮ್ಮಾ ಕಣೇ; ಇವಳನ್ನೋಡು ಇವಳೇ ಅನ್ನಮ್ಮ. ನಾವಿಬ್ಬರೂ ನೋಡು, ಬಂದಮ್ಮನ—ಬನದಮ್ಮನ ಮಕ್ಕಳು!"

ತುಂಗೆ ಯಾವುದಕ್ಕೂ ಮಾತಾಡದೇ ಇದ್ದವಳು ಈಗ ಕೇಳಿದಳು—"ಬಂದಮ್ಮ ಎಲ್ಲಿದಾಳೆ?" ಎಂದು ಆಗ ಅವರಿಬ್ಬರೂ ನಗುತ್ತಾ ಹೇಳಿದರು—"ಓಹೋ ಇವಳಿಗೆ ಬನದಮ್ಮನೇ ಬೇಕು—ದೀಪಮ್ಮನೂ ಬೇಡ, ಅನ್ನಮ್ಮನೂ ಬೇಡ. ಲೇ! ಬಾರೆ, ಇರಲಿ, ನಮ್ಮ ಸಂಗಡ ಸ್ವಲ್ಪ ಹೊತ್ತು ಆಟ ಆಡು. ಆಗ ಬರುತ್ತಾಳೆ ಬಂದಮ್ಮ"

ತುಂಗಾ ಆಟಕ್ಕೇಂತ ಕುಳಿತಾಗ ದೂರದಲ್ಲಿ ಸರಸರ ಶಬ್ದವಾಯಿತು. ಆ ಕಡೆ ನೋಡಿದರೆ ಅಲ್ಲಿ ಯಾರು? ಅದೋ, ಯಾರೋ ಬರುತ್ತಿದ್ದರು. ಆಕೆಯೇ ಬಂದಮ್ಮ. ಅವಳೇ ಆ ವನಕ್ಕೆ ಅಮ್ಮ, ಅದಕ್ಕೇ ಅವಳನ್ನು ಬನದಮ್ಮ. ಬಂದಮ್ಮಾ—ಎಂತ ಕರೆಯುತ್ತಿದ್ದರು.

ಆಕೆ, ಬಂದಮ್ಮ ಬಂದಳು. ದೂರದಲ್ಲಿ ನಿಂತು ಕೈ ಸನ್ನೆ ಮಾಡಿದಳು. ತುಂಗೆ ಹೋದಳು ಬಂದಮ್ಮನ, ಬಳಿಗೆ. ಆಕೆಯ ಕಾಲುಗಳೆರಡನ್ನೂ ಹಿಡಿದುಕೊಂಡು ನಮಸ್ಕಾರ ಮಾಡಿದಳು ಆ ತುಂಗಾಮಣಿ.

ಬಂದಮ್ಮ "ಎಲ್ಲಿ ಏಳಮ್ಮ, ಏ ತುಂಗಾ, ಎದ್ದೇಳು. ಕುಂಕುಮ ಇಟ್ಟುಕೊಂಡಿದ್ದೀಯಾ? ನೋಡಿದೆಯಾ, ನೀನೇ ಜಾಣೆ. ತಲೆ ಬಾಚಿಕೊಂಡಿದ್ದೀ. ಲಂಗದ ಹರಕೆಲ್ಲ ಹೊಲಿದುಕೊಂಡಿದ್ದೀ. ಕುಂಕುಮ ಇಟ್ಟುಕೊಂಡಿದ್ದೀ. ನಿಮ್ಮಮ್ಮನಿಗೆ ಹೇಳಿ ಬಂದಿದ್ದೀಯಾ?" ಎಂದಾಗ, ತುಂಗೆ ಕಣ್ಣುತುಂಬ ನೀರುತುಂಬಿಕೊಂಡು ಅವಳ ಮುಖವನ್ನೇ ದಿಟ್ಟಿಸಿ ನೋಡಿದಳು.

ಬಂದಮ್ಮ ಹೇಗಿದ್ದಳು?—ತುಂಗೆಯ ಅಮ್ಮ ಇದ್ದಳಲ್ಲ, ಆಕೆಯ ಅಕ್ಕನ ಹಾಗೇ ಕಾಣುತಿದ್ದಳು. ಹಣೆ ತುಂಬ ಕುಂಕುಮ. ಉದ್ದವಾದ ಜಡೆ. ಕೈತುಂಬ ಬಳೆ. ಕಾಲಿಗೆ ಬಂಗಾರದ ಆಭರಣ. ಸೀರೆ ತುಂಬ ಜರತಾರಿ ಇತ್ತು. ಮತ್ತು ಅವಳ ಮುಖ, ಮುಂಗುರುಳು ಒಂದುಸಾರಿ ನೋಡಿದರೆ ಮತ್ತೆ ಮತ್ತೆ ನೋಡೋಣವೇ ಎನ್ನಿಸುವ ಹಾಗೇ ಇದ್ದವು. ಅಂತು ಒಂದುಸಾರಿ ನೋಡಿದರೆ ಸಾಲದು, ಹತ್ತುಸಾರಿ ನೋಡಬೇಕೆನ್ನಿಸುವುದು. ಅವಳ ರೂಪು ನೋಡಿ ತುಂಗೆ ಮಾತನ್ನೆ ಮರೆತಿದ್ದಾಗ ಬಂದಮ್ಮ ಹೀಗೆ ಕೇಳಿದಳು—"ತುಂಗಾ, ಏನಮ್ಮ, ಬಂದುಬಿಟ್ಟೆ? ಬಹಳ

ಹಸಿವೇನಮ್ಮ ? ಏನು ಮಾಡಲಮ್ಮ ನಾನು? ಇಲ್ಲಿ ನೋಡಮ್ಮ, ಅಲ್ಲಿ ನೋಡಮ್ಮ, ನಾನು ಏನನ್ನೂ ಬಚ್ಚಿಟ್ಟಿಲ್ಲಮ್ಮ ! ಏನು ಬೇಕಾದರೂ ತೆಗೆದುಕೊಂಡು ಹೋಗು. ನಿನ್ನಂಥವಳಿಗೆ ಇಲ್ಲಾಂತ ಯಾರೆಂದಾರಮ್ಮ ! " ಇಷ್ಟು ಹೊತ್ತಿಗೆ ಏನೋ ಕಡ್ಡಿ ಸಟಕ್ಕೆಂತು. ನಮ್ಮ ತುಂಗಾ ಆ ಕಡೆ ತಿರುಗಿ ನೋಡಿದಳು. ಆಗ ಏನೋ ಆಗಿ ಹೋಯಿತು, ಮಾಯ !

ಬನದಮ್ಮ ಇದ್ದ ಜಾಗದಲ್ಲಿ ಒಂದು ಪುಟ್ಟಾಣಿ ಕುಡಿಕೆ ಇತ್ತು. ಅದನ್ನು ಇನ್ನೇನು ತೆಗೆದುಕೊಳ್ಳಬೇಕು ಕೈಗೆ, ಎನ್ನುವಷ್ಟರಲ್ಲಿ ಆ ದೀಪಮ್ಮ, ಎಲ್ಲಿದ್ದಳೋ ಏನೋ, ಸರಕ್ಕನೆ ಓಡಿಬಂದು ಆ ಕುಡಿಕೆ ತನಗೇ ಬೇಕೆಂದು ಕಿತ್ತುಕೊಂಡು ಬಿಟ್ಟಳು.

"ನಿನಗೆ ಬೇಕಾದರೆ ಅದು ನನ್ನ ಹತ್ತಿರ ಆಟ ಆಡಿ ಗೆದ್ದುಕೋ ! "—ಎಂದು ಹಟಹಿಡಿದು ಕೂತುಕೊಂಡಳು. ಆಗ ತುಂಗೆ ಆಟಕ್ಕೆ ಕುಳಿತುಕೊಂಡಳು. ಎಷ್ಟು ಚುರುಕಾಗಿ ಚೆನ್ನಾಗಿ ಗಜ್ಜುಗ ಆಡಿದರೂ ಗೆದ್ದುಕೊಳ್ಳುವುದೇ ಕಷ್ಟವಾಯಿತು ; ಅದೂ ಅಲ್ಲದೆ ಮನೆಗೆ ಬೇರೆ ಹೊತ್ತಾಗಿತ್ತು. ತುಂಗೆಯ ತಾಯಿ ಕಾದುಕೊಂಡು ಕೂತಿರುತ್ತಾಳೆ. ಏನು ಮಾಡಬೇಕು ?

"ನೀನು ಸರಿಯಾಗಿ ಆಡುತ್ತ ಇಲ್ಲ, ನೀನು ಗೆದ್ದುಕೊಳ್ಳುವುದು ಹೇಗೆ?'' ಎಂದು ದೀಪಮ್ಮ ಮೂದಲಿಸಿ ಕಳಿಸಿದಳು. ತುಂಗಾ ಬನದೇವಿ ಕೊಟ್ಟಿದ್ದ ಕುಡಿಕೆಯನ್ನು ಅಲ್ಲೇ ಬಿಟ್ಟು ಮನೆಗೆ ಹಿಂತಿರುಗಿದಳು. ಊರ ಬಳಿಗೆ ಬಂದಾಗ " ಏನುಗತಿ ಮಾಡಲಿ ! ಅಮ್ಮಗೆ ಏನು ಹೇಳಲಿ? ಹೇಗೆ ಸಮಾಧಾನ ಮಾಡಲಿ? ಈ ದಿನ ಊಟಕ್ಕೇನುಗತಿ ? '' ಹೀಗೆಂದು ತಲೆ ತಗ್ಗಿಸಿಕೊಂಡು ಬರುತ್ತಿದ್ದಾಗ................

"ಲೇ ೯೯ ತುಂಂಂಗಾ ಆಆಆ ! ನಂಗಿಷ್ಟು ಗುಲಗಂಜಿ

ಕೊಡೇ!" ಎಂದು ಕೂಗುತ್ತಾ ಒಬ್ಬ ಹುಡುಗಿ ಓಡಿಬಂದಳು.

ಆಗ ತುಂಗೆಗೆ ನೆನಪಾಯಿತು ತನ್ನ ಚೀಲದ ವಿಚಾರ..ಸರಿ, ಕೈಹಾಕಿದಳು. ಒಂದಿಷ್ಟು ಗುಲಗಂಜಿ ತೆಗೆದು ಕೊಟ್ಟಳು.

"ಹಿಡಿಯಮ್ಮ ನಿನ್ನ ಗುಲಗಂಜಿಗೆ ಬದಲಾಗಿ!"-ಎಂದು ಒಂದು ಬೊಗಸೆಯಷ್ಟು ಅಕ್ಕಿಹಾಕಿ ಅವಳ ಚೀಲಕ್ಕೆ ಆ ಹುಡುಗಿ ಹೊರಟು ಹೋದಳು.

"ಲೇ ೀೀ, ತುಂಗೇ ೀೀ! ಒಂದೆರಡು ಮೂರು ನಾಕು ಗಜ್ಜುಗ ಕೊಡೇಮ್ಮ!" ಎಂತ ಇನ್ನೊಂದು ಹುಡುಗಿ ಓಡೋಡಿ ಬಂದುಬಿಟ್ಟಳು. ಆಗ ತುಂಗಾ ತನ್ನ ಚೀಲಕ್ಕೆ ಕೈಹಾಕಿ ಒಂದು ಹಿಡಿ ಗಜ್ಜುಗದ ಬೀಜ ಆ ಎರಡನೆ ಹುಡುಗಿಗೆ ಕೊಟ್ಟಳು. ಆಗ ಆ ಎರಡನೆ ಹುಡುಗಿ ತುಂಗಾನ ಚೀಲಕ್ಕೆ ಒಂದು ಬೊಗಸೆ ಹೆಸರುಕಾಳು ಸುರಿದು ಹೊರಟು ಹೋದಳು.

"ಲೇೀೀ, ತುಂಗೀೀೀ! ಒಂದೇ ಒಂದು ಗಣಪೇಕಾಯಿ ಕೊಡೇ!" ಎಂತ ಇನ್ನೊಂದು ಹುಡುಗಿ ಓಡೋಡಿ ಬಂದಳು. ಒಂದೇ ಒಂದು ಗಣಪೇಕಾಯಿ ಇತ್ತು. ಏನು ಮಾಡುತ್ತಾಳೆ? ಕೊಟ್ಟುಬಿಡೋಣ ಅಂದರೆ ಕಾಡಿಂದ ತಂದದ್ದೆಲ್ಲ ಹೀಗೇ ಖರ್ಚಾಗುತ್ತಲ್ಲ. ಆಗಲಿ, ಏನಾದರೂ ಕಾಳೋ ಬೇಳೆಯೊ ಕೊಡುತ್ತಾರಲ್ಲ!—ಹೀಗೆಂದು ಆ ಗಣಪೇಕಾಯಿಯನ್ನೂ ಕೊಟ್ಟುಬಿಟ್ಟಳು.

ಆದರೆ, ಆ ಹುಡುಗಿಯರೆಲ್ಲ ಯಾರೆಂದು ತುಂಗಾ ಯೋಚಿಸಲೂ ಇಲ್ಲ. ಹಿಂತಿರುಗಿ ನೋಡಲೂ ಇಲ್ಲ. ತನ್ನ ಊರಿನ ಒಡನಾಡಿಗಳೇ ಇರಬಹುದೆಂದು ಭಾವಿಸಿಕೊಂಡಿದ್ದಳು. ಹಾಗೂ ಹಿಂದಿರುಗಿ ನೋಡಿದಳು. ಊರ ಬಾಗಿಲು ಆಗತಾನೇ ಕಾಣಬಂತು. ಹೆಣ್ಣು ಹುಡುಗಿಯರು ಎಲ್ಲಿದ್ದರೋ, ಅವರೆಲ್ಲ ಎಲ್ಲಿಯವರೊ ಅವಳಿಗೆ ಗೊತ್ತಾಗಲಿಲ್ಲ. ಹಾಗೇ ಆಶ್ಚರ್ಯಪಡುತ್ತ

ಮನೆಗೆ ಬಂದಳು.

ದಾರಿಯಲ್ಲಿ ಯಾವ ಹುಡುಗಿಯೂ ಮಾತಾಡಿಸಲಿಲ್ಲ. ಅವರೆಲ್ಲ ಇವಳ ಚೀಲದ ಕಡೆಗೇ ನೋಡುತ್ತ ಆ ಎಂದು ನಿಂತಿದ್ದರು. ಹೊಟ್ಟೆಗಿಲ್ಲದ ತುಂಗಾ ಏನು ಮಾತಾಡಲೂ ಇಷ್ಟಪಡಲಿಲ್ಲ.

ಮನೆಗೆ ಬಂದಳು. ತುಂಗೆಯ ತಾಯಿ ಗಂಗಮ್ಮ "ಬಂದೆಯಲ್ಲಮ್ಮ ಸಧ್ಯ! ಬೀಸೋಕಲ್ಲ ಒಳಗೆ ಒಂದು ಕೊಂಚ ಹಿಟ್ಟು ಹಾಗೇ ಉಳಿದಿತ್ತು. ಅದನ್ನೇ ಬಳಿದು ತೆಗೆದು ಗಂಜಿ ಕಾಯಿಸಿದ್ದೇನೆ. ಕುಡಿಯುಮ್ಮ" ಎಂದು ಒಂದು ಕರಟದಲ್ಲಿ ಒಂದಿಷ್ಟು ಕೊಟ್ಟಳು. ತುಂಗಾ ಒಳಗೆ ಹೋಗಿ ಚೀಲ ಇಟ್ಟು, ಕಾಲು ತೊಳೆದು, ದೇವರಿಗೆ ಅಡ್ಡಬಿದ್ದು ಬಂದು, ಆ ಗಂಜಿ ಕುಡಿದು ಹಾಯಾಗಿ ಮಲಗಿಬಿಟ್ಟಳು.

ಕಾಡಿಗೆ ಹೋದಾಗ ಬೆಳಗ್ಗೆ, ಕಾಡು ಬಿಟ್ಟಾಗ ಮಧ್ಯಾಹ್ನ, ಊರು ತಲಪಿದಾಗ ಸಂಜೆಯಾಗಿತ್ತು. ಅಂತು ಒಂದು ದಿನ ಕಳೆದೇ ಹೋಯಿತು. ರಾತ್ರಿ ಗಟ್ಟನಿದ್ದೆಯಲ್ಲಿ ಕಾಲಕಳೆಯಿತು.

ಮಾರನೆ ದಿನ ತುಂಗಾ ಮುಂಚೆ ಹೊರಟಳು. ಈ ಬಾರಿ ಬಂದಮ್ಮನ್ನ ನೋಡಿ ಆ ಕುಡಿಕೆ ತರಲೇಬೇಕೆಂದು ಹಟಹಿಡಿದು ಹೊರಟುಬಿಟ್ಟಳು.

ಬೇಲಿ ಬಳಿ ಗುಲಗಂಜಿ, ಬಳ್ಳಿಯ ಬಳಿ ಗಣಪೇ ಕಾಯಿ, ಗಜ್ಜುಗ ಮುಂತಾದ್ದೆಲ್ಲ, ಏನೇನೆಲ್ಲ ಸಿಕ್ಕಿದವೋ ಅವನ್ನೆಲ್ಲ ತನ್ನ ಬಳಿಯಲ್ಲಿ ಚೀಲದಲ್ಲಿ ತುಂಬಿಕೊಂಡೇ ಹೊರಟಳು. ದಾರಿಯಲ್ಲಿ ಹಕ್ಕಿಗಳು ಹಾಡು ಹೇಳುತ್ತಿದ್ದವು. ಪುಟ್ಟ ಝರಿಗಳು ಓಡಿ ಹೋಗುತ್ತಿದ್ದವು. ಬಿದಿರುಮೆಳೆಗಳಲ್ಲಿ ಗಾಳಿ ಗುಸಗುಟ್ಟುತ್ತ ಇತ್ತು. ಅವಸರವಾದರೂ, ಅಲ್ಲಿ ಇಲ್ಲಿ ನೋಡಿಕೊಂಡೇ ಹೊರಟಳು ನಮ್ಮ ತುಂಗಾ.

ನಡುಕಾಡು ಬಂತು. “ಬಂದಮ್ಮ, ಬಂದಮ್ಮ!” ಎಂದು ತುಂಗಾ ಕೂಗಲಾರಂಭಿಸಿದಳು. ಆಗ ಇಬ್ಬರು ಹುಡುಗಿಯರು ಓಡಿಬಂದರು. ಹಿಂದಿನ ದಿನ ಬಂದವರೇ.

“ಬಂದಳಲ್ಲಮ್ಮ ಬಂದಮ್ಮನ್ನ ಕಂಡವಳು! ಬರುತ ಇದ್ದರೆ ಬಾರೇ, ನಿನ್ನ ಕುಡಿಕೆ ಬೇಕಾದರೆ ಆಟದಲ್ಲಿ ಗೆದ್ದುಕೊ” —ಎಂದು ಒಬ್ಬಳು ಮುಂದೆ ಬಂದಳು.

ಹೀಗೆ ಮುಂದೆ ಬಂದವಳೇ ಅನ್ನಮ್ಮ. ಅವಳು ಮತ್ತೆ ಹೇಳಿದಳು—“ನಿನ್ನೆ ನೀನು ಹೋದಮೇಲೆ ದೀಪಮ್ಮ ನನ್ನ ಸಂಗಡ ಗಜ್ಜುಗ ಆಡಿ ಸೋತು ಈ ಕುಡಿಕೆ ನನಗೆ ನನಗೇ ಕೊಟ್ಟಿದ್ದಾಳೆ. ನನ್ನೊಂದಿಗೆ ಆಡು, ಗೆದ್ದುಕೋ, ಬರುತ ಇದ್ದರೆ ಬಾರೆ ಆಟಕ್ಕೆ!” ಆಗ ತುಂಗೆ ಆಟಕ್ಕೆ ಕೂತುಬಿಟ್ಟಳು. ಈ ದಿನ ಗೆಲ್ಲಲೇಬೇಕೆಂದು ಅವಳ ಹಟ.

ಈ ದಿನ ಇನ್ನೇನು ಗೆಲ್ಲಬೇಕು ಎನ್ನುವಷ್ಟರಲ್ಲಿ ಎಲ್ಲೋ ಏನೋ ತುಪ ತುಪ ಬಿದ್ದ ಶಬ್ದವಾಯಿತು. ಅತ್ತಕಡೆ ತಿರುಗಿದಳು. ಆಗ ಅನ್ನಮ್ಮ ಹೇಳಿದಳು—“ದೀಪಮ್ಮನ ಸಂಗಡ ನಿನ್ನೆ ಸೋತೆ. ಅನ್ನಮ್ಮನ ಸಂಗಡ ಈ ದಿನ ಸೋತೇ ನೀ ಸೋತೆ!” ಆ ಕುಡಿಕೆಯ ಕಡೆ ಒಂದು ಸಾರಿ ಪ್ರೀತಿಯಿಂದ ನೋಡಿ ಕಣ್ಣೀರು ಹಾಕಿ ಎದ್ದು ಒಂದೊಂದೇ ಹೆಜ್ಜೆ ಇಟ್ಟು ಹೊರಟಳು. ಎಷ್ಟು ಬೇಗ ಬೇಗ ನಡೆಯಬೇಕೆಂದರೂ ಆಗದಲ್ಲ. ಕುಡಿಕೆ ಸಿಗದಲ್ಲ, ಹೇಗೆ ಆಟದಲ್ಲಿ ಗೆದ್ದುಕೊಳ್ಳಲಿ—ಎಂದು ಯೋಚಿಸುತ್ತ ಮನೆಯ ಕಡೆ ಹೊರಟಳು.

ಹೆಜ್ಜೆ ಹಾಕುತ್ತ ಹಾಕುತ್ತ ಬಂದಾಗ ಊರ ಬಳಿ ಹಿಂದಿನ ದಿನದ ಹಾಗೇ ಈ ದಿನವೂ ಒಬ್ಬಳು ಹುಡುಗಿ ಓಡಿ ಬಂದಳು— “ಎಷ್ಟು ಹೊತ್ತಮ್ಮ ಕಾಯುತ್ತ ಇರೋದು? ಕಾಡಿಂದ ತಂದಿದ್ದೀ

ಯಲ್ಲ ಗುಲಗಂಜಿ. ನನಗಿಷ್ಟು ಕೊಡಮ್ಮ. ಈ ದಿನ ನಾಲ್ಕು ಬಿಲ್ಲೆ ಕೊಡುತ್ತೇನಮ್ಮ ಹಿಡಿ!'' ಹೀಗೆಂದ ಹುಡುಗಿಗೆ ಒಂದಿಷ್ಟು ಗುಲಗಂಜಿ ಕೊಟ್ಟಳು. ಸ್ವಲ್ಪ ದೂರ ಹೋದ ಕೂಡಲೆ ಇನ್ನೊಬ್ಬಳು ಬಂದಳು. ಅವಳು ಕೇಳಿದಳು ಹೀಗೆ—'' ತುಂಗಾ! ಏ ಗಂಗಮ್ಮನ ಮಗಳೇ! ನನಗೊಂದೆರಡು ಮೂರು ನಾಲ್ಕು ಗಜ್ಜುಗ ಕೊಡೇ. ಹೊಸಾ ಹೊಸ ಬಟ್ಟೆ ಚೂರು ಇದೆ ನೋಡಮ್ಮ! ಹಿಡೀ, ಹಿಡಿಯೇ'' ಎಂದು ಗಜ್ಜುಗ ಇಸುಗೊಂಡು ಹೊಸ ಬಟ್ಟೆ ಮಡಿಸಿ ಚೀಲಕ್ಕೆ ಹಾಕಿ ಹೊರಟು ಹೋದಳು.

ಇವರೆಲ್ಲ ಯಾರು? ಎಲ್ಲಿಂದ ಬಂದರು? ಯಾಕೆ ನಿತ್ಯ ಹೀಗೆ ಬರುತ್ತಾರೆ—ಎಂದು ಯೋಚಿಸುವಷ್ಟು ವಿರಾಮವೇ ಇರಲಿಲ್ಲ ಈ ನಮ್ಮ ತುಂಗಮ್ಮನಿಗೆ. ಮನೆಗೆ ಹೊತ್ತಾಗಿತ್ತು. ಗಂಜಿಯೋ, ಮುದ್ದೆಯೋ, ಏನು ಮಾಡಿದರೂ ತುಂಗಾನ್ನ ಬಿಟ್ಟು ಗಂಗಮ್ಮ ತೆಗೆದುಕೊಳ್ಳುತ್ತಿರಲಿಲ್ಲ. ಅಮ್ಮ ಹಸುಗೊಂಡೇ ಇರುತ್ತಾಳಲ್ಲ ಎಂದುಕೊಳ್ಳುತ್ತ ಸರಸರನೆ ತುಂಗ ಮನೆಗೆ ಬಂದಳು.

ಹಳ್ಳಿ ಬಂತು, ಕೇರಿ ಬಂತು, ಮನೆ ಬಂತು. ತುಂಗಾ ಬಾಗಿಲು ದಾಟ ಒಳಗೆ ಹೋದಳು. ಚೀಲವನ್ನು ಗೂಟಕ್ಕೆ ನೇತುಹಾಕಿದಳು. ಕೈ ಕಾಲು ತೊಳೆದಳು. ಕುಂಕುಮ ಇಟ್ಟು ದೇವರ ಪ್ರಸಾದವನ್ನು ಮುಡಿದು, ನಮಸ್ಕಾರಮಾಡಿ, ಒಂದು ಪ್ರಾರ್ಥನೆ ಹೇಳಿ ಮತ್ತೆ ನಮಸ್ಕಾರ ಮಾಡಿ ಬಂದಳು.

ಆದಿನ ಅಮ್ಮನ ಕಡೆ ನೋಡಿದಳು. ಅವಳಮ್ಮ ಬಂದಮ್ಮ ಇದ್ದ ಹಾಗೇ ಇದ್ದಳು. "ಅಮ್ಮ! ನಿನಗೂ ನಮಸ್ಕಾರಮಾಡುತ್ತೇನಮ್ಮ! ಅಮ್ಮ ಅಮ್ಮಾ! ನನ್ನಮ್ಮ!'' ಎಂದುಕೊಳ್ಳುತ್ತಾ ಕಣ್ಣೀರು ಸುರಿಸಿಕೊಂಡು ಕಾಲು ಮುಟ್ಟಿ ನಮಸ್ಕಾರ ಮಾಡಿದಳು.

ತುಂಗೆಯ ತಾಯಿಗೆ ತುಂಬಾ ಸಂತೋಷವಾಯಿತು.

“ಬಾರಮ್ಮ ಉಣ್ಣೇಳು!”—ಎಂದು ಒಂದು ತರಗೆಲೆ ಹಾಕಿ ಅದರ ತುಂಬ ಬಡಿಸಿದಳು.

ತುಂಗಾ ನೋಡಿದಳು. ಅವಳ ಕಣ್ಣನ್ನ ಆವಳೇ ನಂಬ ದಂತಾಗಿತ್ತು. ಆ ಎಲೆಯಲ್ಲಿ ಉದುರಾದ ಅನ್ನ, ಒಂದು ದೊನ್ನೆ ಯಲ್ಲಿ ಸಾರು ಮತ್ತೆ ಹೆಸರುಉಸಲಿ ಇದ್ದವು. ಇವೆಲ್ಲ ಹೇಗೆ ಬಂದವು? ತನ್ನ ತಾಯಿ ತುಂಬಾ ಕಷ್ಟಪಟ್ಟು ಕೆಲಸ ಮಾಡಿರ ಬೇಕು. ಕೇಳಿದರೆ ತನಗೇ ತಡೆಯದಷ್ಟು ಅಳು ಬಂದುಬಿಡುತ್ತದೆ. ಏನೂ ಕೇಳಲಿಲ್ಲ. ಕಣ್ಣೊರಸಿಕೊಳ್ಳುತ್ತ ಉಂಡುಬಿಟ್ಟಳು.

ಇತ್ತ ತುಂಗಾನ ತಾಯಿ ಹುಡುಗಿಯನ್ನು ಏನೂ ಕೇಳಲಿಲ್ಲ. ಏನಾದರೂ ಹೇಳುತ್ತಾಳೆ ಹೆಚ್ಚಿನ ವಿಚಾರವಿದ್ದರೆ, ದಣಿದು ಬಂದಿ ದ್ದಾಳೆ ಮಲಗಿಕೊಳ್ಳಲಿ, ಎಂದು ಸುಮ್ಮನಾದಳು. ಅವಳೂ ಮಾತಾಡಲಿಲ್ಲ. ಇವಳೂ ಮಾತಾಡಲಿಲ್ಲ.

ಈ ದಿನ ತುಂಗಾನ ತಾಯಿ ಗಂಗಮ್ಮ, ತುಂಗಾ ಇಟ್ಟು ಹೋಗಿದ್ದ ಚೀಲದಲ್ಲಿ ಏನಿದೆ ನೋಡೋಣವೆಂದು ಕೈಹಾಕಿದರೆ— ಆಶ್ಚರ್ಯ! ಆಶ್ಚರ್ಯ! ಅದರಲ್ಲಿ ಅಕ್ಕಿಯಿತ್ತು, ಹೆಸರುಕಾಳಿತ್ತು. ಆಕೆ ಬಹಳ ಸಂತೋಷಪಟ್ಟು ಅನ್ನಮಾಡಿ, ಸಾರುಮಾಡಿ, ಉಸಲಿ ಮಾಡಿದ್ದರು. ತನ್ನ ಮಗಳು ಗಂಡಸಿಗಿಂತ ಹೆಚ್ಚಾಗಿ ಸಂಪಾದಿಸು ವಳಲ್ಲ, ಎಂದು ತುಂಬಾ ಸಂತೋಷಪಟ್ಟುಕೊಂಡಿದ್ದಳು.

ತುಂಗಾ ಮಾರನೆ ದಿನ ಎದ್ದು ಹಿಂದಿನ ದಿನದಂತೆ ಮೈ ತೊಳೆದು ಬೇರೆ ಬಟ್ಟೆ ಉಟ್ಟು, ತಲೆ ಬಾಚಿ ಜಡೆಹೆಣೆದುಕೊಂಡು, ಕುಂಕುಮ ಇಟ್ಟುಕೊಂಡು ದೇವರಿಗೆ ನಮಸ್ಕಾರ ಮಾಡಿ ಹೊರಟು ಬಿಟ್ಟಳು. ತನ್ನ ತಾಯಿಗೆ ಏನೂ ಹೇಳಲಿಲ್ಲ. ಈ ದಿನವಾದರೂ ಬಂದಮ್ಮ ಕೊಟ್ಟ ಕುಡಿಕೆಯನ್ನು ಹೇಗಾದರೂ ಮಾಡಿ ಮನೆಗೆ ತರಬೇಕೆಂದು ಮನಸ್ಸು ಮಾಡಿ ಹೊರಟಳು. ಅದನ್ನು ತಂದು

ತನ್ನ ತಾಯಿಯ ಕಾಲು ಬಳಿಯಿಟ್ಟು ನಮಸ್ಕಾರ ಮಾಡಬೇಕೆಂದು ಆಸೆಪಟ್ಟಿದ್ದಳು.

ಊರು ದಾಟಿದಳು. ಕೆರೆ ಏರಿ ಮುಗಿಯಿತು. ಅನಂತರ ಹೊಲ ಗದ್ದೆಗಳೆಲ್ಲ ಹಿಂದಾದವು. ಕಾಡುದಾರಿ ಹಿಡಿದಳು. ಗುಲಗಂಜಿ, ಗಜ್ಜುಗ, ಗಣಪೇಕಾಯಿ—ಇವನ್ನೇ ಆರಿಸಿಕೊಂಡಳು. ಇನ್ನೂ ಮುಂದೆ ಹೋದಳು. ಅಳಲೇಕಾಯಿಗಳೂ, ಗುಂಡು ಕಲ್ಲುಗಳೂ, ಹೂವುಗಳೂ ಸಿಕ್ಕಿದವು. ಅವನ್ನೆಲ್ಲ ಚೀಲಕ್ಕೆ ತುಂಬಿ ಕೊಂಡು ತುಂಗೆ ಬಂದಳು ಕಾಡಿನ ನಡುವಿಗೆ.

"ದೀಪಮ್ಮಾ! ದೀಪಮ್ಮಾ!"—ಈ ಕೂಗು ಮತ್ತೆ ಮತ್ತೆ ಕಾಡಿನಲ್ಲೆಲ್ಲ ಹೊಳಲಿಟ್ಟಿತು. ಮತ್ತೆ ಕೂಗಿದಳು ತುಂಗಾ— "ದೀಪಮ್ಮ! ದೀಪಮ್ಮ!" ಆಗ ಇದ್ದಕ್ಕಿದ್ದ ಹಾಗೇ ಅಲ್ಲಿ ಇಲ್ಲಿ ಎಲ್ಲೆಲ್ಲೂ ಬೆಂಕಿಯ ಬೆಳಕಾಗಿ ಆರಿಹೋಯಿತು. ದೀಪಮ್ಮ ಕಣ್ಣೆದುರು ಬರಲಿಲ್ಲ.

"ಅನ್ನಮ್ಮಾ! ಅನ್ನಮ್ಮಾ!"—ಈ ಕೂಗು ಕೇಳಿಸಿತು ಒಮ್ಮೆ! ಮತ್ತೊಮ್ಮೆ ಅವಳು ಕೂಗುವುದರಲ್ಲೇ ಗಿಡದಿಂದ ಗಿಡಕ್ಕೆ ಆ ಕೂಗು ಹಾರಿದಂತೆ ಕಂಡಿತು. ಆ ಕೂಗು ಎಲ್ಲೆಲ್ಲಿ ಕೇಳಿಸಿತೋ ಅಲ್ಲೆಲ್ಲ ಗಿಡಗಳಲ್ಲೆಲ್ಲ ಹಣ್ಣುಗಳು ಕಾಣಿಸಿಕೊಂಡವು. ಅನ್ನಮ್ಮ ಮಾತ್ರ ಕಣ್ಣೆದುರು ಬರಲಿಲ್ಲ.

"ಬಂದಮ್ಮಾ! ಬನದಮ್ಮಾ! ಏ ನನ್ನಮ್ಮಾ!" ಎಂತ ಮತ್ತೆ ಮತ್ತೆ ಕೂಗಿದಾಗ, ಕಾಡಿಗೆ ಕಾಡೇ ಸಾವಿರಾರು ಬಾಯಿ ನಲ್ಲಿ ಕೂಗಿದಂತಾಯಿತು. ಕಾಡಿಗೆ ಕಾಡೇ ಗುಜಗುಜ ಎನ್ನುತ್ತ ಲಿತ್ತು. ಆಗ ಯಾವುದೋ ಒಂದು ರೂಪು ಕಣ್ಣಿಗೆ ಕಾಣಿಸುವಂ ತಾಯಿತು.

ಅದಾರು! ಯಾರು ನನಗೇನು ಗೊತ್ತು! ತುಂಗೆಗೂ ತಿಳಿ

ಯದು. ಇದಾರಮ್ಮ ಇದು ಎಂದು ಕೇಳುತ್ತಿರುವಾಗ ಆ ರೂಪದವಳು ಕೇಳಿದಳು—"ತುಂಗಾ, ನಾನಾರು ಹೇಳು!"

ಆಗ ತುಂಗೆ ಎಂದಳು—"ನೀನು ಯಾರೆಂತ ಹೇಳಲಿ? ನಿನ್ನ ಮೊಗ, ನಿನ್ನ ಒಡವೆ, ನಿನ್ನ ಸೀರೆ, ನಿನ್ನ ದನಿ, ನಿನ್ನ ರೂಪೆಲ್ಲ ನೋಡಿದರೆ, ಬಂದಮ್ಮನ ಮಗಳೆಂತಲೇ ಕಾಣುತ್ತೆ. ದೀಪಮ್ಮನ್ನ ಕಂಡಿದ್ದೇನೆ, ಅನ್ನಮ್ಮನ್ನ ಕಂಡಿದ್ದೇನೆ. ನಿನ್ನ ಮಾತ್ರ ಕಂಡಿರಲಿಲ್ಲ. ನೀನು ನೀರಮ್ಮನೇ? ಏನೇ ಜಲದೇವಿ? ಗಂಗಾದೇವಿಯೋ? ಆಹಾ ನೀರಮ್ಮನೇ ಸರಿ!" ಎಂದು ಚಪ್ಪಾಳೆ ಹೊಡೆದು ನಕ್ಕು ನಲಿದು ಬಿಟ್ಟಳು.

ಆಗ ನೀರಮ್ಮ ಹೇಳಿದಳು—"ಬಾ ಮತ್ತೆ ನನ್ನ ಸಂಗಡ ಆಟಕ್ಕೆ. ಗೆದ್ದರೆ ಈದಿನ ನಿನಗೆ ಕುಡಿಕೆ ಸಿಕ್ಕೀತು. ಇಲ್ಲದಿದ್ದರೆ ಇಲ್ಲಮ್ಮ. ಆಟಕ್ಕೆ ಬಾ ಮತ್ತೆ!" ಎಂದು ಬಲಾತ್ಕಾರವಾಗಿ ಹಿಡಿದು ಕೂರಿಸಿಬಿಟ್ಟಳು.

ಹಿಂದಿನ ರಾತ್ರಿ ಅವರಮ್ಮನ ಸಂಗಡ ಸ್ವಲ್ಪ ಆಟ ಹೇಳಿಸಿಕೊಂಡಿದ್ದಳು ತುಂಗಾ. ಈ ದಿನ ಏನೇನು ಅಡ್ಡಿ ಆತಂಕ ಬಂದರೂ ಗಮನ ಕೆಡಿಸಿಕೊಳ್ಳದೆ ಆಟ ಆಡಿ ಗೆದ್ದುಕೊಂಡಳು. ಇನ್ನೇನು ನೀರಮ್ಮನ ಕೈ ಹಿಡಿದು ಕೂರಿಸಿಕೊಂಡು ಕುಡಿಕೆ ಕೊಡು—ಎನ್ನಬೇಕೆಂದು ಕೈ ನೀಡಿದಾಗ ಆದದ್ದೇನು? ಕುಡಿಕೆ ಕೈಗೇ ಸಿಕ್ಕಿತು! ಆದರೆ ನೀರಮ್ಮ ಮಾಯವಾಗಿದ್ದಳು!

ಆ ಕುಡಿಕೆ ಸುಂದರವಾಗಿತ್ತು. ಅದರ ಮೈತುಂಬ ಚಿತ್ತಾರವಿತ್ತು. ಎಲೆ, ಬಳ್ಳಿ, ಹೂ, ಕಾಯಿಗಳು, ಹಕ್ಕಿಗಳು ಇವೆಲ್ಲ ಇದ್ದವು. ಆನೆ, ಸಿಂಹ, ನರಿ, ಒಂಟೆ, ಹಸು, ಜಿಂಕೆಗಳು, ಕೋತಿ, ಮೊಲ ಚಿಟ್ಟೆ ಜೇನುಗಳೂ ಇದ್ದವು. ಅದರಲ್ಲಿ ಇಡೀ ಕಾಡೇ ಚಿತ್ರಿತವಾಗಿತ್ತು. ಆ ಕುಡಿಕೆಯನ್ನು ಹಿಡಿದುಕೊಂಡು, ಅದರ ತುಂಬ

ಗುಲಗಂಜಿ ತುಂಬಿಕೊಂಡು ಗಜ್ಜುಗ ಗಣಪೇಕಾಯಿಗಳನ್ನು ಆರಿಸಿಕೊಂಡು ಬಂದಳು ಸಂಜೆಯ ವೇಳೆಗೆ ಮನೆಗೆ.

ಈ ದಿನ ದಾರಿಯಲ್ಲಿ ಯಾರೂ ಬಂದು ಕೂಗಲಿಲ್ಲ, ಮಾತಾಡಲಿಲ್ಲ. ತುಂಗಾ ಬೇಗ ಬಂದಳು. ಕೈಕಾಲುತೊಳೆದುಕೊಂಡ ವಳೆ ತನ್ನ ಗೂಡ ಬಳಿಗೆ ಹೋದಳು. ಮೂರು ಗಜ್ಜುಗ ಇಟ್ಟು ಅವುಗಳ ಮೇಲೆ ಕುಡಿಕೆ ಇಟ್ಟಳು. ಆ ಕುಡಿಕೆಯು ಮುಚ್ಚಳವಾಗಿ ಗಣಪೇಕಾಯನ್ನು ಮೇಲಿಟ್ಟಳು.

—“ಅಮ್ಮ ನೋಡೆ ಈ ಕುಡಿಕೇನ, ನನಗೆ ಸಿಕ್ಕಿದ್ದು. ಬಂದಮ್ಮ ಕೊಟ್ಟ ಕುಡಿಕೆ ಇದು! ದೀಪಕ್ಕ, ಅನ್ನಕ್ಕ, ನೀರಕ್ಕಗಳನ್ನೆಲ್ಲ ಸೋಲಿಸಿ ತಂದೆ. ಜೋಪಾನಕಣಮ್ಮ. ನಾಳೆ ಒಂದು ದಿನ ಕಾಡಿಗೆ ಹೋಗಿ ಬಂದು ಬಿಟ್ಟರೆ ಸಾಕು, ಇನ್ನು ನಿನ್ನ ಬಿಟ್ಟು ಹೋಗಲ್ಲಕಣಮ್ಮ”—ಹೀಗೆಂದಳು.

—“ಅಮ್ಮ ತುಂಗಾ, ನಿನ್ನ ಕತೆಯೇ ವಿಚಿತ್ರ. ದೊಡ್ಡದಾಗಿ ಕಾಡಿಗೆ ಹೋಗಿ ಹಗಲೆಲ್ಲ ಅಲ್ಲೇ ಉಪವಾಸ ವನವಾಸ ಮಾಡಿ ಬರುತ ಇದ್ದೀಯಲ್ಲ. ಇಷ್ಟೇನೆ ತಂದದ್ದು. ಹೋಗಲಿ ಬಿಡು. ನಾನಂತು ನಿನ್ನ ಚೀಲದಲ್ಲಿ ಕೈಹಾಕಿದಾಗ ನನಗೊಂದಿಷ್ಟು ಬಂಗಾರದ ಕಾಸುಗಳೇ ಸಿಕ್ಕಿದುವಮ್ಮ. ಅದರಲ್ಲಿ ಒಂದು ಮಾತ್ರ ಅಂಗಡಿಗೆ ಹೋಯಿತು ನೋಡು. ಅದರಲ್ಲೇ ಸಾಮಾನು ತಂದು ಅಡಿಗೆ ಮಾಡಿದೆಕಣಮ್ಮ, ಆದರೆ ಆ ಬಟ್ಟೆ ಎಲ್ಲಿತ್ತು ಹೇಳು! ದರ್ಜಿಗಳಂತೂ ಬಹಳ ಸಂತೋಷಪಟ್ಟರು ಅದನ್ನು ನೋಡಿ. ಇಂಥಾ ಬಟ್ಟೆ ನಾವೆಂದೂ ನೋಡೇ ಇಲ್ಲಾ ಎಂತ ಹೇಳಿದರು. ಅಂತು ಅದರಲ್ಲಿ ನಿನಗೊಂದು ಲಂಗ ಹೊಲಿಸಿದ್ದೇನಮ್ಮ. ಇನ್ನು ಮೇಲೆ ಹೊರಗೆ ಹೋಗುವಾಗ ಅದನ್ನಾದರೂ ಬೆಚ್ಚಗೆ ಹಾಕ್ಕೊಳ್ಳಮ್ಮ! ಏನೋ, ನಿಮ್ಮ ತಂದೆಪುಣ್ಯದಿಂದಲಾದರೂ ಸುಖ

ವಾಗಿರು. ನಾನಂತೂ ಪಾಪಿಷ್ಠೆ. ಮಕ್ಕಳಿಗೆ ತೊಂದರೆ ಕೊಡುವ ನನ್ನಂಥಾ ತಾಯಿ ಇನ್ನೆಂಥಾ ಪಾಪಿ!''—ಎಂದು ಕಣ್ಣೀರಿಡುವಾಗ ತುಂಗಾ ಹತ್ತಿರ ಹೋಗಿ ಅವಳನ್ನು ತಬ್ಬಿಕೊಂಡು ಸಮಾಧಾನ ಪಡಿಸಿದಳು.

ತಾಯಿಮಕ್ಕಳಿಬ್ಬರೂ ಊಟ ಮಾಡಿ ಮಲಗಿದರು. ಆ ಕುಡಿಕೆಯ ಬಳಿ ಗಂಗಮ್ಮ ಒಂದು ದೀಪ ಹಚ್ಚಿಟ್ಟಳು. ಬೆಳಗ್ಗೆ ತುಂಗಾ ಮುಂಚಿತವಾಗಿ ಎದ್ದು, ಸ್ನಾನ ಮಾಡಿ, ಒಂದೆರಡು ಹೂ ತಂದು ಆ ಕುಡಿಕೆಯ ಬಳಿ ಇಟ್ಟು, ತಾನು ಸಿಂಗಾರವಾಗಿ, ಲಂಗ ಹಾಕಿಕೊಂಡು, ಬಾಗಿಲು ಓರೆಮಾಡಿಕೊಂಡು, ಹೊರಟು ಹೋದಳು.

ಬೀದಿಗಳಲ್ಲಿ ಹುಡುಗರಿನ್ನೂ ಎದ್ದು ಹೊರಟೇ ಇರಲಿಲ್ಲ. ಹಕ್ಕಿಗಳು ಒಂದೆರಡು ಬೆಳಗಿನ ಹಾಡು ಹೇಳುತ್ತಿದ್ದವು. ಕಾಗೆ ಶಕುನ ಹೇಳುತ್ತಿತ್ತು, ಗುಬ್ಬಚ್ಚಿ ಕಾಳು ಹುಡುಕುತ್ತಿತ್ತು. ಪಾರಿವಾಳ ಎದ್ದಿರಲಿಲ್ಲ. ಗಿಳಿಗಳು, ಬಿಸಿಲು ಬಂದು ಹಣ್ಣಿನ ಬಣ್ಣ ತಿರುಗಲಿ ಎಂದು ಕಾದಿದ್ದವು. ಕೋಗಿಲೆಯ ಶಬ್ದವೂ ಇರ ಲಿಲ್ಲ, ನವಿಲೂ ಇದ್ದಹಾಗಿರಲಿಲ್ಲ. ಈ ದಿನ ಸ್ವಲ್ಪ ನಿಧಾನವಾಗಿ ಕಾಲುಹಾಕಿದಳು ನಮ್ಮ ತುಂಗಾ. ಹೂಗಳು ಅರಳುವುದನ್ನೇ ನೋಡುತ್ತ ಹೊರಟಳು. ಊರು ದಾಟಿದಳು. ಊರಾಚೆ ಕೆರೆಯ ಬಳಿ ನಿಂತು ಮೆಟ್ಟಲು ಇಳಿದು, ಒಂದೆರಡು ಗುಟುಕು ನೀರು ಕುಡಿದು, ಮುಂದೆ ಹೊರಟಳು. ಇನ್ನೇನು ಕಾಡುಹಾದಿ ಯಲ್ಲಿ ಹೋಗಬೇಕು ಎನ್ನುವಷ್ಟರಲ್ಲಿ...........

"ಇದೇನೆ ತುಂಗಾ! ಬಂದುಬಿಟ್ಟೆ! ಮನೆ ಕೆಲಸವೆಲ್ಲ ಬಿಟ್ಟು ನಿತ್ಯ ಹೀಗೆ ಕಾಡಿಗೆ ಬರುತೀಯಲ್ಲ. ಮನೇಲೇ ಇದ್ದು ಅಮ್ಮನಿಗೆ ನೆರವಾಗಿರಬೇಡವೆ; ಕಾಸಿ, ಬೀಸಿ, ಕುದಿಸಿ ಬೇಯಿಸಿ,

ನೂತು ನೇದು, ತಟ್ಟಿ ಕುಟ್ಟಿ, ಹೀಗೆ ಹಾಗೆ, ಕೆಲಸ ಗಿಲಸ ಮಾಡಿಕೊಂಡು ತಾಯಿಸೇವೆ ಮಾಡಿಕೊಂಡು ಇರಬಾರದೇನೇ ತಂಗೀ!" ಎಂತ ಯಾರೋ ಹೇಳಿದ ಹಾಗಾಯಿತು. ತುಂಗೆ ಕಣ್ಣು ಬಿಟ್ಟು ನೋಡಿದಳು. ಮೈಯೆಲ್ಲ ಕಿವಿಯಾಗಿ ಆಲೈಸುತ್ತ ನಿಂತಳು.

"ಇದೇನೆ ತುಂಗಾ, ನನ್ನ ದನೀನೂ ಗುರುತಾಗಲಿಲ್ಲವೇನೆ! ನಾನು ಕಣೆ, ನೀರಮ್ಮ, ನಿನ್ನ ಗಂಗಮ್ಮ. ದಾರಿಬಿಟ್ಟು ನಿಂತುಕೋ. ಕೆಳಗೆ ಬರುತ್ತೇನಮ್ಮ, ಹಾದಿಬಿಡು. ನನ್ನ ಕರ ಕೊಂಡು ಹೋಗು ನಿಮ್ಮನೆ ನೋಡಿಬರುತ್ತೇನಮ್ಮ!" ಎಂದು ಮಾತಾಡಿದ ಹಾಗಾಯಿತು. ಏನೋ ದುಪ್ಪೆಂದು ಕೆಳಗೆ ಬಿದ್ದು ಉರುಳಿ ಬಂತು. ಆಗ ತುಂಗಾ ಅದನ್ನು ಕೈಗೆ ತೆಗೆದುಕೊಂಡು ತಬ್ಬಿಕೊಂಡು, ಮನೆಗೆ ಹೊರಟಳು. ಅದು—

ನೋಡುವವರ ಕಣ್ಣಿಗೆ ಮಾತ್ರ ತೆಂಗಿನ ಕಾಯಿ. ತುಂಗೆಗೆ ಮಾತ್ರ ಅದು ನೀರಮ್ಮ, ಗಂಗಾದೇವಿ. ತುಂಗೆ ಅದನ್ನು ಎತ್ತಿ ಕೊಂಡು ಬರುತ್ತ, ಅದರ ಸಂಗಡ ಮಾತಾಡುತ್ತ ಬಂದಳು. ದಾರಿ ಸಾಗುತ್ತ ಬಂದಹಾಗೂ ಅವಳಿಗೆ ಇಷ್ಟು ವರ್ತಮಾನ ಸಿಕ್ಕಿತು. ...

ಬಂದಮ್ಮ ಕಾಡಿನ ತಾಯಿ. ಅವಳು ಕೊಟ್ಟದ್ದೇ ಕುಡಿಕೆ. ಅದು ಏನು ಬೇಕಾದರೂ ಕೊಡುತ್ತೆ. ಕುದಿ ಕುದಿ ಎಂದರೆ ಸಾಕು; ಅನ್ನ, ಪಾಯಸ, ಸಾರು ಮೊದಲಾದ್ದೆಲ್ಲ ಕುದಿಸಿ ಹರಿಸಿ ಬಿಡುತ್ತೆ.—ದೀಪಮ್ಮನ ಕೆಲಸ? ಅವಳು ಬಿಸಿಲು ಹಾಸುವು ದನ್ನು ನೋಡಬೇಕು. ಎಲ್ಲಾ ಗಿಡಗಳಿಗೂ ಬಿಸಿಲು ಬೀಳುವಂತೆ ಮಾಡುತ್ತಾಳೆ. ಎಲ್ಲಾ ಕೆರೆಕೊಳ್ಳ ಹಳ್ಳಗಳಿಗೂ ಬಿಸಿಲು ಬಂಗಾರ ಬೆರೆಯುವಂತೆ ಮಾಡುತ್ತಾಳೆ. ಅನ್ನಮ್ಮನೊ? ಚಿಗುರು ಹೂವು ಹಣ್ಣೆಲ್ಲ ಹೊರಟು ಅರಳಿ ಮಾಗಿ ಬಣ್ಣಕ್ಕೆ ಬಂದುವೇ ಇಲ್ಲವೇ

ನೋಡಬೇಕು. ಸೀರಮ್ಮನ ಕೆಲಸವೂ ಹೀಗೇ ತುಂಬಾ ಇದೆ—ಮಳೆ ಬರಿಸಿ, ಇಬ್ಬನಿ ಸುರಿಸಿ, ಎಲ್ಲ ಮರಗಳ ಬೇರುಗಳಿಗೂ ನೀರು ಹರಿಸಿ, ಸಣ್ಣ ಸಣ್ಣ ತೊರೆಗಳಿಗೆಲ್ಲ ನೀರು ತುಂಬಿಸಿ, ಕಡೆಗೆಲ್ಲ ನೀರೂ ತಗ್ಗಾದ ಜಾಗಕ್ಕೆ ಬಂದು ದೊಡ್ಡದಾಗಿ, ಹೇಮಾವತಿ ಹೊಳೆಗೆ ಸೇರುವಂತೆ ಮಾಡಬೇಕು. ಹೀಗೆ ಎಲ್ಲರಿಗೂ ಕೆಲಸ ವಿತ್ತು. ತುಂಗೆಯೂ ತನ್ನ ತಾಯಿಯ ಬಳಿ ಇದ್ದರೆ ಸಾಕಾದಷ್ಟು ಅವಳಿಗೂ ಕೆಲಸವಿರುತ್ತಿತ್ತು. ಕಷ್ಟಪಟ್ಟು ಕೆಲಸ ಮಾಡುವವರು ಇರುವಲ್ಲಿಗೇ ಭಾಗ್ಯಲಕ್ಷ್ಮಿ ತಾನಾಗಿ ಹರಿದುಬರುತ್ತಾಳೆ. ಅವಳು ಇನ್ನೆಲ್ಲಿಗೆ ಹೋದಾಳು! ಹೀಗೆಂದುಕೊಂಡು ನೆನೆಯುತ್ತಾ ತುಂಗಾ ಬರುತ್ತಾ ಇದ್ದಾಳೆ.

ಇತ್ತಲಾಗಿ ಮನೆಯಲ್ಲಿ ಬಲು ಗದ್ದಲ. ಊರವರೆಲ್ಲ ಬೇಗ ಬೇಗ ಸ್ನಾನಮಾಡಿ, ಮಡಿ ಉಟ್ಟು ಮೊರದ ಬಾಗಿನ ತೆಗೆಸಿ ಕೊಂಡು ಸರಸರ ಹೋಗಿ ಬರುತ್ತಿದ್ದಾರೆ. ಗದ್ದಲವಿಲ್ಲದ ಆ ಊರಿನಲ್ಲಿ ಈ ದಿನ ತುಂಬಾ ಸದ್ದು ಗದ್ದಲ; ಸಡಗರದ ಓಡಾಟ. ಎಲ್ಲರೂ ತುಂಗೆಯ ಮನೆಯ ಕಡೆ ಹೋಗಿ ಬರುತ್ತಿದ್ದಾರೆ.

ಆ ಗದ್ದಲಕ್ಕೆ ಕಾರಣವೇನು ಹಾಗಾದರೆ........

—ತುಂಗೆಯ ತಾಯಿ ಮೇಲೆದ್ದರು, ಕಣ್ಣೊರಸಿಕೊಂಡರು. ಸುತ್ತ ನೋಡುತ್ತಾರೆ, ಆಗಲೆ ಮನೆಯೆಲ್ಲ ಸಾರಿಸಿ ರಂಗೋಲಿ ಹಾಕಿದೆ. ಬಾಗಿಲು ತೋರಣ ಕಟ್ಟಿದೆ. ಹೊಸಿಲು ಪೂಜೆ ಮಾಡಿದೆ. ಮನೆಗೆ ಮನೆಯೇ ಬದಲಾಗಿ ದೇವರ ಗುಡಿಯಾಗಿದೆ. ನೆರಮನೆ ರಂಗಮ್ಮ ಬಂದಳು ಓರೆಯಾಗಿದ್ದ ಬಾಗಿಲು ತೆಗೆದುಕೊಂಡು. ಒಳಗೆ ಬಂದ ರಂಗಮ್ಮ ಗೂಡು ನೋಡಿದಳು. "ಅದೊ! ಗೂಡಿ ನಾಗೇನೋ ಇದೆಯಲ್ಲ! ಇದೇನಮ್ಮ ಪೂಜೆ ಇವತ್ತು! ನಂಗೊಂ ದಿಷ್ಟು ಹೇಳಿ. ನಾನೊಂದಿಷ್ಟು ಹೂವು ಹಣ್ಣು ತರುತೇನಮ್ಮ!" ಎಂದಳು.

ಗಂಗಮ್ಮ ಹೇಳಿದಳು—"ನಮ್ಮ ತುಂಗಾ ಒಂದು ಕುಡಿಕೆ ಇಟ್ಟು ಹೋಗಿದ್ದಾಳಮ್ಮ. ನೀವೇ ನೋಡಿ. ಕುಡಿಕೆ ತುಂಬ ಗುಲಗಂಜಿ. ಕುಡಿಕೇನ ಗಜ್ಜುಗ ಐದರಮೇಲೆ ಇಟ್ಟಿದ್ದಾಳೆ. ಮೇಲೊಂದು ಗಣಪೇ ಮುಚ್ಚಳ. ಸೌದೆ ಎಂತ ಒಂದಿಷ್ಟು ಉದ್ದುದ್ದ ಅಳಲೆಕಾಯಿ ತಂದಿಟ್ಟಿದ್ದಾಳಮ್ಮ. ಏನೋ ಹುಡುಗಿಯ ಜತೇಲಿ ಹುಡುಗಿಯಾಗಿ ನಾನೂ, ಅಲ್ಲೊಂದು ತುಪ್ಪದ ದೀಪ ಹಚ್ಚಿಟ್ಟಿದ್ದೇನಮ್ಮ. ಅದೇನು ಹೊಟ್ಟೆ ತುಂಬುವ ಆಟವೇ ನೀವೇ ಹೇಳಿ!" "ಮಕ್ಕಳ ಆಟವೇ ಆಟ. ಎಷ್ಟು ಚೆನ್ನಾಗಿ ಕಾಣುತ್ತೆ ಆ ಕುಡಿಕೆ. ಎಂಥಾ ಚೆಂದೊಳ್ಳೆ ಕುಡಿಕೆ. ನನಗೇನೋ ಅದು ಕುದೀತಾ ಇದೆಯೋ ಅನಿಸುತ್ತಾ ಇದೆ. ನೋಡಿ ಅಡಿಗೆಗೆ ಇಟ್ಟ ಹಾಗೇ ಕಾಣಿಸುತ್ತದೆ" ಎಂದರು ರಂಗಮ್ಮ. "ಸಾಕಮ್ಮಾ ಸಾಕು, ನೀವು ಹೇಳುವ ಮಾತು. ಅದು ಕುದ್ದು ಯಾರುಣಬೇಕಮ್ಮ? ಕುದಿ ಕುದಿ ಕುಡಿಕೆ ಎಂದರೆ ಅನ್ನವಾಗಿ ನಮ್ಮ ಹೊಟ್ಟೆ ತುಂಬೀತೆ? ಏನೋ ಮಕ್ಕಳ ಆಟ. ಅದರ ಸಂಗಡ ಆಟ ಆಡುತ್ತ ಕೂತಿರಲೆ ಹಸುಗೂಸಿನ ಹಾಗೆ ನಾನು?"

ಹೀಗೆಂದು ಇವರಿಬ್ಬರೂ ಮಾತಾಡುತ್ತಿದ್ದಾಗ, ಆ ಕುಡಿಕೆಗೆ ಜೀವ ಬಂದಂತಾಯಿತೋ ಏನೋ. ಕುದಿಯುವುದಕ್ಕಾರಂಭ ವಾಯಿತು. ಅಳಲೆಕಾಯಿ ಕೆಂಪಾಗಿ, ಗಜ್ಜುಗ ಕಪ್ಪಾಗಿ, ಕುಡಿಕೆ. ಕಾದು ನೀರಿನ ಆವಿ ಹೊರಕ್ಕೆ ಹೊಗೆ ಹೊಗೆಯಾಗಿ ಬರಲಾರಂಭಿಸಿತು. ಗಂಗಮ್ಮ, ರಂಗಮ್ಮ ಹಾಗಿಂದ ಹೀಗೆ ತಿರುಗಿ ನೋಡಿ ಆಶ್ಚರ್ಯಪಟ್ಟರು. ಊರಲ್ಲೆಲ್ಲ ಸುದ್ದಿ ಹರಡಿತು. ಸರಿ ಎಲ್ಲರೂ ಸರಸರನೆ ಸ್ನಾನ ಮಾಡಿ ಮಡಿ ಉಟ್ಟು, ಪೂಜೆ ಸಾಮಾನೆಲ್ಲ ಮೊರ ಮುತ್ತಲುಗಳಲ್ಲಿ ಇಟ್ಟುಕೊಂಡು ಬರಲಾರಂಭಿಸಿದರು. ಸುದ್ದಿ ಹರಡಿ ಹೋಗಿತ್ತು. ಈ ಕುಡಿಕೆಯನ್ನ ಎಲ್ಲರೂ ಪೂಜೆ

ಮಾಡಲು ಬರಲಾರಂಭಿಸಿದರು.

ಇಂಥಾ ಹೊತ್ತಿನಲ್ಲಿ ಹಿಂತಿರುಗಿದಳು ನಮ್ಮ ತುಂಗಮ್ಮ. ಊರೆಲ್ಲರ ಸಡಗರ ನೋಡಿ ಇವಳೂ ಆಶ್ಚರ್ಯಪಟ್ಟು ಮನೆಯ ಕಡೆ ಹೋದಳು. ಆ ಗುಂಪಿನಲ್ಲಿ ತೂರಿ ಹೋದಳು. ಅವಳಮ್ಮ ಅವಳನ್ನು ತಬ್ಬಿಕೊಂಡು ಆನಂದಕ್ಕೆ ಅತ್ತುಬಿಟ್ಟಳು. ತುಂಗಾ ಕೊಸರಿಕೊಂಡು ಬೇಗ ಹೋಗಿ ತಾನೂ ಮಡಿಯುಟ್ಟುಕೊಂಡು ಬಂದು, ಮನೆಯಲ್ಲಿದ್ದ ಚರಕ ಮುಂತಾದ ಕೆಲಸದ ಸಾಮಾನೆಲ್ಲ ಮುಂದೆ ತಂದಿಟ್ಟು ಹೂವೇರಿಸಿದಳು. ತಾನು ತಂದಿದ್ದ ತೆಂಗಿನ ಕಾಯನ್ನು ಆ ಗೂಡಿನಲ್ಲಿ ಇಟ್ಟಳು. ಆ ಬೆಳಗ್ಗೆ ತನ್ನ ತಿಳಿವಳಿಕೆಗೆ ಬಂದದ್ದನ್ನೆಲ್ಲಾ ತಾಯಿಗೆ ಹೇಳಿದಳು. ಆ ಕುಡಿಕೆಯ ಪ್ರಭಾವ ವನ್ನು ತಿಳಿಸಿದಾಗ್ಗೆ, ಆ ತಾಯಿಗೆ ಮಹಾ ಆನಂದವಾಯಿತು.

ಆ ದಿನ ತುಂಗಾ ಆ ಊರ ಹೆಮ್ಮಕ್ಕಳನ್ನೆಲ್ಲ ಕರೆದು ಕುಡಿಕೆ ಯಿಂದ ಕುದಿದು ಬಂದ ಪಾಯಸ ಬಡಿಸಿ ತಣಿಸಿದಳು. ಅಂದಿ ನಿಂದ ಆಗಾಗ್ಗೆ ಊರವರಿಗೆಲ್ಲ ಔತಣವೂ, ಬಡಮಕ್ಕಳಿಗೆ ನಿತ್ಯ ಊಟವೂ ನಡೆಯುತ್ತಿತ್ತು.

ತುಂಗೆ ಕಾಡಿಗೆ ಹೋಗಲೇ ಇಲ್ಲ. ಮನೆಯಲ್ಲೇ ನಿಂತು ತನ್ನ ಕೆಲಸ ಮಾಡಲಾರಂಭಿಸಿದಳು. ಅವಳ ಓರಗೆಯವರೆಲ್ಲ ಹಾಗೇ ಕೆಲಸ ಮಾಡಿದರು. ಒಬ್ಬೊಬ್ಬರೂ ಆರಾರು ಜನರ ಶಕ್ತಿ ಪಡೆದರು. ಆರಾರು ಜನರ ಕೆಲಸ ಮಾಡಿದರು. ಎಲ್ಲರೂ ಸುಖ ವಾಗಿದ್ದರು.

ಕುಡಿಕೆಯಿಂದ ಭಾಗ್ಯಬಂತೊ, ಕೆಲಸದಿಂದ ಭಾಗ್ಯ ಬಂತೋ? ಈ ಪ್ರಶ್ನೆಗೆ ಉತ್ತರ ನೀವೇ ಹೇಳಿ.

ಗುಣ

ಒಂದಾನೊಂದು ಕಾಲ. ಆಗ ಒಂದಾನೊಂದು ದೇಶದಲ್ಲಿ ಒಬ್ಬಾನೊಬ್ಬ ರಾಜನು ಆಳುತ್ತ ಇದ್ದನು. ಆ ರಾಜನಿಗೆ ಬಹಳ ದಿನಗಳ ಅನಂತರ ಒಬ್ಬಳೇ ಒಬ್ಬಳು ಮಗಳು ಹುಟ್ಟಿದಳು. ಆ ಅರಸು ಮಗಳಿಗೊ ಬಲು ಉಪಚಾರ. ರಾಜನೋ ನೆಲ ಮುಟ್ಟಿಸ ಲೊಲ್ಲ. ಹೀಗೇ ಬೆಳೆದಳು ಆ ಕುಮಾರಿ. ಪ್ರಪಂಚದ ಒಳ್ಳೆಯ ವಸ್ತುಗಳೆಲ್ಲವೂ ಅವಳಿಗೇ ಮೀಸಲಾಗಿ ಬರುತ್ತಿದ್ದವು. ಹೂವಿನ ಎಣ್ಣೆ ಅವಳಿಗೆ, ಜೇನಿನ ತುಪ್ಪ ಅವಳಿಗೆ, ಖರ್ಜೂರ ಬಾದಾಮಿ ಅವಳಿಗೆ, ಆಡುವ ನವಿಲು ಅವಳಿಗೆ, ಮಾತಾಡುವ ಗಿಣಿ ಅವಳಿಗೆ. ಅವಳೋ—ಅರಸು ಕುಮಾರಿ; ಹೀಗಾಗಿ ಬಹು ಸುಂದರಳಾಗಿ ಬೆಳೆದಳು.

ಹೀಗೆಯೇ ಒಂದಾನೊಂದು ದಿನ ಆ ಅರಸು ಎಲ್ಲ ದೇಶ ಗಳ ರಾಜರನ್ನೂ ವಿದ್ವಾಂಸರನ್ನೂ ಕರೆಸಿದನು. ಎಲ್ಲರ ಎದುರಿ ನಲ್ಲಿ ತನ್ನ ಮಗಳನ್ನು ಸಹ ಕರೆಸಿ ಕುಣಿತ ಮಾಡಿಸಿದನು.

ಅಂಥ ಸುಂದರ ಹೆಣ್ಣು ನೆಲ ಮುಟ್ಟಿಯಾಳೆ? ಅವಳು ನಿಜವಾಗಿಯೂ ಮನುಷ್ಯಳೇ? ಅವಳು ನಮ್ಮಂತೆ ಉಸಿರಾಡು ತ್ತಾಳೆಯೇ? ಹೀಗೆಯೇ ನಮ್ಮಂತೆ ಆಹಾರ ತೆಗೆದುಕೊಳ್ಳುವಳೆ? ಇಂತೆಲ್ಲ ಪ್ರಶ್ನೆ ಮಾಡುತ್ತ ಬಲು ಮಂದಿ ನೆರೆದರು. ಎಲ್ಲರೂ ಅವಳ ದನಿ ಕೇಳಿ ನಿಶ್ಶಬ್ದರಾದರು! ಅವಳ ಮಾತು ಕೇಳಿ ಮೂಕ ರಾದರು! ಮತ್ತು ರೂಪ ನೋಡಿ ಇನ್ನೇನನ್ನೂ ನೋಡುವುದೇ ಇಲ್ಲವೆಂದು ಕಣ್ಣು ಮುಚ್ಚಿಕೊಂಡು ನಡೆದುಬಿಟ್ಟರು.

ಇಂಥಾ ಸಮಯದಲ್ಲಿ ಒಂದು ಅಚಾತುರ್ಯ ನಡೆಯಿತು. ಅದೇನು? ಅಲ್ಲಿಗೆ ಒಬ್ಬ ಗಡ್ಡದ ಜೋಗಿ ಬಂದಿದ್ದನು. ಅವನು

ಮಾತ್ರ ಆ ಅರಸಿನ ಮಗಳಿಗೆ ತಲೆಬಾಗಲಿಲ್ಲ. ನಕ್ಕು ನಲಿಯ ಲಿಲ್ಲ. ಮತ್ತೊಮ್ಮೆ ಆ ಕಡೆ ನೋಡಲೇ ಇಲ್ಲ! ಅರಸು ಕುಮಾರಿ ಹಾಗೇ ನೋಡಿ ಬೆರಗಾದಳು. ಮತ್ತೆ ಸ್ವಲ್ಪ ಹೊತ್ತಿನಲ್ಲಿಯೇ ಮಾನ ಕಳೆದುಕೊಂಡವಳಂತೆ ಅತ್ತುಬಿಟ್ಟಳು.

"ಅಪ್ಪಾಜಿ! ನನ್ನ ರೂಪ ಲಾವಣ್ಯ ಯಾತಕ್ಕಾಗಿದ್ದೀತು? ಅಪ್ಪಾಜೀ! ಆ ಜೋಗಿ ನನಗೆ ತಲೆಬಾಗಲಿಲ್ಲ. ನಾಳೆ ನಾನು ತಲೆಯೆತ್ತಿ ತಿರುಗುವುದು ಹೇಗೆ? ಅಪ್ಪಾಜಿ, ನಾನು ಮುಂದೆ ರಾಣಿಯಾಗುವುದು ತಾನೇ ಹೇಗೆ?"

ಹೀಗೆ ಆ ರೂಪವತಿ ಅಳುತ್ತಿದ್ದಾಗ್ಗೆ ಆ ಜೋಗಿ ಹೇಳಿ ದ್ದೇನು?—'ಸುಮ್ಮನೆ ಅತ್ತರೇನು ಬಂತು. ನಾನೆಂದೆಂದೂ ಬರೀ ರೂಪಲಾವಣ್ಯಕ್ಕೆ ಬೆರಗಾಗುವುದೂ ಇಲ್ಲ, ತಲೆ ಬಾಗು ವುದೂ ಇಲ್ಲ. ಅವೆಲ್ಲ ಸುಳ್ಳು ಮಾತು!' ಹೀಗೆ ಹೇಳಿ ಆತ ದಿಗ್ಗನೆದ್ದು ಹೊರಟೇ ಹೋದನು.

ಆ ದಿನವೇ ಅರಸನು ತನ್ನ ಆಸ್ಥಾನದವರನ್ನೆಲ್ಲ ಬರ ಮಾಡಿಸಿದನು. ಎಲ್ಲರನ್ನೂ ವಿಚಾರಿಸಿದನು. ಹಾಗಾದರೆ ರಾಣಿ ಯಾಗುವ ಅರಸುಕುಮಾರಿಗೆ ಲಾವಣ್ಯವಲ್ಲದೆ ಇನ್ನೇನಿರಬೇಕು? ಕಡೆಗೆ ತೀರ್ಮಾನಿಸಿದರು—'ಲಾವಣ್ಯಕ್ಕೆ ಮರ್ಯಾದೆ ಬರಬೇಕಾ ದರೆ ವಿದ್ಯೆ ಇರಬೇಕು!'

ಸರಿ, ಮಾರನೆ ದಿನದಿಂದ ಪಾಠಪ್ರವಚನಗಳಿಗೆ ಆರಂಭವೇ. ಪಂಡಿತರುಗಳ ಸಮಾರಂಭ. ರಾಜಕುಮಾರಿಯು ದೃಢಮನಸ್ಸು ಮಾಡಿ ನಿಂತುಬಿಟ್ಟಳು. ಆಹಾರ ನಿದ್ರೆ ತೊರೆದಳು. ವಿದ್ಯೆಗಾಗಿ ಆತುರ ಅಷ್ಟು!

ದೇಶ ದೇಶಾಂತರದ ಉಪಾಧ್ಯಾಯರೆಲ್ಲ ಬಂದು ಓದಿಸಿ, ಕಲಿಸಿ, ಬರೆಸಿದರು. ಯಾವ ಯಾವುದೋ ಭಾಷೆಗಳೆಲ್ಲ ಕಲಿ

ತಾಯ್ತು. ಸಂಸ್ಕೃತ ಗಿಳಿಪಾಠ, ಗಣಿತ ನೀರು ಕುಡಿದಂತೆ, ವ್ಯಾಕರಣ ಲೀಲಾಜಾಲ, ಜ್ಯೋತಿಷ್ಯ ಹೇಳಿದ್ದೇ ಸತ್ಯ, ಕಾವ್ಯ ಕನಸಿನಲ್ಲಿಯಾದರೂ ಸರಿ! ಹೀಗೆ ಎಲ್ಲವೂ ಅರಿವಾಯ್ತು.

ಅರಸು ಮತ್ತೆ ಚಪ್ಪರ ಬಿಗಿಸಿ, ತೋರಣ ಕಟ್ಟಿಸಿ, ಸಭೆ ಸೇರಿಸಿದನು. ಬಹು ಜನರು ಬಂದರು. ಎಲ್ಲರೂ ಮನಸೋ ತರು—ಆ ವಾಕ್‌ಸರಣಿ, ಆ ಅಲಂಕಾರ, ಆ ಮಾತಿನ ವೈಖರಿ ಶಾಸ್ತ್ರಪರಿಚಯಗಳನ್ನೆಲ್ಲ ಕಂಡು. ಕೇಳಿದವರೆಲ್ಲ ಹೇಳಿದರು—ಕಪಿಲ, ಕಣಾದ, ಚರಕ, ಮಾಘ, ಮೈತ್ರೇಯಿ ಇವರೆಲ್ಲರ ಒಟ್ಟು ಅವತಾರವೇ ಈ ರಾಜಕುಮಾರಿ! ಸರಿ ಇಂಥಾ ರಾಣಿ ಇನ್ನೆಲ್ಲಿರು ವಳು?—ಹೀಗೆಲ್ಲ ಜನರೆಂದಾಗ, ಆ ರಾಣಿಯಾಗುವ ಹುಡುಗಿ ಸುತ್ತ ನೋಡಿದಳು.

'ಅಪ್ಪಾಜೀ, ಆ ಗಡ್ಡದ ಜೋಗಿ ಎಲ್ಲಿ? ತಲೆ ತಪ್ಪಿಸಿ ಕೊಂಡಿರಬಹುದು—ಕರೆಸು ಈಗ! ಇನ್ನಾದರೂ ತಲೆ ಬಾಗು ವನೋ ಇಲ್ಲವೋ ಕೇಳಿಬಿಡುತ್ತೇನೆ. ಜನರೆಲ್ಲರೂ ಈಗ ನನ್ನನ್ನು ಸಾಕ್ಷಾತ್ ಸರಸ್ವತಿ ಎನ್ನುವರು. ಆತನದೇನು ಬಿಸಾತು? ಆದರೂ, ಕರೆಸು; ಬಂದು ನಿಂತು ತಲೆಬಾಗಿ, ನಾಚಿ, ನೆಲಕ್ಕೆ ಒರಗಲಿ!'

ಅಷ್ಟು ಹೊತ್ತಿಗೆ ಜನರೆಲ್ಲ ಗುಸುಗುಟ್ಟಿದರು. ದಾರಿಬಿಟ್ಟರು. ಅಗೋ ಅದೇ ಗಡ್ಡದ ಜೋಗಿ! ಎದುರಿಗೆ ಅಲ್ಲೇ ಬಂದನು, ನಿಂತನು—'ರಾಜಕುಮಾರಿ ಯಾರು? ನಮ್ಮ ಶಾಂತಿನಾಡಿಗೆಲ್ಲ ರಾಣಿಯಾಗುವ ಹೆಮ್ಮೆಯಾರದ್ದು? ಎಲ್ಲಿರುವಳಾಕೆ?'—ಎಂದು ಜಗ್ಗಿಸಿ ಕೇಳಿ ನಿಂತನು.

ಆಗ ರಾಜಕುಮಾರಿಯು—'ಅಪ್ಪಾಜೀ, ಯಾಕೆ ಸುಮ್ಮನಿ ದ್ದೀರಿ? ಕರೆಸಿರಿ ಹೊಗಳುಭಟ್ಟರನ್ನು. ಕರೆಸಿರಿ ಪಂಡಿತರನ್ನು.

ಅವರೆಲ್ಲರೂ ಒಟ್ಟಾಗಿ ನನ್ನ ವಿದ್ಯೆಯ ಗರ್ವವನ್ನು ಹೊಗಳಿ ಹೇಳಲಿ! ಆಗ ಆತ ತಲೆ ಬಗ್ಗಿಸಲೇಬೇಕು '—ಎಂದು ಹೇಳಿದಳು. ಅವಳ ದಿಟ್ಟತನವನ್ನು ಕಂಡು ಪಂಡಿತರ ಮಾತು ಜೋರಾಯಿತು. ಮತ್ತು ಹೊಗಳುಭಟ್ಟರ ಕೂಗು ಜೋರಾಯಿತು.

ಆ ಜೋಗಿಯು ಎಲ್ಲ ವಿಚಾರವನ್ನೂ ಕೇಳಿದನು. ಆದರೆ ಇನ್ನೇನೂ ಮಾಡದೆ, ತಲೆಯನ್ನೂ ಬಾಗಿಸದೆ, ಹೀಗೆ ಹೇಳಿದನು : 'ಇಷ್ಟೇನೇ, ಆಗ ಲಾವಣ್ಯದ ಹೆಮ್ಮೆ! ಈಗ ವಿದ್ಯೆಯ ಗರ್ವ! ಛೀ!'

ಮತ್ತೆ ಆ ಜೋಗಿ ಅಲ್ಲಿ ನಿಲ್ಲಲಿಲ್ಲ. ರಾಜಕುಮಾರಿಯು ನೆಲದಲ್ಲಿ ಕುಸಿದು ಬಿದ್ದಳು. ಅರಮನೆಯ ದಾಸದಾಸಿಯರು ಕಣ್ಣೀರಿಟ್ಟರು.

ಈ ಬಾರಿಗೆ ರಾಜನಿಗೆ ಸಮಾಧಾನ ಹೇಳಲು ಶಕ್ತಿ ಇರಲಿಲ್ಲ. ಮಂತ್ರಿಗಳಿಗೆಲ್ಲ ಮೈನಡುಕ ಹತ್ತಿತು. ಹೊಗಳು-ಭಟ್ಟರು ದಾರಿಬಿಟ್ಟರು. ರಾಜಕುಮಾರಿಯು ಎಂದಿನಂತೆ ಅಲಂಕಾರಗಳನ್ನೆಲ್ಲ ತೊರೆದುಬಿಟ್ಟಳು. ತಿಂಡಿಯ ಮೇಲಣ ಆಶೆ ಇಲ್ಲವಾಯಿತು. ವಿದ್ಯೆಯ ಮೇಲಣ ಹಂಬಲ ಸಹ ಮಾಯವಾಯಿತು.

ಒಡನಾಡಿ :—ರಾಜಕುಮಾರಿ, ಇದೊ ಸುಗಂಧಲೇಪನ.

ಕುಮಾರಿ:—ಆ ಕಡೆ ತೆಗೆದಿಡು.

ಪರಿಚಾರಿಕೆ :—ಯುವರಾಣಿ, ಇದೊ ಚೀನೀ ಚೀನಾಂಬರ.

ರಾಜಕುಮಾರಿ :—ನಾನು ಉಟ್ಟಿರುವ ಈ ಬಿಳಿ ಸೀರೆಯೇ ಸಾಕು. ಅಟ್ಟಹಾಸದ ಅರಿವೆ ನನಗಲ್ಲ.

ರಾಜ :—ಮುದ್ದು ಮಗಳೆ! ಇಲ್ಲಿವೆ ಸವಿಯೂಟದ ರಸ ಕವಳಗಳು.

ರಾಜಕುಮಾರಿ: —ನನ್ನಲ್ಲಿಗೆ ಅವನ್ನು ತರಬೇಡಿರಿ ಅಪ್ಪಾಜೀ!

ನಮ್ಮ ರಾಜ್ಯದ ಬಡಜನರೆಲ್ಲ ಅದೇನು ತಿನ್ನುವರೋ ಆ ಅಂಬಲಿ ಯನ್ನಿಷ್ಟು ತಂದುಕೊಡಿರಿ.

ರಾಜ:—ಪಟ್ಟದ ಮಗಳೇ! ನೆರೆ ರಾಜರ ಮಕ್ಕಳೆಲ್ಲ ಬಂದು ಕಾದಿರುವರು. ಅವರೊಡನೆ ಆಟವಾಡಲು ಎದ್ದು ಬಾ.

ರಾಜಕುಮಾರಿ:—ಇಲ್ಲ. ಬರಲೊಲ್ಲೆ, ನಮ್ಮ ರಾಜ್ಯದ ಬಡಮಕ್ಕಳ ಸಂಗಡ ಆಟವಾಡಲು ನನಗೆ ಇಷ್ಟ. ಅವರೆಲ್ಲ ಇಲ್ಲಿಗೆ ಬರಲಿ, ಅರಮನೆಯ ಬಾಗಿಲು ತೆರೆಯಿರಿ.

ಹೀಗೆ ರಾಜಕುಮಾರಿಯು ವಿಚಾರಪರಳಾಗಿ ಬೆಳೆ ಬೆಳೆ ಯುತ್ತ, ತನ್ನ ನಾಡಿನ ಉಡಿಗೆ, ತೊಡಿಗೆ, ಆಹಾರ, ವ್ಯವಹಾರ ಗಳನ್ನೇ ಸಾಧಿಸುತ್ತ ಬಂದಳು. ತಬ್ಬಲಿ ಮಕ್ಕಳಿಗೆ ಮನೆ ಮಠ ಕಟ್ಟಿಸಿಕೊಟ್ಟಳು. ತಾಯಿಯಿಲ್ಲದ ಮಕ್ಕಳಿಗೆ ತಾನೇ ತಾಯಿ ಯಾದಳು. ಕಾಯಿಲೆ ಬಿದ್ದವರಿಗೆಲ್ಲ ಹೆಮ್ಮೆಯಿಂದ ವೈದ್ಯಳಾದಳು. ಗತಿಯಿಲ್ಲದವರಿಗೆಲ್ಲ ತಾನೇ ದಿಕ್ಕಾದಳು. ಪ್ರಜೆಗಳ ಸೇವೆಯೇ ಕರ್ತವ್ಯ. ಆ ಸೇವೆಯ ಫಲವೇ ತನಗೆ ಪುಣ್ಯ. ಅವರ ತೃಪ್ತಿಯೆ ತನಗೆ ಹೊಗಳಿಕೆ. ಹೀಗೆ ಆ ಕುಮಾರಿಯು ಬೆಳೆದಳು.

ಈ ವೇಳೆಗೆ ರಾಜನು ಬಿಳಿಗೂದಲನ್ನು ಪಡೆದನು. ಕೈಕಾಲು ತ್ರಾಣ ತಪ್ಪುತ್ತ ಬಂದವು. ರಾಜಕುಮಾರಿಯಾದರೊ ಯಾವ ರಾಜನನ್ನೂ ಸಹ ಮದುವೆಯಾಗಳು. ಪಟ್ಟದ ರಾಣಿಯಂತೆ ಸಿಂಹಾಸನವನ್ನಾದರೂ ಹತ್ತಲೊಲ್ಲಳು.

ಜನರೆಂದರು:—'ಆ ಜೋಗಿಗಾಗಿ ಕಾದಿದಾಳೆ ರಾಜ ಕುಮಾರಿ. ಆತನು ಬಂದು ಮೆಚ್ಚಿ ಹೊಗಳಿದರೆ, ಎಲ್ಲ ಸರಿ ಯಾದೀತು. ನಮ್ಮೆಲ್ಲರ ಬಾಳು ನೇರವಾದೀತು. ಎಲ್ಲಿದ್ದಾನು ಆ ಜೋಗಿ? ಯಾಕೆ ಬರಲೊಲ್ಲ!'

ಈ ಸಮಯಕ್ಕೆ ಸರಿಯಾಗಿ ಒಂದು ದಿನ ಆ ಜೋಗಿ

ಬಂದನು. ಊರವರು ಮತ್ತು ನಾಡವರೆಲ್ಲ ಸೇರಿದರು. ವೃದ್ಧನಾದ ರಾಜನು ಸಿಂಹಾಸನದಲ್ಲಿ ಕುಳಿತನು. ರಾಜಕುಮಾರಿಯು ತಂದೆಯ ಕಾಲೊತ್ತುತ್ತ ನೆಲದ ಮೇಲೆ ಕುಳಿತಳು. ಸಭೆಯು ತುಂಬಿಬಂದಿತ್ತು.

ಆ ಜೋಗಿಯು ಬಂದು ನಮಸ್ಕರಿಸಿದನು. ಆತನೇ ಮತ್ತೆ ಹೇಳಿದನು ಹೀಗೆಂದು: 'ರಾಜಕುಮಾರೀ, ನೀನೀಗ ನಿಜವಾದ ಮಗಳು ನಿಮ್ಮ ತಂದೆಯಾದ ರಾಜಗೆ! ರಾಜಪುತ್ರಿ, ನೀನೀಗ ನಿಜವಾದ ನಾಡತಾಯಿ! ಇದೊ ಈಗ, ಈ ದಿನ ಈ ಸಭೆಯ ಎದುರಲ್ಲಿ ನಿನಗೆ ತಲೆಬಾಗುತ್ತೇನೆ. ನಿನ್ನ ಲಾವಣ್ಯಕ್ಕಲ್ಲ, ನಿನ್ನ ವಿದ್ಯೆಗಲ್ಲ, ಆದರೆ ನಿನ್ನ ಕಾರುಣ್ಯಕ್ಕೆ! ಇದೊ ಮತ್ತೆ ನಿನಗೆ ನಮಸ್ಕಾರ!'

ಆ ಮಾತೆಲ್ಲ ಕೇಳಿದ ರಾಜಕುಮಾರಿಯು ಮೌನದಿಂದ ಕುಳಿತೇ ಇದ್ದಳು. ತಂದೆಯ ಮೋರೆಯನ್ನು ನೋಡಿ ಮುಗುಳು ನಗೆ ಬೀರಿದಳು. ಆಗ ಆ ವೃದ್ಧನಾದ ರಾಜನು ಕೇಳಿದನು– 'ಎಲೈ, ನೀನಾರು? ಜೋಗಿಯೋ? ಅಥವಾ ವೇಷಧಾರಿಯಾದ ಗುಪ್ತಚಾರನೊ? ಈಗಲಾದರೂ ಹೇಳು. ನಿನ್ನಿಂದ ನನ್ನ ಮಗಳು ನಿಜವಾದ ರಾಜಗುಣಗಳನ್ನು ಪಡೆದುಕೊಂಡಳಯ್ಯಾ! ನೀನೇ ಅವಳಿಗೆ ಸರಿಯಾದ ಗುರು!'

ಆಗ ಆ ಜೋಗಿಯು ತನ್ನ ಗಡ್ಡವನ್ನು ಕಿತ್ತೊಗೆದು, ಹೀಗೆಂದನು: 'ಎಲೈ ರಾಜನೆ, ನಾನೊಬ್ಬ ಮಂತ್ರಿಯು. ನಿಮ್ಮ ನಾಡಿಗೆ ಅತಿ ಸಮೀಪದಲ್ಲಿ ಇರುವ ಕಾಂತಿನಾಡಿಗೆ ನಾನೇ ಮಂತ್ರಿಯು. ನಿನ್ನ ಮಗಳ ಗುಣಗಳನ್ನು ಕೇಳಿ ನಮ್ಮ ರಾಜಮಾತೆಯವರು ಇದೋ ಜವಾಹಿರಿ ಪೆಟ್ಟಗೆಯನ್ನು ಕಳಿಸಿದ್ದಾರೆ. ಇದನ್ನು ಸ್ವೀಕರಿಸಿ ನಮ್ಮೊಂದಿಗೆ ಸ್ನೇಹವನ್ನು ಬೆಳೆಸಿರಿ.'

ಜವಾಹಿರಿ ಪೆಟ್ಟಿಗೆಯು ಬಹು ದೊಡ್ಡದು, ಬಹು ಸುಂದರ. ಅದರ ಬಾಗಿಲನ್ನು ಕುತೂಹಲದಿಂದ ರಾಜಕುಮಾರಿಯೆ ತೆರೆದಳು. ಆಗ ಅದರೊಳಗಿನಿಂದ——ಆಶ್ಚರ್ಯ ಆಶ್ಚರ್ಯ! ಕಾಂತಿನಾಡಿನ ರಾಜನೇ ಎದ್ದು ನಿಂತು ರಾಜಕುಮಾರಿಯ ಕೊರಳಿಗೆ ಹಾರ ಹಾಕಿಬಿಟ್ಟನು. ಏನು ಕೋಲಾಹಲ!

ಅಂತು, ಎರಡು ನಾಡೂ ಒಂದಾದವು, ಕಾಂತಿನಾಡು ಶಾಂತಿನಾಡು!

ಆಗ ಮಂತ್ರಿ ಹೇಳಿದನು ಹೀಗೆಂದು:

ತನ್ನ ರೂಪಿನಿಂದ,
ಬಣ್ಣ ಬಟ್ಟೆಯಿಂದ,
ದೊಡ್ಡವರಾದವರಿಲ್ಲ.
ದೊಡ್ಡವರಾಗುವರಿಲ್ಲ!
ಒಳ್ಳೆ ಗುಣದಿಂದ,
ಒಳ್ಳೆ ಕಾರ್ಯದಿಂದ,
ದೊಡ್ಡವರಾದವರೆಲ್ಲ,
ದೊಡ್ಡವರಾಗುವರೆಲ್ಲ!

ಆದ್ದರಿಂದ ನಾನು ಹೇಳುವುದು ಇಷ್ಟೆ—ಗುಣ ಮುಖ್ಯ! ಹೂವಿನಲ್ಲಿ ಪರಿಮಳ ಹುಡುಕುವೆವು. ಹಾಗೇ ಮಕ್ಕಳಲ್ಲಿ ಒಳ್ಳೇ ಗುಣಗಳನ್ನು ಹುಡುಕುವೆವು. ಆದ್ದರಿಂದ ಮಕ್ಕಳು ಏನನ್ನು ಸಂಪಾದಿಸಬೇಕು? ನೀವೇ ಹೇಳಿಬಿಡಿರಿ!

ಕುಂಟನಾಯಿ

ಚೈತ್ರ ಮಾಸ. ಉರಿಬಿಸಿಲು. ಮಟ ಮಟ ಮಧ್ಯಾಹ್ನ. ಒಂದು ಕಂದು ನಾಯಿ ಕುಂಟುತ್ತ ನೀರಿನ ದಡದಲ್ಲಿ ಉದ್ದಕ್ಕೂ ಹೋಯಿತು. ಅಲೆಗಳು ಬಂದು ಬಿದ್ದ ಹಾಗೂ ಮುಂದು ಮುಂದಕ್ಕೆ ಬರುತ್ತಾ, ಅಲೆಗಳ ನೀರು ಹಿಂದೆ ಹೋದಾಗಲೆಲ್ಲ ಹಿಂದೆ ಹಿಂದೆ ಹೋಗುತ್ತಾ ಜನಗಳ ನಡುವೆ ಓಡಾಡುತ್ತಿತ್ತು.

ಅಂದು ಅದೇನೋ ಹಬ್ಬ. ಸಮುದ್ರ ಸ್ನಾನಕ್ಕೆ ಹೆಂಗಸರು ಗಂಡಸರು ಬಂದಿದ್ದರು. ಸ್ನಾನಮಾಡಿದವರು ಒದ್ದೆಬಟ್ಟೆಯಲ್ಲಿ ಓಡಾಡುತ್ತಿದ್ದರು. ಮಂತ್ರ ಹೇಳುವವರು, ಪೂಜೆ ಮಾಡುವವರು ಗುಡುಗಾಡುತ್ತಿದ್ದರು. ಅಂಗಡಿ ಇಟ್ಟವರು ಕೂಗಿ ಕೂಗಿ ಕರೆಯುತ್ತಿದ್ದರು. ಅಂತು ಗದ್ದಲ. ಈ ಗುಜುಗುಜು ಗದ್ದಲದಲ್ಲಿ, ಮತ್ತು ಗುಡುಗಾಟದಲ್ಲಿ ಜನಗಳ ಕಾಲಬಳಿ ಈ ಕಂದು ನಾಯಿ ಕುಂಟಿಕೊಂಡು ಎಲ್ಲರನ್ನೂ ಮೂಸಿ ಮೂಸಿಕೊಂಡು ಹೋಗುತ್ತಿತ್ತು.

ಕಂದು ನಾಯಿ ತನ್ನ ಯಜಮಾನನನ್ನು ಹುಡುಕುತ್ತಿತ್ತು. ಅದರ ಕಾಲಿಗೆ ಏನೋ ಚುಚ್ಚಿಕೊಂಡಿತ್ತೊ ಏನೋ! ಪಾಪ! ಆ ಯಜಮಾನ ಸಮುದ್ರ ಸ್ನಾನಕ್ಕೆ ಹೋದವನು ಹಿಂತಿರುಗಿ ಬಂದಿರಲಿಲ್ಲ. ಈ ನಾಯಿ ತನ್ನ ಬಲ ಮುಂಗಾಲನ್ನು ನೆಲದಮೇಲಿಡುತ್ತ, ಮೇಲಕ್ಕೆತ್ತಿಕೊಳ್ಳುತ್ತ ಹೋಗುತ್ತಿತ್ತು. ಮತ್ತೆ ಮತ್ತೆ ಆ ಕುಂಟುಕಾಲನ್ನು ಮೇಲೆತ್ತಿಕೊಂಡು ನೆಕ್ಕಿಕೊಳ್ಳುತ್ತ ಹೋಗುತ್ತಿತ್ತು. ಕುಂಟಿಕೊಳ್ಳುತ್ತ, ಮುಂದೆ ಹೋಗುತ್ತ, ನಿಲ್ಲುತ್ತ, ಮತ್ತೆ ಮುಂದೆ ಹೋಗುತ್ತ ಇತ್ತು.

ಆದು ಯಾರನ್ನ ಹುಡುಕುತ್ತಿತ್ತು? ತನ್ನ ಯಜಮಾನನನ್ನ! ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ ಯಜಮಾನ, ಆ ನಾಯಿಯ ಯಜಮಾನ! ಏನೇನು ಮಾಡಿದರೂ ಕಡಿಮೆಯಾಗಲಿಲ್ಲ ಆ ನೋವು. ಆದ್ದರಿಂದ ಆ ಕಂದು ನಾಯಿ ಕುಂಟುತ್ತಿತ್ತು, ನೋವಾದ ಪಂಜವನ್ನು ನೆಕ್ಕಿಕೊಳ್ಳುತ್ತಿತ್ತು. ಅದೂ ಅಲ್ಲದೆ ಕೂಗಿಕೊಳ್ಳುತ್ತ ಓಡಾಡಿ ಸೋತುಹೋಗಿ ಕಡೆಗೆ ಯಾರ್‍ಯಾರು ಸಹಾಯಮಾಡಿ ಯಾರೆಂದು ತೋರಿತೋ ಅವರಿದ್ದ ಕಡೆಗೆ ಓಡಿಹೋಗಲಾರಂಭಿಸಿತು.

ಆ ಹಬ್ಬದ ಗದ್ದಲದಲ್ಲಿ ಈ ಕಂದು ನಾಯಿಯ ಕುಂಟು ಕಾಲನ್ನು ನೋಡುವುದು ಯಾರಿಗೂ ಬೇಕಿರಲಿಲ್ಲ. ಆದರೂ ಆ ಪುಟ್ಟನಾಯಿಗೆ ಭ್ರಾಂತು, ಕೇವಲ ಭ್ರಾಂತು!—ಯಾರಾದರೂ ಸಹಾಯ ಮಾಡಿಯಾರೇನೋ—ಎಂತ ಭ್ರಾಂತು!

ಅಲ್ಲೊಂದು ಹುಡುಗಿ ನಿಂತಿದ್ದಳು. ಅವಳು ತುಂಬಾ ಲಕ್ಷಣವಾಗಿದ್ದಳು. ನೀಲಿ ಲಂಗದ ಮೇಲೆ ಹಳದಿಯ ದಾವಣಿ ಹೊದ್ದಿದ್ದಳು. ಅದರ ಮೇಲೆ ಜರತಾರಿ ಹೂಗಳಿದ್ದವು. ಎರಡು ಜಡೆ ಹೆಣೆದುಕೊಂಡು ಎರಡು ಸರ ಕನಕಾಂಬರಿ ಹೂಗಳನ್ನು ಮುಡಿದುಕೊಂಡಿದ್ದಳು. ಕಿವಿಗಳಲ್ಲಿ ಹರಳಿನ ಲೋಲಕ್ಕು ಅಲುಗಾಡುತ್ತಿತ್ತು. ಪುಟ್ಟಾಣಿ ಪುಟ್ಟದೊಂದು ಚತ್ರಿಯನ್ನು ಹಿಡಿದುಕೊಂಡಿದ್ದಳು. ಮೇಲಾಗಿ ನಗುನಗುತ್ತ ಕುಳಿತಿದ್ದಳು.

ಅಂಥಾ ಹುಡುಗಿಯು ದಯಾವಂತೆಯಾಗಿರಬಹುದೆಂದು ಆ ನಾಯಿ ಭಾವಿಸಿತು. ಹಾಗೇ ಕುಂಟಿಕೊಂಡು ಹೋಗಿ ತನ್ನ ಕುಂಟು ಕಾಲನ್ನು ಅವಳ ತೊಡೆಯಮೇಲಿಟ್ಟಿತು.

ಆ ಹುಡುಗಿಯಾದರೊ ತಕ್ಷಣವೇ ದಿಗ್ಗನೆ ಎದ್ದುನಿಂತಳು.

“ಹೊರಡಾಚೆ ಹೊಲಸು ನಾಯಿ! ನನ್ನ ಹೊಸಾಹೊಸ ನೀಲಿಲಂಗ ವನ್ನು ನಾಶಮಾಡಿಬಿಟ್ಟೆ, ಛೀ!”

ಹೀಗೆನ್ನುವುದೇ ತಡ ಆ ಬಡಪಾಯಿ ನಾಯಿ ನೊಂದ ಕಣ್ಣು ಗಳಿಂದ ಅವಳನ್ನು ನೋಡಿ, ಅವಳ ಕೂಗಿಗೆ ಬೆದರಿ, ಆ ಜಾಗ ವನ್ನು ಬಿಟ್ಟು, ಮುಂದೆ ನಡೆಯಿತು.

ಇನ್ನಾರು ದಯಾವಂತರಿದ್ದಾರೆಂದು ಯೋಚಿಸುತ್ತ ಹೊರ ಟಿತು. ಅಲ್ಲೀನೋ ತುಂಬಾ ಜನ ಇದ್ದರು. ಆದರೆ ಆ ನಾಯಿ ಎಲ್ಲರ ಬಳಿಗೂ ಹೋಗದೆ ಮೋರೆ ನೋಡಿ ನೋಡಿ ಯಾರು ದಯಾವಂತರಾಗಿರಬಹುದೆಂದು ಅದರ ಮೂಕ ಮನಸ್ಸಿಗೆ ತಿಳಿ ಯಿತೋ ಅಂಥವರ ಬಳಿಗೆ ಹೋಗಲು ಪ್ರಯತ್ನಮಾಡಿತು.

ಆ ಸಮುದ್ರದ ಕರೆಯಲ್ಲಿ ಅಲೆಗಳಿಗೆ ದೂರವಾಗಿ ಒಬ್ಬರಿ ದ್ದರು, ಅವರು ಮುದುಕರು. ಕೂದಲೆಲ್ಲ ಬೆಳ್ಳಗಿತ್ತು. ಮುಖವೆಲ್ಲ ಸುಕ್ಕುಸುಕ್ಕಾಗಿತ್ತು. ಮನಸ್ಸನ್ನೇ ಸೆಳೆದುಬಿಡುವಂಥಾ ನಗು ಮೋರೆ ಅವರಿಗಿತ್ತು. ಅವರು ಕಾಲುಮೇಲೆ ಕಾಲುಹಾಕಿಕೊಂಡು ಯಾವುದೋ ಪತ್ರಿಕೆ ಓದುತ್ತಾ ಕೂತಿದ್ದರು. ಆ ಪತ್ರಿಕೆಯಲ್ಲಿ—“ಪಟೇಲರು ಸಂಚಾರಮಾಡುತ್ತಿದ್ದ ವಿಮಾನ ಕಾಡಿನ ಮಧ್ಯದಲ್ಲಿ ಒಂದು ನದಿಯ ದಡದಲ್ಲಿ ಇಳಿಯಿತಂತೆ. ಆದರೆ ಅವರಿಗೂ ವಿಮಾನ ನಡಸುವವನಿಗೂ ಏನೂ ಅಪಾಯ ಸಂಭವಿಸಲಿಲ್ಲ. ಉಕ್ಕಿನ ಮನುಷ್ಯರು ದೇವರ ದಯದಿಂದ ಬದುಕಿದರು!” ಎಂದಿತ್ತು. ಈ ಸಮಾಚಾರವನ್ನು ಓದುತ್ತ ಆ ಮುದುಕರ ಮುಖ ಸಂತೋಷದಿಂದ ಅರಳಿತು. ಮನಸ್ಸಿನಲ್ಲೆ ಅವರು ದಯಾ ಪರನಾದ ದೇವರನ್ನು ಕೊಂಡಾಡಿದರು. ಆ ಸಮಯದಲ್ಲಿ ಈ ಕಂದುನಾಯಿ ಕುಂಟಕೊಂಡು ಅವರ ಬಳಿಗೆ ಹೋಗಿ ಅವರ ತೊಡೆಯ ಮೇಲೆ ತನ್ನ ಕುಂಟುಕಾಲನ್ನು ಇಟ್ಟು ನೋರೆಯನ್ನು

ಅವರ ಕಡೆಗೆತ್ತಿಹಿಡಿಯಿತು. ಕಣ್ಣೆರಡರಲ್ಲೂ ನೋವು ಉಕ್ಕಿ ಬರುವಂತೆ ಇತ್ತು. ಆದರೆ ಆ ಪತ್ರಿಕೆ ಈ ನಾಯಿಯ ಮೋರೆಗೂ ಆ ಮುದುಕರ ಮೋರೆಗೂ ನಡುವೆ ಹರಡಿಕೊಂಡಿತ್ತು.

"ಈ ಮುದುಕರು ಸಹಾಯಮಾಡಿಬಿಡುತ್ತಾರೆ"—ಎಂತ ನಾಯಿ ಭಾವಿಸಿತು. ಆದರೆ ಆ ಮುದುಕರು ಕೈನೀಡಿ—"ಪಾಪ, ಪುಟ್ಟನಾಯಿ! ಪಾಪ, ಪುಟ್ಟಾಣಿ ನಾಯಿ"—ಯೆನ್ನುತ್ತಾ ಮೈಸವರಿದ್ದೇ ವಿನಾ ಸಹಾಯ ಮಾಡುವ ಗೋಜಿಗೆ ಬರಲಿಲ್ಲ. ಅವರು ಪತ್ರಿಕೆ ಮುದುರಿಸಲಿಲ್ಲ ಮತ್ತು ಈ ನಾಯಿಯ ಕುಂಟು ಕಾಲಿನ ಕಡೆಗೆ ನೋಡಲಿಲ್ಲ. ಅವರಿಗೆ ಈ ಕಂದು ನಾಯಿಯ ವಿಚಾರವೇ ಬೇಕಿರಲಿಲ್ಲ.

ಕುಂಟು ನಾಯಿ ಆ ಜಾಗಬಿಟ್ಟು ಅಲ್ಲಿಂದ ಕುಂಟಿಕೊಂಡು ಇನ್ನೂ ಮುಂದೆ ಹೊರಟಿತು. ಅಗೋ ಅಲ್ಲಿ ಇನ್ನೊಂದು ಸಣ್ಣ ಹುಡುಗಿ ನುರಳು ತೋಡುತ್ತ ಇದ್ದಳು. ಮೃದುವಾಗಿತ್ತು ಅವಳ ಮುಖ. ಅವಳ ಗುಂಡುಗಲ್ಲಗಳಲ್ಲಿ ಗುಳಿಬೀಳುತ್ತಿತ್ತು, ಅವಳು ಬಾಯಿಬಿಟ್ಟು ಮಾತಾಡಿದರೆ! ಇಂಥಾ ಹುಡುಗಿಯರು ಬೇಕಾದರೆ ದಯಾವಂತರಾಗಿರುತ್ತಾರೆಂದು ಆ ನಾಯಿ, ಆ ಕಂದು ನಾಯಿ, ಆ ನೊಂದನಾಯಿ, ಕುಂಟಿಕೊಂಡು ಅವಳ ಬಳಿಗೆ ಹೋಗಿ, ಅಲ್ಲಿ ದೈನ್ಯದಿಂದ ಕುಂಯಿಗುಟ್ಟಿತು. ಅವಳ ಹೆಜ್ಜೆಯನ್ನು, ಮೊಳಕಾಲನ್ನು ನೆಕ್ಕಿತು. ಅನಂತರ ಅವಳ ಮೋರೆಯನ್ನು ನೆಕ್ಕಲು, ಮೂತಿಯನ್ನು ನೀಡಿತು.

ಅಷ್ಟಕ್ಕೇ ಆ ಹುಡುಗಿ ಚೀರಿಬಿಡಬೇಕೇ! "ಕಚ್ಚುತ್ತೆ ೯೯೯ ನಾಯಿ ಕಚ್ಚುತ್ತೇ! ಅಯ್ಯೋ ಚಿಕ್ಕಮ್ಮಾ ಕಚ್ಚುತ್ತೇ! ಅಯ್ಯೋ ಕಚ್ಚುತ್ತೇ........" ಎಂದು ಅತ್ತಳು.

ಆ ಕಂದು ನಾಯಿಗೆ ಆಗ ಆಶ್ಚರ್ಯವಾಯಿತು. ಹಾಗಾ

ದರೆ ಮೋರೆ ನೋಡಿ ಜನರು ಹೀಗೇ ಇದ್ದಾರೆಂದು ಭಾವಿಸುವುದೇ ತಪ್ಪಾಯಿತು. ನಗುಮೋರೆಯುವರೂ, ಮೃದುಮುಖದವರೂ, ಲಕ್ಷಣವಾಗಿ ಬಟ್ಟೆಹಾಕಿದವರೂ, ಒಳಗಡೆ ಹೃದಯದಲ್ಲಿ ದಯೆ ಉಳ್ಳವರಲ್ಲ. ಅವರ ಕೈಗಳು ಒಳ್ಳೆಯ ಕೆಲಸಮಾಡಲರಿಯವು, ಅವರ ನಾಲಗೆಗಳು ಒಳ್ಳೆಯ ಮಾತಾಡಲರಿಯವು. ಎಂಥಾ ಆಶ್ಚರ್ಯವೆಂದುಕೊಳ್ಳುತ್ತಾ, ಆ ನಾಯಿ ಕುಂಯಿಗುಟ್ಟುತ್ತಾ, ಕುಂಟಿಗೊಂಡು ಇನ್ನೂ ಮುಂದೆ ಹೊರಟಿತು. ನಿರಾಶೆ ಅದರ ಮೋರೆಯಲ್ಲಿ ಮೂಡಿತ್ತು. ಅದರ ಕಣ್ಣುಗಳಲ್ಲಿ ನೀರು ತುಂಬಿ ಕೊಂಡಿತ್ತು.—"ಅಯ್ಯೋ- ನನ್ನ ಯಜಮಾನ ಇಲ್ಲಿಲ್ಲವಲ್ಲಾ ! ಇನ್ನಾರು ನನ್ನ ನೋವನ್ನು ಅರಿತು ಸರಿಪಡಿಸುವವರು? ಇಲ್ಲಿ ಯಾರೂ ಇಲ್ಲವೇ !........." ಎಂದು ತನ್ನ ಮೂಕ ಮನಸ್ಸಿನಲ್ಲಿ ಅಂದುಕೊಳ್ಳುತ್ತಾ ಕುಂಟ ಕುಂಟಕೊಂಡು ಮುಂದೆ ಹೋಯಿತು. ಅಲ್ಲೊಬ್ಬಳಿದ್ದಳು—ಮಹಾತಾಯಿ ! ಮಕ್ಕಳ ಕಂಡವಳು. ಯಾವುದೋ ಮಗುವಿನ ಬಸೀನಿಗೆ ಹೆಣಿಗೆಹಾಕುತ್ತ ಕುಳಿತಿದ್ದಳು. ಈ ನಾಯಿ ಕುಂಟಕೊಂಡು ಅವಳ ಬಳಿಗೆ ಹೋಗಿ ಅವಳ ತೊಡೆಯ ಮೇಲೆ ತನ್ನ ಕುಂಟು ಕಾಲಿಟ್ಟಿತೋ ಇಲ್ಲವೋ ಅಷ್ಟ ರಲ್ಲೇ ಆಕೆ ಈರೀತಿಯಾಗಿ ಕಿರುಚಿಬಿಟ್ಟಳು—" ನಾಯಿಗಳ ಹಾವಳಿ ನೋಡಿದೆಯಮ್ಮಾ ! ಅಯ್ಯೋ, ನಾಯಿ ಜನ್ಮಾನೇ! ಒಂದು ಚೂರು ಲಾಡೂನೂ ತಿಂದಿಲ್ಲ ಇನ್ನೂವೇ! ಆಗಲೇ ಬಂತು ಮೂಸಿ ಕೊಂಡು, ಈ ಲಾಡು ಕಂಡು ಬಾಲ ಅಲ್ಲಾಡಿಸುತ್ತ! ಒಂದು ನಾಯಿ ಹಾಗೇ ಇನ್ನೊಂದು! ನಂಗೆಲ್ಲ ಗೊತ್ತು. ತೊಲಗೆಂದರೆ ತೊಲಗಬೇಕು. ಹೂ! ಛೀ! ಥೂ!" ಹೀಗೆನ್ನುತ್ತಾ ಆ ಹೆಂಗಸು ಹೆಣಿಗೆ ಕಡ್ಡಿಯಲ್ಲಿ ಆ ಕುಂಟಕಾಲ ಮೇಲೇ ಹೊಡೆದು ಬಿಟ್ಟಳು!

ಮೊದಲೇ ನೋವು. ಈಗ ಏಟಿನ ನೋವು ಬೇರೆ. ಆ

ಮರಿನಾಯಿ ಇನ್ನೂ ಹೆಚ್ಚಾಗಿ ಕೊರಗುಟ್ಟುತ್ತಾ ಹೊರಟಿತು. ಕುಂಯಿಗುಟ್ಟುತ್ತಾ ನಡೆಯಿತು. ಮೂರೇ ಕಾಲಲ್ಲಿ ಕುಂಟುತ್ತಾ ತನ್ನ ಯಜಮಾನ ಎಲ್ಲಿದ್ದಾನು ಎಂಧುಕೊಂಡು ಹೊರಟಿತು. ಎಲ್ಲಿದ್ದನೋ ಆ ಯಜಮಾನ—ಅವನಂತೂ ಆ ಬಡಪಾಯಿ ನಾಯಿಗೆ ಸಿಕ್ಕಲಿಲ್ಲ.

ಅದಂತೂ ಮೂಸಿಕೊಂಡು, ಕುಂಟಿಕೊಂಡು, ಮುಂದೆ ಮುಂದೆ ಹೊರಟಿತು—"ಯಜಮಾನ ಸಿಕ್ಕಿದರೆ ಸಾಕು ನನ್ನ ಕಷ್ಟವೆಲ್ಲ ನೀಗುವುದು. ಎಲ್ಲಿದ್ದಾನು ಆ ನನ್ನ ಯಜಮಾನ? ನಾನು ಮೂರೇ ಕಾಲುಗಳಲ್ಲಿ ಕುಂಟಿಕೊಂಡು ಹೋಗುವುದನ್ನು ನೋಡಿ ಮರುಗುತ್ತಾನೆ! ನನಗೆ ಮುತ್ತಿಟ್ಟು, ಮೈದಡವಿ, ಕಾಲಿಗೆ ಚುಚ್ಚಿರುವುದನ್ನು ತೆಗೆದುಬಿಡುತ್ತಾನೆ. ಅಯ್ಯೋ! ನನ್ನ ಯಜಮಾನನೇ........"ಎಂದು ಕುಂಯಿಗುಟ್ಟುತ್ತಾ ಆ ನಾಯಿ, ಆ ಕಂದು ನಾಯಿ, ಕುಂಟಿಗೊಂಡು ಹೊರಟಿತು.

ಅಲ್ಲೊಬ್ಬ ಹುಡುಗ. ಅವನು ಇನ್ನೂ ಆರೇಳು ಹುಡುಗರ ನಡುವೆ ಇದ್ದ. ಹರುಕಲು ನಿಕ್ಕರು ಅವನಿಗೆ ಮತ್ತು ಅವನು ಹಾಕಿದ್ದನಲ್ಲ ಆ ಬನೀನು ಅದೂ ಹರುಕು! ಅವನ ತಲೆ ಕೂದಲು ಬಾಚಿ—ಎಷ್ಟೋದಿನವಾಗಿತ್ತು. ಆದರೆ ಗಟ್ಟಿಗಾರ ಹುಡುಗ—ಎಷ್ಟು ಚೆನ್ನಾಗಿ ಲಗ್ಗೆ ಚಂಡು ಆಡುತ್ತಿದ್ದ! ಅವನ ಗುರಿಯೋ ಗುರಿ!—ನೀಟಾಗಿ, ನೇರಾಗಿ, ಬಲವಾಗಿ, ಬಿಗಿಯಾಗಿ ಹಿಡಿದ ಚೆಂಡನ್ನು ಎಸೆಯುತ್ತಿದ್ದ—ಗೆದ್ದರೂ ಕಿರುಚುತ್ತಿದ್ದ. ಸೋತರೂ ಕಿರುಚುತ್ತಿದ್ದ. ಇನ್ನೊಬ್ಬರು ಗೆದ್ದಾಗ ಅವನಿಗೆ ಆನಂದ ಹೆಚ್ಚು. ಅವನ ಮೋರೆ ನೋಡಿ ಆ ನಾಯಿಗೆ ಕೊಂಚ ಆಸೆ ಹುಟ್ಟಿತು. ಇವನಾದರೂ ನನಗೆ ಸಹಾಯಮಾಡಿಯಾನೆಂದು ಆ ಕಂದು ನಾಯಿ ಕುಂಟಿಕೊಂಡು ಹೋಗಿ ಅವನ ಚೆಂಡನ್ನು ಹಿಡಿದುಕೊಂಡು

ನಿಂತಿತು. ಆ ಹುಡುಗ, ಆ ಹರುಕಲು ಬನೀನಿನವನು—"ಅಯ್ಯೋ ನಾಯೀ! ನಿಂಗೂ ಬೇಕೆ ಚೆಂಡು? ತಗೊಂಡು ಬಾಯಿಲ್ಲಿ. ಜಾಣ ನಾಯಿ! ಬಾಪ್ಪ! ಎಂಥಾ ಪುಟ್ಟಾಣಿ ನಾಯಿ!" ಎಂದನು.

ಆ ಕುಂಟು ನಾಯಿ ಕುಂಟಿಕೊಂಡೇ ಹೋಯಿತು. ಕುಂಟಿಕೊಂಡೇ ಚೆಂಡನ್ನು ಕಚ್ಚಿಕೊಂಡು ತೆಗೆದುಕೊಂಡು ಒಯ್ದು ಕೊಟ್ಟಿತು ಆ ಹುಡುಗನಿಗೆ. ಇನ್ನಾವ ಹುಡುಗನಿಗೂ ಕೊಡಲಿಲ್ಲ. ಎಲ್ಲರನ್ನೂ ತಪ್ಪಿಸಿ ಆ ಹುಡುಗನಿಗೇ ಆ ಚೆಂಡನ್ನು ಕೊಟ್ಟಿತಲ್ಲವೆ. ಅದಕ್ಕಾಗಿ ಆ ಹುಡುಗನಿಗೆ ನಾಯಿಯನ್ನು ಕಂಡು ಪ್ರೀತಿ ಹುಟ್ಟಿತು.

"ಅಯ್ಯೋ ಪುಟ್ಟನಾಯಿ, ಬಾಮ್ಮಾ ಇಲ್ಲಿ. ಏಕೆ, ಏಕಪ್ಪ ಕುಂಟುತಿ? ಎಲ್ಲಿ ನೋಡೋಣ. ನೋಡಿದೆಯಾ ನೋಡಿದೆಯಾ ಮುಕ ನೆಕ್ಕಬಾರದು. ನೋಡೋಣಬಿಡು. ಆಹಾ! ಬಲಗಡೆ ಮುಂಗಾಲೋ? ನೀನು ನೆಕ್ಕಬೇಡ, ನಾನು ನೋಡುತ್ತೇನೆ. ಆಹಾ ಇಲ್ಲಿ ನೋಡಿದೆಯಾ ಬೆರಳ ನಡುವೆ ಚುಚ್ಚಿಬಿಟ್ಟಿದೆ. ಅಯ್ಯೋ ಕೆಟ್ಟ ಮೊಳೆಯೇ—"ಎಂತ ಹೇಳಿ ಅದನ್ನು ಕಿತ್ತು ತೆಗೆದು ಹಾಕಿದ. ಆ ಕೂಡಲೆ ರಕ್ತ ಬಂತು. ಆಗ ತನ್ನ ಹರುಕಲು ಜೇಬಿನಿಂದ ಕೈಚೌಕ ತೆಗೆದು ಅದನ್ನು ಹರಿದು ಪಟ್ಟಿಮಾಡಿ ಆ ಕಾಲಿಗೆ ಕಟ್ಟಿಬಿಟ್ಟ—"ನಾಯಿ, ಈ ಪಟ್ಟಿ ಬಿಚ್ಚಿಕೊಳ್ಳಬೇಡ! ಎಲ್ಲಿ ಆ ಮೊಳೆ ಎಲ್ಲಿ?" ಎಂತ ಹುಡುಕುತ್ತಿರುವಾಗ ಈ ನಾಯಿ ಆ ಮೊಳೆಯನ್ನು ಮೂಸಿ ಹುಡುಕಿ, ನೆಕ್ಕಿ ನೆಕ್ಕಿ ಆ ಹರುಕಲ ನಿಕ್ಕರ ಹುಡುಗನ ಮುಂದೆ ಉಗುಳಿತು.

ಆ ಹುಡುಗ ಆ ಪದಾರ್ಥವನ್ನು ನೋಡಿದ. ಆಶ್ಚರ್ಯಪಟ್ಟ. ಅದು ಮೊಳೆಯಾಗಿರಲಿಲ್ಲ. ತಿರುಪಿನ ಮೂಗುಬೊಟ್ಟು. ಬಂಗಾರದ್ದು-ಅದರ ತುದಿಯಲ್ಲಿ ವಜ್ರದ ಹರಳಿತ್ತು!

ಆಕ್ಷಣವೇ ಆ ಹುಡುಗ ಅವನ ತಾಯಿಯ ಬಳಿಗೋಡಿದ. ಆ ತಾಯಿ ಅದನ್ನು ತೆಗೆದುಕೊಂಡು ನೋಡಿ, ಯಾರದ್ದಿರಬಹುದು ಎಂದು ಯೋಚಿಸುತ್ತಿರುವ ಹೊತ್ತಿಗೆ ಆ ಹುಡುಗನ ತಂದೆ ಅಲ್ಲಿಗೆ ಬಂದರು. ಅವರೆಂದರು—"ಅಲ್ಲೊಬ್ಬ ಹೆಂಗಸು ಮೂಗು ಬೊಟ್ಟು ಕಳೆದುಹೋಯಿತೆಂದು ಹುಡುಕುತ್ತಿದ್ದಾಳೆ, ಕೇಳೋಣ ಬಾ!" ಎಂದು ಹೋಗಿ ವಿಚಾರಿಸಿದರು.

ಆ ವಜ್ರದ ಮೂಗುಬೊಟ್ಟು ಆವೂರ ಅಧ್ಯಕ್ಷರ ಮಗಳ ಮೂಗಿನದು. ಅವರಿಗೆಲ್ಲ ಆನಂದವಾಯಿತು.

—"ಯಾರು ಹುಡುಕಿಕೊಟ್ಟವರು. ಈ ಸಮುದ್ರದ ಮರಳ ರಾಸಿಯಲ್ಲಿ ಇದು ಸಿಕ್ಕಿದ್ದೇ ನಮ್ಮ ಪುಣ್ಯ! ಯಾರಪ್ಪ ಆ ಹುಡುಗ:" ಎನ್ನುವ ವೇಳೆಗೆ ಈ ಹುಡುಗ ಓಡಿಹೋಗಿದ್ದ, ಅಲ್ಲಿರಲಿಲ್ಲ.......

ಆ ಕಂದು ನಾಯಿಯನ್ನು ಹುಡುಕಿ ತರಲು ಹೋಗಿದ್ದ. ಆ ನಾಯಿ ಕಾಲಿಗೆ ಪಟ್ಟಿಕಟ್ಟಿಕೊಂಡು ನಿದಾನವಾಗಿ ಬರುತ್ತಿತ್ತು. ಅದನ್ನು ಬಗಲಲ್ಲಿ ಇರುಕಿಕೊಂಡು ಆ ಹುಡುಗ ಈ ಸಂತೋಷದ ಗುಂಪಿಗೆ ಓಡಿಬಂದನು. ಏದುತ್ತ ಏದುತ್ತಾ—"ಈ ನಾಯಿಗೆ ಕೊಡಿರಿ ಇನಾಮು! ಇದೇ ಆ ವಜ್ರದ ಬೊಟ್ಟನ್ನು ಹುಡುಕಿ ಕಾಲಲ್ಲಿ ಚುಚ್ಚಿಕೊಂಡು ತಂದಿತ್ತು!" ಎಂದು ಆ ನಾಯನ್ನು ಮುಂದೊಡ್ಡಿ ನಕ್ಕನು.

ಅಷ್ಟರಲ್ಲೇ ಆ ನಾಯಿ ಚಂಗನೆ ಹಾರಿಹೋಯಿತು. ಅಲ್ಲೇ ಇದ್ದನು ಅದರ ಯಜಮಾನ! ಅವನ ಆನಂದಕ್ಕೆ ಮೇರೆಯೇ ಇರಲಿಲ್ಲ!

ಅಂತು ಆ ದಿನ ಕೊಂಚ ಕರುಣೆ ತೋರಿಸಿದ್ದಕ್ಕಾಗಿ, ಆ ಹರುಕಲು ನಿಕ್ಕರು ಹುಡುಗನಿಗೆ ಇನಾಮು ಸಿಕ್ಕಿತು. ಅವನ

ತಂದೆತಾಯಂದಿರಿಗೂ ಆನಂದವಾಯಿತು.

ನಿಕ್ಕರು ಹರಿದಿದ್ದರೇನು, ಶರಟು ಹರಿದಿದ್ದರೇನು, ಮನಸ್ಸು ಚೆನ್ನಾಗಿದ್ದರೆ ಸಾಕು. ಕೊಂಚ ದಯೆ ತೋರಿಸಿದ್ದಕ್ಕಾಗಿ ಎಷ್ಟೊಂದು ಜನಕ್ಕೆ ಆನಂದವಾಯಿತು !

ಕಪ್ಪೆ ಹಿಂತಿರುಗಲಿಲ್ಲ

ಒಂದಾನೊಂದು ಕಾಲ. ದೊಡ್ಡಾನುದೊಡ್ಡದೊಂದು ಜೇಡ. ಅದನ್ನು ಜೇಡರ ಹುಳುವೆಂದರೆ ಅದಕ್ಕೆ ಸಿಟ್ಟುಬರುತ್ತೊ ಏನೋ! ಆದ್ದರಿಂದ ಅದನ್ನು ಜೇಡ ಎನ್ನೋಣ. ಅದರ ಸಂಗಡ ಇನ್ನೊಂದು ಕಪ್ಪೆ. ಇವೆರಡರ ಕತೆಯೇ ಇದು, ಇವೆರಡೇ ಇದರಲ್ಲಿ ಮುಖ್ಯ; ಇದರಲ್ಲಿ ಬರುವ ಪ್ರಾಣಿಗಳಿಗೆಲ್ಲ ಗೌರವ ಕೊಟ್ಟು ಬಿಡೋಣವೆ? ಹಾಗೇ ಆಗಲಿ. ಜೇಡನನ್ನೂ ಕಪ್ಪೆಯನ್ನೂ ನೊಣಗಳನ್ನೂ—ಅವನು ಇವನು—ಎಂದು ಬಿಡೋಣ.

ಜೇಡರ ಜಾತಿಯಲ್ಲಿ ಹೆಂಗಸರ ಪಾರುಪತ್ಯ ಹೆಚ್ಚು. ಜೇಡರಲ್ಲಿ ಗಂಡಸರೇ ಕಡಿಮೆ ಹೆಂಗಸರೇ ಹೆಚ್ಚು. ಹೆಂಗಸರೇ ಬಲೆ ಬೀಸಿ ನಡುವೆ ಕೂತು ನೊಣ ಹಿಡಿದು, ಮರಿ ಸಾಕಿ, ಸಂಸಾರ ಮಾಡುವವರು. ಆದ್ದರಿಂದ ಜೇಡಕ್ಕಾ ಎಂದು ಬಿಡೋಣ. ಕಪ್ಪೆಯಂತೂ ಕಪ್ಪೆರಾಯನಾಗುತ್ತಾನೆ.

ಇನ್ನು ಕತೆ ಆರಂಭಿಸೋಣ.

ಒಂದಾನೊಂದು ಕಾಲ. ಒಂದು ಕಾಡು. ಬಹಳ ದೊಡ್ಡ ಕಾಡು. ಆ ಕಾಡಿನ ಒಂದು ಕಡೆಯಲ್ಲಿ ಒಂದು ಹಳ್ಳ. ಜುಳಜುಳ ಹರಿಯುವ ಆ ಹಳ್ಳದ ದಂಡೆಯಲ್ಲಿ ನೀರು ಕೊರೆದು ಕೈಚಾಚಿ ಕೊಂಡಂತೆ ಇತ್ತು! ಇಂಥಾದೊಂದು ನೀರಿನ ಖಾರಿಯಲ್ಲಿ ಎಲೆ

ಗಳೂ ಹೂವುಗಳೂ, ಹಣ್ಣುಗಳೂ ಉದುರಿ ಕೊಳೆತು, ಅಂಟಂಟಾಗಿ, ನಾತನಾತವಾಗಿತ್ತು. ಈ ರೀತಿಯಲ್ಲಿ ನಾರುವ ನಾತದ ಖಾರಿಯಲ್ಲಿ ನೊಣಗಳೂ ದುಂಬಿಗಳೂ ಸೊಳ್ಳೆಗಳೂ, ಆನಂದವಾಗಿ ಹಾರಾಡಿಬಂದು, ಕುಣಿದಾಡಿ ಕೂತು, ಬೇಕಾದ ಹಾಗೆ ವಿಹಾರ ಮಾಡಿ ಹೋಗುತ್ತಿದ್ದವು.

ಅಲ್ಲೇ ಮೇಲುಗಡೆ ರೆಂಬೆಯಿಂದ ರೆಂಬೆಗೆ ದಾರ ಬೀಸಿ ಬಲೆ ಹೆಣೆದಿದ್ದಳು ಜೇಡಕ್ಕ. ಆ ಬಲೆಯೆ ಬಲು ಸೊಗಸಾಗಿತ್ತು. ಬೆಳಗ್ಗೆಯೆಲ್ಲ ಮುತ್ತಿನ ಜಾಲರಿಯಂತೆ, ಬಿಸಿಲಲ್ಲಿ ಗಾಜಿನ ಹಂದರದಂತೆ, ಸಂಜೆಯೆಲ್ಲ ಜರತಾರಿ ಪತ್ತಲದಂತೆ ಸೊಗಸಾಗಿತ್ತು; ಗಂಧರ್ವಲೋಕದ ಪರದೆಯಂತೆ ಇತ್ತು. ಮತ್ತು ನೀರಿನ ಖಾರಿಯ ಮೊಕಮಲ್ಲು ಪಾಚಿಯ ದಡದಿಂದ ಜೇಡಮ್ಮನ ಬಲೆಯವರೆಗೆ ಮೇಲೆ ಹತ್ತಿಹೋಗುವುದಕ್ಕಾಗಿ ಅಲ್ಲಲ್ಲಿ ಸೊಗಸಾದ ಏಣಿಗಳಿದ್ದವು. ಅವೆಲ್ಲ ಬೆಳ್ಳಿ ದಾರದ ಏಣಿಗಳು.

ಜೇಡಕ್ಕ ತನ್ನ ಎಂಟು ಕಾಲುಗಳನ್ನು ತನ್ನ ಮೈಸುತ್ತ ಹರಡಿಕೊಂಡು ಮೇಲೆ ಕೆಳಗೆ ತೂಗುತ್ತ ನಿಂತಿರುತ್ತಿದ್ದಳು. ಮತ್ತು ಅವಳ ಹಲವು ಕಣ್ಣುಗಳಿಂದ ಅತ್ತ ಇತ್ತ ನೋಡುತ್ತ ಇದ್ದಳು. ಮೈಯೆಲ್ಲ ಕಣ್ಣೆಂದರೆ, ನಮ್ಮ ಜೇಡಕ್ಕನಿಗೇ ಸರಿ! ಆ ಹರಿಯುವ ಹಳ್ಳದ ದಂಡೆಯಲ್ಲಿ ಇನ್ನಿಂಥಾ ಗಟ್ಟಿಯಾದ, ವಿಶಾಲವಾದ, ಅಂಟಾದ ಬಲೆಯನ್ನು ನೇಯುವವರು ಬೇರೆ ಯಾರೂ ಇರಲಿಲ್ಲ. ಜೇಡರ ಜಾತಿಯಲ್ಲಿ ಈ ಜೇಡಕ್ಕ ಗೌರವಸ್ಥಳು.

ಅವಳ ದೊಡ್ಡತನಕ್ಕೂ, ಅವಳ ವಿಶಾಲವಾದ ಬಲೆಗೂ ತಕ್ಕಂತೆ ಹೆಚ್ಚು ಆಹಾರವೂ ಬೇಕಾಗಿತ್ತು. ಆದ್ದರಿಂದ ಸಣ್ಣದು ಪುಟ್ಟದು ದೊಡ್ಡದು ಗಾತ್ರವಾದ್ದು ಏನೇ ಇರಲಿ, ರೆಕ್ಕೆಬೀಸಿ ಏನೇ ಹಾರಿ ಬರಲಿ, ಕಾದಿದ್ದು ಹಿಡಿದು ಊಟಮಾಡಿಬಿಡುತ್ತಿದ್ದಳು.

ಒಂದುಸಾರಿ ಒಂದು ಜೇನು ನೊಣ ಹಾಗೇ ಬಂತು. ಜೇಡಕ್ಕನ ಬಲೆಯಾಚೆ ಇದ್ದ ಹೂಗಳು ಬಹಳ ಲಕ್ಷಣವಾಗಿದ್ದವು. ಅವುಗಳ ಕಂಪೂ ಒಂದು ಹೊಸಪರಿಯಾಗಿತ್ತು. ಜೇನು ನೊಣ ನೇರ ಇಳಿದು ಬಂದು ಜೇಡಕ್ಕನ ಬಲೆಯಮೇಲೆ ಕಾಲಿಟ್ಟಿತು. ರೆಕ್ಕೆಗಳನ್ನು ಬರ್ರೆಂದು ಬೀಸಿತು. ಮೊದಲು ಕಾಲು ಅಂಟಿಕೊಂಡಿತ್ತು, ಅನಂತರ ರೆಕ್ಕೆಗಳು ಅಂಟಿಕೊಂಡವು. ಕೆಳಗಡೆ ಕೊಂಡಿಗೆ ಎಟುಕುವವೋ ಎನ್ನುವಂತೆ ಹೂಗಳು ಮೆಟ್ಟುಗಾಲಲ್ಲಿ ನಿಂತು ಬಾ ಬಾರೆಂದು ಕರೆಯುತ್ತಿದ್ದವು. ಕೈಗೆ ಬಂದ ತುತ್ತು ಬಾಯಿಗೆ ಬಾರದಂತೆ ಆಗಬಾರದೆಂದು ಜೇನಿನ ಒದ್ದಾಟ ಹೆಚ್ಚಾಯಿತು. ಅಷ್ಟು ಹೊತ್ತಿಗೆ ಅದನ್ನೆಲ್ಲ ಹೊಂಚಿಹಾಕಿ ನೋಡುತ್ತಿದ್ದ ಜೇಡಕ್ಕ ಅಲ್ಲಿಗೆ ಬಂದು ಸದ್ದಿಲ್ಲದೆ ದಾರಬೀಸಿ ಕೊಂಡಿಸಮೇತವಾಗಿ ಆ ಜೇನು ನೊಣವನ್ನು ಬಿಗಿದಿಟ್ಟಳು. ಅದೇ ಮೊದಲ ದಿನ ರುಚಿಯಾದ ಜೇನು ನೊಣವು ಊಟಕ್ಕೆ ದೊರೆತದ್ದು. ಇನ್ನೆಲ್ಲ ಜೇಡರು ಹೆಮ್ಮೆ ಪಡುವಂಥಾ ಆಹಾರ ಅಂದು ಈ ಜೇಡಕ್ಕನಿಗೆ ಸಿಕ್ಕಿತ್ತು.

ಸುಂದರವಾದ ಈ ಬಲೆಯು ಮಾವಿನ ಕೊಂಬೆಯಿಂದ ನೇರಿಳೆ ಕೊಂಬೆಗೆ ಅಂಟಿಕೊಂಡು ಕಾರೆಹಣ್ಣು ಕುಡುಗಲೆ ಹಣ್ಣಿನ ಪೊದೆಗಳಿಗೂ ಮುಟ್ಟಿಕೊಂಡಿತ್ತು. ಆ ಬಲೆಯ ಕೆಳಗೆ ಹೂಗಳೂ ಸಣ್ಣಪುಟ್ಟ ಹೊಂಡಗಳೂ, ಹಳ್ಳದ ನೀರನ ಖಾರಿಯೂ ಇದ್ದವಲ್ಲವೆ! ಅಲ್ಲಿಂದ ಮೇಲಕ್ಕೆ ಕಂಪಿನ ಹವೆಯೆದ್ದು ಬರುತ್ತಿತ್ತು. ಆದುದರಿಂದ ಅಲ್ಲಿಗೆ ಬರುತ್ತಿದ್ದವು–ನೊಣ, ನುಸಿ, ಸೊಳ್ಳೆ, ದುಂಬಿ, ಕಡಜ, ಗಾಜು ನೊಣ-ಮೊದಲಾದುವು, ಅವೆಲ್ಲ ಬಂದು ಸೇರಿ-ದೊಂಬಿಯೋ ದೊಂಬಿ, ಪರಿಶೆಯೋ ಪರಿಶೆ!

ಸೊಗಸಾದ ನಾತದ ಆ ಹೊಂಡದಮೇಲೆ ಈ ಜೇಡಕ್ಕ ಸುಖವಾಗಿದ್ದಳು. ಅವಳ ಗಂಡ ದೂರ ದೇಶಕ್ಕೆ ಹೊರಟು

ಹೋಗಿದ್ದ. ಈ ನಡುವೆ ಜೇಡಕ್ಕನ ಮಕ್ಕಳೆಲ್ಲ ಮೊಟ್ಟೆಯೊಡೆದು ಹೊರಗೆ ಬಂದು ಹಸಿವು ಹಸಿವೆಂದು ಕೂಗುವ ಕಾಲವೊದಗಿತು. ಎಂದಿಗಿಂತ ಇನ್ನು ಮುಂದೆ ಒಳ್ಳೆಯ ಆಹಾರ ಬೇಕಾಗುತ್ತದೆ, ಮತ್ತು ಹೆಚ್ಚು ಆಹಾರವೂ ಬೇಕಾಗುತ್ತದೆ.

ಹೀಗೆಂದುಕೊಂಡಿದ್ದ ಕಾಲದಲ್ಲಿ ಅದೇ ನೀರಿನಬಳಿಯ ಸ್ವರ್ಗಕ್ಕೆ ಒಂದು ಕಪ್ಪೆ ಕುಪ್ಪಳಿಸಿಕೊಂಡು ಬಂದುಬಿಟ್ಟಿತು. ಮೆತ್ತನೆ ಕೆಸರು, ಪಾಚಿನೀರು, ರಸವತ್ತಾದ ಹುಲ್ಲು, ಎಲೆ ತೊಂಗಲ ನೆರಳು ಮುಂತಾದ್ದೆಲ್ಲ ಅಲ್ಲಿತ್ತು. ಕಪ್ಪೆ ಅಲ್ಲೇ ಭದ್ರವಾಗಿ ನಿಂತುಬಿಟ್ಟಿತು ಮತ್ತು ಮನೆಮಾಡಿಕೊಂಡಿತು. ಅಲ್ಲಿದ್ದ ನೊಣಗಳೆಲ್ಲ ಮೈತುಂಬಿಕೊಂಡು ರುಚಿರುಚಿಯಾಗಿದ್ದವು. ಹೊಸದಾಗಿ ಹೊರಬಂದ ಎಳೇ ನೊಣಗಳಂತೂ ಮೇಲೇರಿ ಬಲೆಯ ಬಳಿಗೆ ಬರಲು ಅವಕಾಶವಿಲ್ಲದೆ ಇತ್ತು. ಇಂದಲ್ಲ ಇನ್ನೊಂದು ದಿನ ಅವೆಲ್ಲ ಆ ಕಪ್ಪೆರಾಯನ ಪಾಲಾಗುತ್ತಿದ್ದವು.

ಜೇಡಕ್ಕನು ಒಳ್ಳೇ ಸಮಯದಲ್ಲಿ ಕಷ್ಟವನ್ನು ಕಂಡಂತಾಯಿತು. ಆ ಕಪ್ಪೆರಾಯನಿಂದ ಈ ಜೇಡಕ್ಕನಿಗೆ ಒಳ್ಳೆಯ ಆಹಾರವಿಲ್ಲದಂತಾಯಿತು. ಮೇಲಿನಿಂದ ಬರುವ ಹುಳು ಹುಪ್ಪಟೆಗಳು ಅಷ್ಟು ಸೊಗಸಾಗಿರುತ್ತಿರಲಿಲ್ಲ. ಕೆಳಗೆ ನೀರಕಡೆಯಿಂದ ಬರುವವುಗಳೆಲ್ಲ ಕಪ್ಪೆರಾಯನ ಪಾಲಿಗಾಗುತ್ತಿದ್ದವು.

ಒಂದೊಂದು ನೊಣವನ್ನೂ ಜೇಡಕ್ಕ ನೋಡಿ ನಾಲಗೆ ಸವರಿಕೊಳ್ಳುತ್ತಿರುವಾಗಲೆಲ್ಲ ಈ ಕಪ್ಪೆರಾಯ ಅವನ್ನು ಮೇಲಕ್ಕೆ ಬಿಡಗೊಡದೆ ಗಬಕ್ಕನೆ ನುಂಗಿಬಿಡುತ್ತಿದ್ದನು. ಒಂದು ದಿನವಂತೂ ಜೇಡಕ್ಕನಿಗೆ ತುಂಬಾ ಸಿಟ್ಟುಬಂದು:

"ಕಪ್ಪೇರಾಯ, ಇದೇನು ಇಲ್ಲೇ ಬಂದು ಸಂಸಾರ ಹೂಡಿಬಿಟ್ಟೆ. ನಾನು ಇಷ್ಟು ದೊಡ್ಡ ಬಲೆಕಟ್ಟಿಕೊಂಡು ಏನು ಪ್ರಯೋ

ಜನ. ನೀವು ನನ್ನ ಪಾಲಿನ ನೊಣಗಳನ್ನೆಲ್ಲ ನುಂಗಿ ಕೂತುಬಿಟ್ಟರೆ ನನ್ನ ಗತಿಯೇನು, ನನ್ನ ಮರಿಗಳ ಗತಿಯೇನು?"

ಹೀಗೆಂದ ಕೂಡಲೆ ಅಲ್ಲೊಂದು ಹಸುರು ನೊಣ ಹಾರಿ ಬಂತು. ಆ ಕೂಡಲೆ ಕಪ್ಪೆರಾಯನ ಅಂಟು ನಾಲಗೆ ಸರಕ್ಕನೆ ಹೊರಗೆ ಬಂತು, ಪರಕ್ಕನೆ ಆ ನೊಣ ಮಾಯವಾಯಿತು. ಆ ನೊಣವನ್ನು ನುಂಗಿದ ಮೇಲೆ ತೇಗುತ್ತ ಆ ಕಪ್ಪೇರಾಯ— ಕ್ರ್ಯೊರೋಕ್ ಯ್ರ್ಯೊರ್ರೊಕ್ ಎನ್ನುತ್ತ:

"ನನಗೆ ಬೇಕಾದಷ್ಟು ನೊಣವೆಲ್ಲ ನಾನು ಹಿಡಿಯುತ್ತೇನೆ. ನಿನಗೆ ಸಿಕ್ಕುವಷ್ಟು........" ಹೀಗೆನ್ನುವಷ್ಟರಲ್ಲೇ ಇನ್ನೊಂದು ಹಳದಿಯ ನೊಣ ಹಾರಿಬಂದು ಆ ಕಪ್ಪೆರಾಯನ ಗಂಟಲೊಳಗೆ ಇಳಿದು ಹೋಯಿತು.

ಕಪ್ಪೆರಾಯ ಕೊಬ್ಬಿ ಉಬ್ಬುತ್ತಾ ಬಂದ; ಜೇಡಕ್ಕ ಹೊಟ್ಟೆಗಿಲ್ಲದೆ ಬಡವಾಗುತ್ತ ಬಂದಳು. ಕಪ್ಪೆರಾಯ ಮತ್ತೂ ಹೆಚ್ಚು ಹೆಚ್ಚು ನೊಣಹಿಡಿಯುತ್ತ ಬಂದ. ಒಂದು ಸಾರಿಯಂತು ಜೇಡಕ್ಕನ ಬಲೆಗೆ ಬಿದ್ದದ್ದನ್ನೇ ಸರಕ್ಕನೆ ಹಿಡಿದು ತಿಂದುಬಿಟ್ಟ ಆ ಕಪ್ಪೆರಾಯ. ಆಗಲಂತೂ ಜೇಡಕ್ಕ ತುಂಬಾ ಸಂಕಟಪಟ್ಟಳು. ತುಂಬಾ ಯೋಚನೆ ಮಾಡಿದಳು. ಸುತ್ತಮುತ್ತ ಮರ ಹತ್ತಿನೋಡಿಬಂದಳು. ಕಡೆಗೊಂದು ಬೆಳಗ್ಗೆ ಆ ಕಪ್ಪೆರಾಯ ಕಣ್ಣುಮಿಟಕಿಸುತ್ತ ಕೂತಿದ್ದಾಗ ಕರೆದು:

"ಕಪ್ಪೆರಾಯರೇ, ಒಬ್ಬರೇ ಇದ್ದೀರಲ್ಲ! ಬೇಸರವಾಗುತ್ತೊ?" ಎಂದ ಕೂಡಲೆ ಕಪ್ಪೆರಾಯ:

"ಇನ್ನೇನು ನನ್ನ ಹೆಂಡಿರೂ ಬಂದುಬಿಡುತ್ತಾರೆ."ಹೀಗೆಂದು ಆ ಕಡೆ ತಿರುಗಿದನು. ಅಲ್ಲೊಂದು ನೊಣ ಬಂದು ಕಪ್ಪೆರಾಯನ ಅಂಟು ನಾಲಗೆಗೆ ಸಿಕ್ಕದೆ ಮೇಲಕ್ಕೆ ಹಾರಿಹೋಯಿತು. ಜೇಡ

ಕ್ಕನ ಬಲೆಗೆ ಸಿಕ್ಕಿಕೊಂಡಿತು. ಜೇಡಕ್ಕ ಸರಕ್ಕನೆ ಹೋಗಿ ದಾರ ಹಾಸುಹೊಕ್ಕಾಗಿ ಬೀಸಿ, ಭದ್ರಮಾಡಿ ಬಂದು, ಮತ್ತೆ ಕಪ್ಪೆರಾಯನನ್ನು ಕರೆದು ಹೇಳಿತು.

"ನಿಮ್ಮ ಹೆಂಡಿರು ಬಂದರೆ, ಮಕ್ಕಳೂ ಆದರೆ, ಇಲ್ಲಿ ಊಟಕ್ಕೆ ಸಾಕಾಗುತ್ತೆಯೆ ನಿಮಗೆ ......"

ಆಗ ಆ ಕಪ್ಪೆರಾಯ ಗುಳ್ಳೆಗಣ್ಣು ಮುಚ್ಚಿಮುಚ್ಚಿಬಿಟ್ಟು ಹೇಳಿದನು :—

"ಸಾಲದಾಗುತ್ತೇನೋ ಕಾಣೆ. ಈಗಂತೂ ನೊಣಗಳೆಲ್ಲ ಬಲು ಸೂಟಿಯಾಗಿಬಿಟ್ಟವೆ. ನಾಲಗೆಯ ಬಳಿಗೆ ಬರುವುದೇ ಇಲ್ಲ!"

ಜೇಡಕ್ಕ ಎಂದಳು: "ನಿಜ ನೋಡಿ, ನನಗೂ ಹಾಗೇ ಆಗಿದೆ. ನಿಮಗಂತೂ ನಾಲಗೆ ನೀಡಿದರೇ ಸಾಕು ನೊಣಗಳು ಸಿಗುತ್ತವೆ. ನಾನಾದರೊ ಬಲೆ ಬೀಸಿ ಕೂತು ಕಾದಿರಬೇಕು. ಅವೇನು ಬಂದರೆ ಬಂದವು ಇಲ್ಲದಿದ್ದರೆ ಇಲ್ಲ. ನಾನು ಈ ಬಲೆ ಸುತ್ತಿಕೊಂಡು ಹೋಗುವುದಕ್ಕುಂಟೆ. ಇಲ್ಲವಲ್ಲ! ಮರಿಗಳು ಬೇರೆ ಹೊರಕ್ಕೆ ಬರುವಂತಿವೆ ನಾಳೆನಾಡಿದ್ದು! ಹೋಗಬಹುದಾದರೆ ಜಾಗವೇನೋ ಸೊಗಸಾದ್ದಿದೆ ಅಲ್ಲೊಂದು, ಆದರೆ–ನನ್ನ ಅದೃಷ್ಟ ಒಳ್ಳೆಯದಲ್ಲ ...."

ಆಗ ಕಪ್ಪೇರಾಯ ಹೇಳಿದ "ಹಾಗಿದ್ದರೆ ಆ ಜಾಗ ತೋರಿಸಿ ನಾನೇ ಹೋಗಿಬಿಡುತ್ತೇನೆ. ನನ್ನಾಕೆ ಬರುವುದರೊಳಗೆ ಆ ಜಾಗವನ್ನು ನೋಡಿ ಬರುತ್ತೇನೆ. ಅಲ್ಲಿ ಸರಿಯಾಗದಿದ್ದರೆ ಇಲ್ಲಿಗೇ ಬಂದುಬಿಡುತ್ತೇನೆ ಮತ್ತೆ!"

ಜೇಡಕ್ಕ "—ನೀವೆಲ್ಲಿ ಹಿಂತಿರುಗುತ್ತೀರಿ ಹೋದಮೇಲೆ! ಅಲ್ಲಿಯೇ—ನೊಣ, ಹುಳು, ಮುಂತಾದ್ದೇನೇನೋ ರುಚಿ ರುಚಿಯಾದ್ದೆಲ್ಲ ಸಿಕ್ಕಿ ಸ್ವರ್ಗವಾಗಿಬಿಡುತ್ತದೆ. ನೋಡಬಾರದೆ ಅಲ್ಲಿ

ಆ ಖಾರಿಯಲ್ಲಿ ಆ ಮೀನುಗಳಿರುವ ಚಂದವನ್ನಾದರೂ! ಅವಕ್ಕೇನು ನಿತ್ಯ ಸೊಗಸಾದ ಊಟ; ನಮಗಿಲ್ಲಿ ...... ”

ಕಪ್ಪೇರಾಯನಿಗೆ ಮೀನುಗಳನ್ನು ಕಂಡರಾಗದು. ಅವು ಈತ ಇನ್ನೂ ಬಾಲದ ಮರಿಯಾಗಿದ್ದಾಗ ನುಂಗಿಬಿಡುತ್ತೇವೆಂದು ಅಟ್ಟಿಸಿಕೊಂಡು ಬರುತ್ತಿದ್ದವು ಆ ಹಾಳು ಮೀನುಗಳು! ಅಲ್ಲಿ ಹೋಗಿ ಆ ಮೀನುಗಳಿಗೆ ಸಿಗದಂತೆ ಆ ನೊಣಗಳನ್ನೆಲ್ಲ ತಾನೇ ನುಂಗಿಬಿಡಬೇಕೆಂದು ಕುಪ್ಪಕುಪ್ಪಳಿಸಿಕೊಂಡು ಹೊರಟನು—ಆ ಕಪ್ಪೇರಾಯ !

ಆದರೆ ಹೋಗುವುದಕ್ಕೆ ಮುಂಚೆ ಮೇಲು ಚಪ್ಪರದಲ್ಲಿದ್ದ ಜೇಡಕ್ಕನಿಗೆ ಹೀಗೆಂದನು! —“ನೋಡಕ್ಕಾ ಹೊರಟೆ. ಒಂದೆರಡು ಗಳಿಗೆ ಅಲ್ಲಿದ್ದು ನೋಡಿ ಮತ್ತೆ ಇಲ್ಲಿಗೇ ಬರುತ್ತೇನೆ, ಸಂಜೆ ಯೊಳಗೆ ......” ಜೇಡಕ್ಕ ಆಗ ನಗುನಗುತ್ತಾ ಹೇಳಿದಳು :— “ನೀವೆಲ್ಲಿ ಬಂದೀರಿ. ಅಲ್ಲಿ ಹೋದಮೇಲೆ ಹಿಂತಿರುಗುವುದಕ್ಕೇ ಮನಸ್ಸು ಬರುವುದಿಲ್ಲ........”

ಅಂತು ಕಪ್ಪೇರಾಯ ಹೋದ, ಅತ್ತಕಡೆಯಲ್ಲಿದ್ದ ಖಾರಿಗೆ. ಅದು ಇನ್ನು ಕೊಂಚ ಅಗಲವಾಗಿತ್ತು. ಅಲ್ಲಿ ಕಪ್ಪೆಗಳೂ ಮೀನು ಗಳೂ ಬದುಕುವಂತಿರಲಿಲ್ಲ—ಅ ಕಾಡಿನ ಬಾತುಗಳೆಲ್ಲ ಅಲ್ಲಿಗೆ ಬಂದು ಮನಬಂದಂತೆ ಈಜಿ, ಹೊಟ್ಟೆ ತುಂಬುವಂತೆ ನುಂಗಿ ನುಂಗಿ ಹೋಗುತ್ತಿದ್ದವು.

ಗುಂಡಗೆ, ಬಣ್ಣಬಣ್ಣವಾಗಿ, ಥಳಥಳಿಸುತ್ತಾ ಈ ಕಪ್ಪೇ ರಾಯ ಅಲ್ಲಿ ಹೋಗಿ ಕೂತಿದ್ದ ಆ ಖಾರಿಯಲ್ಲಿ........

ಸರಿ ಅದೇ ಸಂಜೆ ಕಾಡುಬಾತುಗಳು — ಬಾಕೀಬೇಕೆ, ಬಾಕೀಬೇಕೇ, ಬ್ಯಾರೇ ಬೇಕೇ—ಎಂದುಕೊಂಡು ಬಂದವು. ತುಂಬಾ ಕೋಲಾಹಲವೆದ್ದಿತು. ಆ ಖಾರಿಯೆಲ್ಲ ಕಲಕಾಡಿ ಹೋಯಿತು.

ಇತ್ತ ಜೇಡಕ್ಕ ಆ ಗದ್ದಲವೆಲ್ಲ ಕೇಳಿ ಸಂತೋಷಪಟ್ಟಳು....
.... ಕಪ್ಪೆ ಹಿಂತಿರುಗಲಿಲ್ಲ...............

ಲೀಲಾ ಹೊಸಬಳಾದಳು

ಲೀಲಾ ಎಂದರೆ ಲೀಲೆಯೇ ಲೀಲೆ! ಅವಳದೆಲ್ಲ ಶಿವ ಲೀಲೆ! ಲೀಲಾ, ಲೀಲಾ,—ಎಂತ ಯಾಕಾದರೂ ಹೆಸರಿಟ್ಟರೋ ಕಾಣೆ. ಅವಳದ್ದೆಲ್ಲ ಬರೀ ಆಟ, ಹುಚ್ಚಾಟವೇ ಆಟ.

ಆಟದ ಗದ್ದಲದಲ್ಲಿ ಅವಳು ಮಗ್ಗೀನೂ ಕಲಿತಿರಲಿಲ್ಲ. ಹದಿನಾಕೊಂದಲ ಇರಲಿ, ನಾಕೊಂದಲ ಹೇಳುವುದಕ್ಕೂ ಬರದು. ಎಂಟು ವರ್ಷ ತುಂಬಿತ್ತು. ಎಂಟು ವರ್ಷ ಕಳೆದಿದ್ದರೂ ಮಗ್ಗಿ ಹೇಳಲಾರದ ಹುಡುಗಿಯಾಗಿದ್ದಳು. ಬಾಯಿಪಾಠ ಬರದಿದ್ದರೆ ಅವಳೆಂಥಾ ಹುಡುಗಿ!

ಅವಳ ಇಸ್ಕೂಲಲ್ಲಿ ಮೇಸ್ಟ್ರು ಕೇಳಿದರು–"ಏನಮ್ಮ ಲೀಲಾ. ಯಾಕಮ್ಮಾ ಹೀಗೆ ದಡ್ಡಿಯಾಗಿಬಿಟ್ಟೆ. ನಿನಗೆ ಮೆದುಳು ಚೆನ್ನಾಗಿದೆ. ಬುದ್ಧಿಶಕ್ತಿ ಚೆನ್ನಾಗಿರುವಾಗ, ಅದನ್ನು ಉಪಯೋಗಿಸಬೇಕಮ್ಮ. ನಿನ್ನ ಕ್ಲಾಸಿಗೆಲ್ಲ ನೀನೇ ಫಸ್ಟ್ ಆಗಿರಬೇಡವೆ ಅದರ ಬದಲು ಲ್ಯಾಸ್ಟ್ ಆಗಿಬಿಟ್ಟೆ!"

ಅದಕ್ಕೆ ಲೀಲಾ ಎಂದಳು—"ನನಗೆ ತಂಗಿ ತಮ್ಮ ಇದ್ದಿದ್ದರೆ ಹೀಗೇನೂ ಆಗುತ್ತಿರಲಿಲ್ಲ ಮೇಸ್ಟ್ರೆ. ನಮ್ಮ ಮನೇಲೀ ನಾನೊಬ್ಬಳೇ ಆಗಿದ್ದೇನೆ. ಜೊತೆಗೆ ಯಾರ‍್ಯಾರು ಇಲ್ಲ ಮೇಸ್ಟ್ರೇ, ಅದಕ್ಕೇ ಹೀಗೆ ಮಂಕಮ್ಮನಾಗಿಬಿಟ್ಟೆ, ನೋಡಿ. ತಂಗಿ ತಮ್ಮ

ಇದ್ದರೆ ನನ್ನ ಜೊತೆಯವರಿಗೆಲ್ಲ ನಾನೇ ಮೊದಲಾಗಿ ನಿಂತುಬಿಡು ತ್ತೀನೆ!"

ಮಾಸ್ಟರೆಂದರು—"ನಿನಗೆ ಅರ್ಧಡಜ಼ನ್ ತಂಗಿ ತಮ್ಮ ಇದ್ದರೂ ಹೀಗೇಸರಿ. ಲೀಲಾ ಎಂದರೆ ದುಷ್ಟಲೀಲಾ! ನಿನ್ನ ದುಷ್ಟಾಟನೆಲ್ಲ ನೋಡಿ ಆ ಮಕ್ಕಳೂ ಕಲಿತ್ತುಬಿಡುತ್ತಾರೆ ಕೆಟ್ಟಾಟ. ಅವರನ್ನೂ ಕೆಡಿಸಿಬಿಡುತ್ತೀಯೆ!"

ಅದಕ್ಕೆ ಲೀಲಾ ಎಂದಳು—"ಇಲ್ಲಾ ಮೇಸ್ಟ್ರೇ! ನೋಡಿ ಬೇಕಾದರೆ. ನನಗೆ ಪುಟ್ಟ ತಂಗಿ ತಮ್ಮ ಬರಲಿ. ಅವತ್ತಿನಿಂದ ನಾನು ಅವರ ಜೊತೆಗೆ ಆಡುತ್ತಾ ಒಳ್ಳೇ ಲೀಲಾ ಆಗಿಬಿಡು ತ್ತೀನೆ."

ಆಗ ಮಾಸ್ಟರು ನಗುತ್ತಾ—"ನಿನಗಿನ್ನೆಂಥಾ ತಂಗಿ ತಮ್ಮ ಬೇಕೋ ನಾನು ಬೇರೆ ಕಾಣೆನಮ್ಮಾ. ಯಾರಾದರೂ ಯಕ್ಷನೋ ಯಕ್ಷಿಣಿಯೋ ನಿನಗೆ ಬುದ್ಧಿ ಕಲಿಸುವಂಥಾ ತಂಗಿ ತಮ್ಮನ್ನ ತಂದು ಕೊಡುತ್ತಾರೆ ಹೋಗಮ್ಮ!"

ಇದನ್ನೆಲ್ಲ ಒಬ್ಬ ಯಕ್ಷಿಣಿ ಕೇಳುತ್ತ ಇದ್ದಳು. ಲೀಲಾಗೆ ಬುದ್ಧಿ ಕಲಿಸಿಬಿಡುತ್ತೇನೆ ಎಂದುಕೊಂಡು ಒಬ್ಬಳು ಯಕ್ಷಿಣಿ ಅದೇ ರಾತ್ರಿ ಬಂದಳು. ಲೀಲಾ ಮಲಗಿದ್ದಳಲ್ಲ ಆ ಕೋಣೆಯ ಕಿಟಕಿಯ ಆಚೆ ನಿಂತು:—

"ಬಾರೇ, ಲೀಲಾ, ಹೊರಗೆ ಬಾ, ಇಲ್ಲಿ ಇದ್ದಾರಮ್ಮಾ ನಿನ್ನ ತಮ್ಮ ಮತ್ತು ತಂಗಿ. ನಿನ್ನ ಸಂಗಡ ಆಟಕ್ಕೆ ಕಾದಿದ್ದಾರಮ್ಮ. ಬಾ, ಈಚೆಗೆ ಬಾ!"

ಈ ಮಾತೆಲ್ಲ ಕೇಳಿ ಲೀಲಾ:

"ಕಡೆಗಂತೂ, ತಂಗಿ ತಮ್ಮ ಸಿಕ್ಕಿಬಿಟ್ಟರಲ್ಲಾ, ನನಗಂತೂ ಗೊತ್ತೇ ಇರಲಿಲ್ಲ. ಏನು ಮಜಾ! ಉಷೇ ಉಷೇ ಬನ್ನೀ ಬನ್ನೀ.

ತಂಗೀ ಬಾರೇ, ಬಾರೋ ತಮ್ಮ, ತಂಗೀ ಮೊದಲೋ ತಮ್ಮ ಮೊದಲೊ; ಬಂದು ಬಿಟ್ಟೇ"—ಎಂದು ಕೂಗಿಕೊಂಡು ಕಿಟಕಿಯಿಂದಲೇ ಹೊರಗೆ ಹಾರಿ ಹೊರಟುಹೋದಳು.

ತೋಟದೊಳಗೆ ನೆಗೆದಾಡಿ ಹೋಗುತ್ತಾ ಇದ್ದಾಗ್ಗೆ ಎದುರಿಗೊಂದು ಬೂದುಬಣ್ಣದ ಹೇಸರಕತ್ತೆ ಬಂತು. ಲೀಲಾ ನಿಂತುಬಿಟ್ಟಳು—ಈ ತೋಟದೊಳಗೆ ಈ ಹೇಸರಕತ್ತೆ ಬಂದದ್ದು ಹೇಗೆ-ಎಂದು ಅಚ್ಚರಿಪಡುತ್ತಾ ಇದ್ದಳು. ಆ ಹೇಸರ ಕತ್ತೆ ಇವಳಿಗೆ ದಾರಿ ಕೊಡಲಿಲ್ಲ. ನಡುದಾರಿಯಲ್ಲಿ ಬಂದು ತನ್ನ ಮುಂಗಡೆ ಕಾಲನ್ನು ಎತ್ತಿ ಲೀಲಾ ಕಡೆಗೆ ಹಿಡಿಯಿತು. ಆಗ ಲೀಲಾ:

"ಇದೇನು ನಿನ್ನ ಕಾಲು—ನಡಿಯಾಚೆ. ನಿನ್ನ ಬಾಲ, ನಿನ್ನ ಕಾಲು, ನಿನ್ನ ಮುಸುಡಿ ನನಗೇನೂ ಬೇಡ ನಡಿಯಾಚೆ! ಇದು ನಮ್ಮನೆ ತೋಟ." ಈ ಮಾತುಕೇಳಿ ಆ ಹೇಸರು ಕತ್ತೆ—

"ನಮ್ಮನೆ ತೋಟ? ಇದೇನು ಹೀಗೆ ಹೇಳುತ್ತಿ? ಇದು ನಮ್ಮ ತೋಟ. ತಮ್ಮ ಬೇಕು ತಮ್ಮ ಬೇಕು, ಎಂತ ಅಂಗಲಾಚಿ ಬೇಡಿಕೊಂಡೆ. ತಮ್ಮಾಂತ ನಾನು ಬಂದರೆ ಕೈಹಿಡಿದು ಕುಣಿದಾಡಿ, ಮುಸುಡಿಗೆ ಮುತ್ತಿಟ್ಟು, ಮೈಯೆಲ್ಲ ತಡವರಿಸಿ, ಬಾಲಕ್ಕೆ ಜಡೆ ಹೆಣೆದು, ಪ್ರೀತಿ ತೋರಿಸಬೇಡವೇ ಲೀಲಾ, ಅದೂ ಬಿಟ್ಟು ...."

ಈ ಮಾತಿಗೆ ಲೀಲಾ ಸಿಟ್ಟಾದಳು:

"ಅದು ಬಿಟ್ಟು ಇದು ಬಿಟ್ಟು ಈ ಹೇಸರಕತ್ತೇನೆ ನನ್ನ ತಮ್ಮಾ? ಅಯ್ಯೋ ನನ್ನಮ್ಮಾ! ಇದೇನೇ ಈ ತೋಟಕ್ಕೆ ಹೇಸರ ಕತ್ತೆ ನುಗ್ಗಿ ಹಾವಳಿ ಮಾಡುತ್ತಾ..."

ಅಷ್ಟು ಹೊತ್ತಿಗೇ ಎದುರಲ್ಲಿ ಬಂದು ನಿಂತಳು ಆ ಯಕ್ಷಿಣಿ. ಒಂದು ಸಾರಿ ಅಮ್ಮನ ಹಾಗೂ, ಇನ್ನೊಂದು ಸಾರಿ ಮಾಸ್ತರ ಹಾಗೂ ಮತ್ತೊಂದು ಸಾರಿ ಅಪ್ಪನ ಹಾಗೂ ಕಾಣಿಸುತ್ತಾ:

"ಇವನೇ ನಿನ್ನ ತಮ್ಮಾ! ಏ ಲೀಲೂ, ಅವನ ಕೈಹಿಡಿದು ಕುಣಿ. ಅವನ ಮುಸುಡಿಗೆ ಮುತ್ತಿಡು. ನಿನ್ನ ಹಾಗೇ ಮುಸುಂಡಿಯಾಗಿ, ನಿನ್ನ ಹಾಗೇ ಒಡ್ಡಾಗಿ, ನಿನ್ನ ಹಾಗೇ ಒರಟಾಗಿ, ನಿನ್ನ ಹಾಗೇ ದಡ್ಡಿಯಾಗಿ, ನಿನ್ನ ಹಾಗೇ ಅಷ್ಟುದ್ದ ಇಷ್ಟುಗಾತ್ರಕ್ಕೆ ಬೆಳೆದು, ನಿನ್ನ ಹಾಗೇ......" ಆಗ ಲೀಲಾ ಆ ಯಕ್ಷಿಣಿಯನ್ನ ಅಣಕಿಸುತ್ತಾ:

"ನಿನ್ನಾ ಹಾಗೇ ಇಸ್ಕೂಲಿಗೆ ಹೋಗಿ, ನಿನ್ನ ಹಾಗೇ ಮಗ್ಗಿ ತಪ್ಪಿ, ನಿನ್ನ ಹಾಗೇ........ಅದೇನೇನೆಲ್ಲ ಹೇಳುತ್ತೀರೋ ಹೇಳಿಬಿಡಿ ಮೇಸ್ಟ್ರೇ. ನಾನೊಬ್ಬಳು ಸಿಕ್ಕಿಬಿಟ್ಟಿದ್ದೇನೆ ನಿಮಗೆ; ಇಸ್ಕೂಲಿಗೆ ಬಂದರೆ ಹಾಸ್ಯ ಮಾಡೋದು, ಬೀದೀಲಿ ಹೋದರೆ ಅಣಕಿಸೋದು!" ಹೀಗೆಂದು ಗಟ್ಟಿಯಾಗಿ ಅಳಲಾರಂಭಿಸಿಬಿಟ್ಟಳು.

ಆಗ ಆ ಯಕ್ಷಿಣಿ ಮತ್ತೆ ಹೇಳಿದಳು; "ಹಾಗಾದರೆ ಇದೋ ನೋಡಮ್ಮಾ, ನಿನಗೆ ತಕ್ಕಂಥಾ ತಂಗಿ ತಮ್ಮಂನ್ನ ಕಂಡರಂತೂ ಅಸಡ್ಡೆ. ತಂಗಿಯನ್ನಾದರೂ ಕರೆದುಕೊಂಡು ಆಡಮ್ಮ!"

ಆ ಮಾತು ಕೇಳಿ ಲೀಲಾ ಅತ್ತ ಇತ್ತ ನೋಡಿ-"ಬಾರಮ್ಮ ತಂಗೀ, ನಿನ್ನ ಸಂಗಡಲಾದರೂ ಆಟವಾಡೋಣ. ನನ್ನ ಲಂಗದ ಬಣ್ಣವೇ ಹೋಗಿಬಿಟ್ಟಿದೆ ಮೊನ್ನೆದಿನ ಸುಣ್ಣಕದರಿ ಎರಚುತ್ತ ಇದ್ದಾಗ. ನಿನ್ನ ಲಂಗ ಹೇಗಿರುತ್ತೆ ನೋಡೋಣ. ನಿನ್ನ ಸಂಗಡ ಒಳ್ಳೇ ಆಟ ಆಡುತೇನಮ್ಮ. ನಿಂಗೆ ಮಗ್ಗೀ ಹೇಳಿಕೊಡುತ್ತಾ ನಾನೂ ಅಭ್ಯಾಸ ಮಾಡಿಕೋತೇನೆ. ಏನ್ರೀ ಮೇಸ್ಟರೇ, ನೀವೇನೇ ನನಗೆ ತಮ್ಮಾ ತಂಗೀ ತಂದುಕೊಡೋರು? ಒಳ್ಳೇ ತಂಗೀನಾದರೂ ತೋರಿಸಿ........" ಹೀಗೆನ್ನುವಾಗ ಅಲ್ಲೇ ರಸ್ತೆ ಮಗ್ಗುಲಲ್ಲಿ ಒಂದು ಕೆಸರು ಹೊಂಡ ಇತ್ತಲ್ಲ ಅದರೊಳಗಿಂದ—ಯ್ಯಾಕ್ ಯ್ಯಾಕ್! ಇಕ್ಕಬೇಕ್ ಇಕ್ಕಬೇಕ್!—ಎಂದುಕೊಂಡು ಒಂದು ಉದ್ದ

ಕತ್ತಿನ ಬಾತುಕೋಳಿ ರೆಕ್ಕೆ ಬಡಿದುಕೊಳ್ಳುತ್ತಾ ಅವಳ ಕಡೆಗೆ ಬಂತು.

ಆಗ ಲೀಲಾ: " ಇದೇನು ಎಲ್ಲಿಂದ ಬಂದೇ, ಏ ಕೊಳಕ ಬಾತೇ, ನಡೀ ನಡೀ, ಇನ್ನು ನನ್ನಮೇಲೆಲ್ಲ ಆ ಕೆಸರು ಹಾರಿಸ ಬೇಡ. ಸಾಕಾಗಿದೆ ಇಷ್ಟೇ ಬಣ್ಣ ಈ ಲಂಗಕ್ಕೆ. ದೂರ ಇರಮ್ಮಾ ಸಧ್ಯಕ್ಕೆ, ನಿನ್ನ ದಮ್ಮಯ್ಯಾ !"

ಆಗ ಲೀಲಾ ನೋಡುತ್ತ ಇದ್ದ ಹಾಗೆ ಆ ಬಾತು ಹತ್ತಿರ ಬಂದು ರೆಕ್ಕೆಬೀಸಿಕೊಂಡು "ಆಕ್ಕಾಕ್ಲೀಲ್ಲಾಕ್ಕಾ ಯ್ಯಾಕ್ಕ್ ಯ್ಯಾಕ್ಕ್! ನ್ನಿಲ್ಲಾಕ್ಕಾ ಅಕ್ಕಾ".—ಈ ದನಿಯೆಲ್ಲ ಕೇಳಿ ಲೀಲಾ ಕೈಕಾಲು ಸೋತು ಅಲ್ಲೇ ಹಾದಿಯಲ್ಲಿ ಕುಳಿತುಬಿಟ್ಟಳು ಕಣ್ಣು ಮುಚ್ಚಿಕೊಂಡು, ಆ ನಡು ಹಾದಿಯಲ್ಲಿ.

ಆಗ ಯಕ್ಷಿಣಿ ಹೇಳಿದಳು—"ಏ ಲೀಲಾ ಆ ಬಾತನ್ನು ತಬ್ಬಿ ಕೊಳ್ಳಮ್ಮಾ. ಅದರ ಮೂತಿಗಾದರೂ ಮುತ್ತುಕೊಡು. ಅದಕ್ಕಾ ದರೂ ಮಗ್ಗಿ ಹೇಳಿಕೊಡು !"

ಹಾಗೆ ಹೇಳುವಾಗ ಆ ಬಾತು ಹತ್ತಿರ ಬಂದು ತನ್ನ ಉದ್ದ ವಾದ ಕತ್ತನ್ನ ಅವಳ ಕತ್ತಿಗೆ ಸುತ್ತಿ ಅವಳ ತುಟಿಯ ಹತ್ತಿರ ಕೊಕ್ಕೊ ಹಿಡಿದೆತ್ತಿಕೊಂಡು:

"ಅಕ್ಕಾ ಲ್ಲೀಲ್ಲಾ ಕ್ಕಾ ಅಕ್ಕಾ !—ಮಾತಾಡಕ್ಕಾ"—ಎನ್ನ ಲಾರಂಭಿಸಿತು.

ಲೀಲಾ ಆಕ್ಷಣವೇ ಎದ್ದು ನಿಂತು ಆ ಬಾತನ್ನು ಎರಡು ಕೈಲೂ ಹಿಡಿದು ಕಿತ್ತು ಎಸೆದುಬಿಟ್ಟಳು: "ನನಗೆ ಇಂಥಾವರೇ ತಂಗೀ ತಮ್ಮಾ? ಇನ್ನು ಬೇರೆ ಇಲ್ಲವೆ ಈ ಪ್ರಪಂಚದಲ್ಲೀ? ಹೇಸರಕತ್ತೇ, ಕೆಸರಬಾತೇ, ನನ್ನ ತಮ್ಮಾ ನನ್ನ ತಂಗೀ? ಇನ್ನಾರೂ ಇಲ್ಲವೆ?........"ಹೀಗೆಂದು ಅಳಲಾರಂಭಿಸಿದಾಗ ಆ ಯಕ್ಷಿಣಿ ಹೇಳಿದಳು :

"ಏ ಲೀಲಾ! ಅವರಿಬ್ಬರೂ ನಿನ್ನ ಬುದ್ಧಿಗೆ ತಕ್ಕವರಮ್ಮಾ. ಅವರ ಮೇಲೆ ಸಿಟ್ಟುಮಾಡದಿರಮ್ಮಾ. ಅವರದೇನಮ್ಮಾ ತಪ್ಪು? ನೀನು ಹೇಗಿದ್ದೀಯೋ ಹಾಗೇ ಅವರಿದ್ದಾರೆ. ಅಲ್ಲವೇನಮ್ಮಾ ?" —

ಆಗ ಆ ಹೇಸರಕತ್ತೆ ಹೇಳಿತು—"ಇವಳೇಯೋ ನನ್ನಕ್ಕ ನಾಗುವವಳು? ಇಂಥಾ ದಡ್ಡಿಯನ್ನು ಅಕ್ಕಾ ಎನ್ನಲು ನನಗೂ ನಾಚಿಕೆ. ನಾನಿರುವುದಿಲ್ಲ ಇಲ್ಲಿ!"

ಅದೇ ಸಮಯದಲ್ಲಿ ಬಾತು ಹೇಳಿತು—"ಇವಳೇಯೇನು ಲೀಲಾ! ಹೊಲಸು ಲೀಲಾ! ಇವಳೇನು ನನ್ನಕ್ಕಾ? ನಾನಂತೂ ಇವಳ ಬಳಿ ಸುಳಿಯುವುದಿಲ್ಲ. ಎಂಥಾ ಒರಟು ಹುಡುಗಿಯಮ್ಮಾ ಇವಳು. ನನ್ನ ಕತ್ತು ಇಲ್ಲಿಂದಲ್ಲಿಯವರೆಗೂ ನೋಯುತ್ತೆ!

ಆಗ ಯಕ್ಷಿಣಿ ಹೇಳಿದಳು—"ನೋಡಮ್ಮಾ ಲೀಲಾ ಹೇಸರ ಕತ್ತೆಯೂ ಕೆಸರಬಾತೂ, ನಿನ್ನ ಗುಣವನ್ನು ನೋಡಿ ಹೇಸಿ ಕೊಂಡವು. ಅವೂ ಕೂಡ ನಿನ್ನ ಸಂಗಡ ಇರಲಾರವಂತೆ. ನೀನು ಬೇಡ ಎನ್ನುವುದಕ್ಕೆ ಮುಂಚೆ ಅವೇ ಹೊರಟು ಹೋಗಬೇಕೆನ್ನುತ್ತ ಇವೆ. ಹೋಗಿರಿ ನೀವಿಬ್ಬರೂ, ಏ ತಮ್ಮ ಏ ತಂಗೀ ಈ! ಲೀಲಾ........"

ಆಗ ಲೀಲಾ—"ಈ ಲೀಲಾ ಅವರಿಗಿಂತ ಬುದ್ಧಿವಂತೆ. ಅವಳಿಗೆ ಮೆದುಳು ಇದೆಯಂತೆ, ಬುದ್ಧಿಯಿದೆಯಂತೆ—ನಮ್ಮ ಮೇಸ್ಟರೇ ಹೇಳಿದ್ದಾರೆ. ಅದನ್ನೆಲ್ಲಾ ಉಪಯೋಗಿಸಿಕೊಂಡು ತಂಗಿ ತಮ್ಮ ಇಲ್ಲದೇನೇ ನಾನು ಬುದ್ಧಿವಂತಳಾಗುತ್ತೇನೆ." ಹೀಗೆಂದಳು.

ಆಗ ಆ ಯಕ್ಷಿಣಿ ಹೇಳಿದಳು—"ಹಾಗಾದರೆ ಬುದ್ಧಿವಂತೆ ಯಾಗು. ನೀನು ಒಳ್ಳೆಯ ಲೀಲೆಯಾಗಿ ಬಿಟ್ಟರೆ ಒಳ್ಳೆಯ ತಂಗಿ ತಮ್ಮಂದಿರೇ ಸಿಗುತ್ತಾರೆ. ಇಲ್ಲದಿದ್ದರೆ........"

"ನನಗೆ ತಮ್ಮ ತಂಗಿ ಇಲ್ಲದಿದ್ದರೂ ಚಿಂತೆಯಿಲ್ಲ, ಇಂಥಾ ತಮ್ಮಾ ತಂಗೀ ಬೇಡವೇ ಬೇಡ!'' ಹೀಗೆಂದು ಲೀಲಾ ಸಿಟ್ಟು ಗೊಂಡು ಕಣ್ಣು ಬಿಟ್ಟಳು.

ಅಷ್ಟುಹೊತ್ತಿಗೆ ಲೀಲಾನ ತಾಯಿ ಹಾಸಿಗೆಯ ಬಳಿಗೆ ಬಂದರು—"ಲೀಲಾ! ಬುದ್ಧಿವಂತೆಯಾಗಿರಮ್ಮಾ ಎಲ್ಲರ ಕೈಲೂ ಒಳ್ಳೆಯವಳು ಎನ್ನಿಸಿಕೊಳ್ಳಮ್ಮಾ!" ಅವರ ಮಾತು ಕೇಳಿ ಲೀಲಾ ಹೀಗೆಂದಳು:

"ಅಮ್ಮ ಇವತ್ತಿನಿಂದ ನಾನು ಬುದ್ಧಿವಂತೆಯಾಗಿರುತ್ತೇನಮ್ಮಾ........ಇಲ್ಲದಿದ್ದರೆ ನನ್ನ ತಮ್ಮ ಹೇಸರಕತ್ತೆಯಾಗಿಬಿಡುತ್ತಾನೆ....ನನ್ನ ತಂಗಿ ಬಾತುಕೋಳಿಯಾಗಿಬಿಡುತ್ತಾಳೆ...ಅಲ್ಲವೇನಮ್ಮಾ........''

ತಾಯಿ—"ಯಾರಮ್ಮ ಹಾಗೆಂದವರು?"

ಲೀಲಾ ತನ್ನ ಕನಸೆಲ್ಲ ಆ ತಾಯಿಗೆ ಹೇಳಲಾರದೆ ಹೀಗೆಂದಳು: "ನನಗೆಲ್ಲ ಗೊತ್ತಮ್ಮ! ನಾನು ಒಳ್ಳೆಯವಳಾಗಿದ್ದರೆ, ಉಳಿದವರೆಲ್ಲ ಒಳ್ಳೆಯವರಾಗಿರುತ್ತಾರೆ......''

ಅಂದಿನಿಂದ ಲೀಲಾ ಹೊಸಲೀಲಾ ಆಗಿಬಿಟ್ಟಳು.

ಬಲ ಮುಗ್ಗುಲು

ಹಿಂದಾನು ಹಿಂದಿನ ಕಾಲದಲ್ಲಿ ಮನುಷ್ಯರಿಗೆಲ್ಲ ತುಂಬಾ ಕೆಲಸ ಇತ್ತು. ಸೂರ್ಯ ಇರಲಿ ಇಲ್ಲದಿರಲಿ ಅವರು ಕೆಲಸ ಮಾಡಲೇಬೇಕಾಗಿತ್ತು. ಸೋಮಾರಿಗಳೇ ಇರಲಿಲ್ಲ ಆಗ. ಶೀರ

ಸಣ್ಣ ಮಕ್ಕಳೂ ಪೂರ ದೊಡ್ಡ ಮುದುಕರೂ ಕೊಂಚ ಹೊತ್ತು ತೂಕಡಿಸುತ್ತಿದ್ದರು; ಮತ್ತೆ, ಪುನಃ ಎದ್ದು ಚಟುವಟಿಕೆಯಾಗಿ ಇರುತ್ತಿದ್ದರು. ಹರೆಯರಂತೂ ತೂಕಡಿಸುವುದನ್ನು ಅರಿತಿರಲಿಲ್ಲ. ಅವರು ತುಂಬಾ ಚುರುಕಾಗಿದ್ದರು.

ಹೀಗೆ ಮನುಷ್ಯರೆಲ್ಲ ಚಟುವಟಿಕೆಯಾಗಿದ್ದಾರಲ್ಲಾ ಎಂತ ಗಂಧರ್ವರಿಗೆಲ್ಲ ಅಸೂಯೆ, ಪೂರಾ ಅಸೂಯೆ ಬಂತು. ಆದ್ದರಿಂದ ಮನುಷ್ಯರು ಕೊಂಚ ಹೊತ್ತಾದರೂ ಮಲಗಿರುವ ಹಾಗೆ ಮಾಡುವುದಕ್ಕೊಂದು ಉಪಾಯವನ್ನು ಕಂಡು ಹಿಡಿಯಬೇಕಾಗಿತ್ತು.

ಅದಕ್ಕೊಬ್ಬ ಮಂತ್ರವಾದಿಯನ್ನು ಅವರು ಭೂಲೋಕಕ್ಕೆ ಕಳಿಸಿಕೊಟ್ಟರು. ಆ ಮಂತ್ರವಾದಿ ಬಂದವನೆ ಬಂದು ಒಂದು ಹೊಂಗೆಯ ಮರದ ಬುಡದಲ್ಲಿ ನಿಂತುಕೊಂಡು ಒಂದು ಸುಪ್ಪತ್ತಿಗೆಯನ್ನೂ ಅದಕ್ಕೆ ತಕ್ಕ ಮಂಚವನ್ನೂ ನಿರ್ಮಾಣ ಮಾಡಿದನು.

"ಹ್ರಾಂ, ಹ್ರೀಂ, ಹ್ರೂಂ. ಫೂಂಪಸ್"—ಎಂದು ಮೂರು ಕಲ್ಲುಗಳನ್ನು ಎಸೆದುಬಿಟ್ಟನು-ಮಂಚ ಸುಪ್ಪತ್ತಿಗೆ ಆಗಿಹೋಯಿತು! ಮಂತ್ರವಾದಿ ಮಾಡಿದ ಮಂಚ ಸುಪ್ಪತ್ತಿಗೆ, ಕೇಳಬೇಕೆ ಅದರ ಲಕ್ಷಣ!

ಸಿಂಹದ ಕಾಲುಗಳು, ನವಿಲಿನ ರೆಕ್ಕೆಗಳು ಆ ಪಕ್ಕೆ ಈ ಪಕ್ಕೆಗೆ! ನವಿಲಿನ ತಲೆ, ಕೊಕ್ಕು, ಕಣ್ಣುಗಳು, ಆನೆಯ ದಂತಗಳು ಸೊಂಡಿಲುಗಳು—ನಿಜವಾದ ಬಣ್ಣದಲ್ಲೇ ಇದ್ದವು. ನವಿಲೇ ಇದೆಯೋ, ಆನೆಯೇ ಇದೆಯೋ, ಇದೇನು ಕಾಡಿನ ಎಲೆಗಳೂ ಹೂಗಳೂ ಹಣ್ಣುಗಳೂ ಇವೆಯೋ ಏನೋ ಆ ಮಂಚದಲ್ಲಿ—ಎನ್ನುವಂತೆ ಅದು ಆನಂದವಾಗಿತ್ತು. ಅಂತೂ ಅದೊಂದು ಯಕ್ಷಿಣೀ ಮಂಚವಾಗಿತ್ತು, ಎಲ್ಲರ ಮನಸ್ಸನ್ನೂ ಸೆಳೆಯುತ್ತಿತ್ತು!

ಅದನ್ನು ಕಂಡು ಒಬ್ಬ ಮನುಷ್ಯ ಇದೇನೋ ಕಾಡೇ ಸರಿ

ಯೆಂದು ಭ್ರಮಿಸಿದ ಮತ್ತು ತನಗೆ ತೂಕಡಿಕೆ ಬಂದಾಗ ಅಲ್ಲಿ ಕೊಂಚಹೊತ್ತು ಕುಳಿತುಕೊಂಡ.

ಕಣ್ಣು ಮುಚ್ಚಿದನೊ ಇಲ್ಲವೊ ಮೈ ತುಂಬಾ ಭಾರವಾಗಿ ಬಿಟ್ಟಿತು. ಅಲ್ಲೇ ಉರುಡಿಕೊಂಡುಬಿಟ್ಟನು. ಅವನಿಗೆ ನಿದ್ದೆ ಬಂದುಬಿಟ್ಟಿತು. ಗಟ್ಟಿ ನಿದ್ದೆ, ಬಂಗಾರ ನಿದ್ದೆ—ಕನಸೇ ಇಲ್ಲದ ನಿದ್ದೆ! ಯಾವಾಗಲೋ ಎಚ್ಚರವಾಯಿತು ಅವನಿಗೆ! ಎಚ್ಚರ ವಾದಾಗ ಅವನಿಗೆ ತುಂಬಾ ಆನಂದವಾಗಿತ್ತು. ಮತ್ತೆ ಅಲ್ಲೇ ಮಲಗಬೇಕೆನ್ನಿಸಿತು ಆ ಮನುಷ್ಯನಿಗೆ, ಆದರೆ ಈ ಮಂತ್ರವಾದಿ ಒಪ್ಪಲಿಲ್ಲ. ಎಬ್ಬಿಸಿ ಕಳಿಸಿಬಿಟ್ಟನು.

ಮನುಷ್ಯರಿಗೆಲ್ಲ ಈ ಸುಪ್ಪತ್ತಿಗೆಯ ಹುಚ್ಚು ಹಿಡಿಸಬೇಕೆಂದು ಅವನಾಸೆ. ಒಂದೊಂದು ದಿನ ಒಬ್ಬೊಬ್ಬರಿಗೆ ಮಲಗುವುದಕ್ಕೆ ಎರವಲು ಕೊಡುತ್ತಿದ್ದ. ಒಬ್ಬೊಬ್ಬ ಮನುಷ್ಯನೂ ಮಲಗಿ ಮಲಗಿ ನಿದ್ದೆಯ ಹುಚ್ಚು ಎಲ್ಲರಿಗೂ ಹತ್ತಿಬಿಟ್ಟಿತು.

ಈ ವೇಳೆಗೆ ಒಂದು ಯಕ್ಷಿಣಿ ಬಂದು ಆ ಮಂಚದ ಮೇಲೆ ಆ ಸುಪ್ಪತ್ತಿಗೆಯಲ್ಲಿ ಒರಗಿ ಮಲಗಿ ನಿದ್ದೆಮಾಡಿಬಿಟ್ಟಿತು. ಬಹಳ ದಿನ ಏಳಲೇ ಇಲ್ಲ. ಮಂತ್ರವಾದಿ ಯಕ್ಷರಾಜನಿಗೆ ಹೇಳಿಕೊಂಡನು. ಆ ಯಕ್ಷರಾಜ ಆ ಯಕ್ಷಿಣಿಗೆ ಶಾಪ ಕೊಟ್ಟುಬಿಟ್ಟ–"ಇನ್ನು ಮೇಲೆ ನೀನು ಸುಪ್ಪತ್ತಿಗೆಯ ಮೇಲೆ ಬಿದ್ದಿರು, ಏಳಲೇಬೇಡ, ಅದೇ ಶಿಕ್ಷೆ ನಿನಗೆ!"

ಆ ಯಕ್ಷಿಣಿ ತುಂಬಾ ದುಃಖಪಟ್ಟು ಬೇಡಿಕೊಂಡಳು—ಆಮೇಲೆ ಯಕ್ಷರಾಜನಿಗೆ ಕನಿಕರ ಹುಟ್ಟಿತು. ಅಂದಿನಿಂದ ವಿಶಾಪ ಕೊಟ್ಟನು—ಅದರ ಪ್ರಕಾರ:

—"ರಾತ್ರಿಯೆಲ್ಲ ಹಾರಾಡಿ ತಿರುಗಿಕೊಂಡಿರಬಹುದು. ಆದರೆ ಹಗಲು ಹೊತ್ತು ಮಾತ್ರ ಸುಪ್ಪತ್ತಿಗೆಯ ಮೇಲೇ ಬಿದ್ದಿರಬೇಕು."

ಮಂತ್ರವಾದಿ ಏನು ಮಾಡಿದರೂ ಈ ಶಾಪದ ಯಕ್ಷಿಣಿ ಹಾಸಿಗೆ ಬಿಟ್ಟು ಹೋಗಲಿಲ್ಲ. ಆ ಮಂಚವನ್ನು ಬಿಟ್ಟು ತೊಲಗ ಲಿಲ್ಲ. ಆದ್ದರಿಂದ ಮನುಷ್ಯರು ಯಾರಾದರೂ ಮಲಗಬೇಕಾದರೆ ಸೂರ್ಯ ಮುಳುಗಿದ ಮೇಲೇ ಸರಿ; ಮತ್ತು ಹಾಗೆ ಮಲಗಿದವರು ಬೆಳಗಾಗುವುದರೊಳಗೇ ಎದ್ದುಬಿಡಬೇಕು. ಸೂರ್ಯ ಉದಯ ವಾಗುವವರೆಗೆ ಯಾರಾದರೂ ಹಾಸಿಗೆಯಲ್ಲಿದ್ದರೆ ಖಂಡಿತ ಯಕ್ಷಿ ಣಿಯ ಸಿಟ್ಟಿಗೆ ಪಾತ್ರರಾಗಬೇಕಾಗಿತ್ತು.

ಹಾಗಾದರೂ, ಮನುಷ್ಯರೋ ಈ ರೀತಿ ಮಲಗುವ ದುರ ಭ್ಯಾಸವನ್ನು ಚೆನ್ನಾಗಿ ಕಲಿಯುತ್ತಾ ಬಂದರು. ದೇವತೆಗಳಿಗೂ ಗಂಧರ್ವರಿಗೂ ತುಂಬಾ ಆನಂದವಾಯಿತು, ಹೀಗೆ ಮನುಷ್ಯರು ಕೆಡುತ್ತಾ ಬಂದುದನ್ನು ಕಂಡು !

ಇತ್ತ ಈ ಯಕ್ಷಿಣಿಯಾದರೊ ಸುಪ್ಪತ್ತಿಗೆಯನ್ನು ಹಗಲು ಹೊತ್ತು ಬಿಡವೊಲ್ಲಳಾದಳು. ಮಂತ್ರವಾದಿಯು ತುಂಬಾ ಕೇಳಿ ಕೊಂಡಮೇಲೆ, ಆ ಸುಪ್ಪತ್ತಿಗೆಯ ಎಡಗಡೆ ಮಾತ್ರ ತಾನು ಮಲಗಿ ರುವುದಾಗಿ ಮಾತುಕೊಟ್ಟಳು. ಆದ್ದರಿಂದ ಏಳುವಾಗ ಮನು ಷ್ಯರು ಬಲ್ಲಗಡೆಗೇ ತಿರುಗಿರಬೇಕು.

ಎದ್ದೇಳುವಾಗ ಮಾತ್ರ ಬಲಗಡೆಯಿಂದ ಏಳಬೇಕು. ಇಲ್ಲ ದಿದ್ದರೆ ಮತ್ತೆ ರಾತ್ರಿಯವರೆಗೆ ಅವರಿಗೆ ಕಷ್ಟವೇ ಕಷ್ಟ. ಆದ್ದರಿಂದ ಈಗಲೂ ಯಾರಾದರೂ ಹೇಳುವುದನ್ನು ನೀವು ಕೇಳಿರಬಹುದು– "ಅಯ್ಯೋ ! ಈ ದಿನವೆಲ್ಲೋ ಎಡಮುಗ್ಗುಲಲ್ಲಿ ಎದ್ದುಬಿಟ್ಟಿರಬೇಕು!" ಎಂತ ಹೇಳುವುದನ್ನು ಮತ್ತು ನಿಮ್ಮ ತಾಯಿ ಬೆಳಗ್ಗೆ ಹಾಸಿಗೆ ಬಳಿಗೆ ಬಂದು "ಬಲಮುಗ್ಗುಲಲ್ಲಿ ಏಳಪ್ಪ" ಎಂದು ಹೇಳು ವುದನ್ನು !

ಕಾರಣ ಗೊತ್ತಾಯಿತೋ? ಎಡಮುಗ್ಗುಲಲ್ಲಿ ಯಕ್ಷಿಣಿ

ಇರುತ್ತಾಳೆ. ನೀವು ಅತ್ತಕಡೆ ಎದ್ದರೆ ಅವಳನ್ನು ತುಳಿದು ನೋಯಿಸಿ ಏಳುತ್ತೀರಿ. ಅವಳು ಸಿಟ್ಟಾಗಿ ಶಾಪಕೊಡುತ್ತಾಳೆ. ಆದ್ದರಿಂದ ಬಲಮಗ್ಗುಲಲ್ಲಿ ಎದ್ದೇಳಬೇಕು.

ಇರಲಿ. ಸ್ವಲ್ಪ ಹಿಂದಿನ ವಿಚಾರ ತೆಗೆದುಕೊಳ್ಳೋಣ... ....

ಮಂತ್ರವಾದಿ ಮಾಡಿದ ಆ ಮಂಚಕ್ಕಾಗಿ ಹಲವರು ಹೊಡೆದಾಡಿದರು. ಕಟ್ಟಕಡೆಗೆ ಆ ಮಂಚ ಸುಪ್ಪತ್ತಿಗೆಯೆಲ್ಲ ಹರಿದು ಮುರಿದು ಹಾಳಾಗಿಹೋಯಿತು. ಆದರೆ ಮನುಷ್ಯರು ಕಲಿತಿದ್ದ ನಿದ್ದೆಯ ಅಭ್ಯಾಸ ಸ್ಥಿರವಾಯಿತು. ಅವರು ರಾತ್ರಿ ಮಲಗುವುದನ್ನು ಬಿಡಲೇ ಇಲ್ಲ. ದುರಭ್ಯಾಸ ನಿಂತೇಹೋಯಿತು. ಆದ್ದರಿಂದ ಅವರು ತಮತಮಗೆ ಬೇಕಾದಂತೆ ಮಂಚ ಸುಪ್ಪತ್ತಿಗೆಗಳನ್ನು ಮಾಡಿಕೊಂಡು ಮಲಗುತ್ತಾ ಬಂದರು.

ಇತ್ತ ಯಕ್ಷಿಣಿ ಒಬ್ಬಳಲ್ಲ ನೂರಾರು, ಸಾವಿರಾರು, ಲಕ್ಷಾಂತರ ಮತ್ತು ಕೋಟ್ಯಂತರ ಯಕ್ಷಿಣಿಯರು ಮಂಚ ಸುಪ್ಪತ್ತಿಗೆ ಕಂಡಲ್ಲೆಲ್ಲಾ ಬಂದು ಮಲಗಲಾರಂಭಿಸಿದರು. ಮನುಷ್ಯರ ಹಾಗೆ ಅವರೂ ಕೆಟ್ಟ ಅಭ್ಯಾಸ ಮಾಡಿಕೊಂಡರು. ಆದರೆ ಯಕ್ಷಿಣಿಯರು ಹಗಲುಹೊತ್ತೇ ಮಲಗುತ್ತಾರೆ. ರಾತ್ರಿಯಲ್ಲ.

ಆದ್ದರಿಂದ ಈಗಲೂ ಕೂಡ ಹಗಲು ಹೊತ್ತು ಯಾರಾದರೂ ಹಾಸಿಗೆ ಹಾಕಿ ಮಲಗಿದರೆ ಅವರಿಗೆ ಎದ್ದಾಗ ಭ್ರಾಂತಿ ಹಿಡಿದ ಹಾಗೇ ಆಗುತ್ತದೆ. ಕಾರಣವೇನು? ಇನ್ನೇನು ಯಕ್ಷಿಣಿ ಮಲಗಿರುತ್ತಾಳೆ. ಅವಳು ಶಾಪ ಕೊಡುತ್ತಾಳೆ. ಕೆಟ್ಟ ಕನಸಿನೊಳಕ್ಕೆ ಎಳೆದುಕೊಂಡು ಹೋಗುತ್ತಾಳೆ. ಆದ್ದರಿಂದ ಹಗಲು ಮಲಗಬಾರದು.

ಅಷ್ಟೇ ಅಲ್ಲ, ಬರೀ ಹಾಸಿಗೆ ಬಿಚ್ಚಿಡಲೇಬಾರದು–ಯಾವಾಗ ಬಿಚ್ಚಿದ್ದರೂ ಒಂದು ತುದಿಯಾದರೂ ಮುದುರಿರಬೇಕು. ಹಾಗಿ

ದ್ದರೆ ರಾತ್ರಿ ಯಕ್ಷಿಣಿಯ ಬಾಧೆಯಿರುವುದಿಲ್ಲ. ಹಗಲಂತೂ ಮಲಗಿದರೆ ಯಕ್ಷಿಣಿಯ ಬಾಧೆ ತಪ್ಪುವುದಿಲ್ಲ. ಮತ್ತೆ ಇನ್ನು ಒಂದು ವಿಚಾರ–ಬೆಳಗಿನ ಜಾವ ಯಕ್ಷಿಣಿ ಹಿಂತಿರುಗುವ ಸಮಯ. ಅಷ್ಟರೊಳಗೆ ಏಳುವವರು ಎತ್ತಕಡೆ ಎದ್ದರೂ ಚಿಂತೆಯಿಲ್ಲ. ಅಷ್ಟರ ಮೇಲೆ ಏಳುವವರು ಮಾತ್ರ ಬಲಗಡೆಯೇ ಏಳಬೇಕು. ಬಲ ಮಗ್ಗುಲಲ್ಲೇ ಏಳಬೇಕು!

ನಿದ್ದೆಮಾಡುವ ಅಭ್ಯಾಸ ಮಾಡಬಾರದಾಗಿತ್ತು. ಮಂಚ ಸುಪ್ಪತ್ತಿಗೆ ಮಾಡಬಾರದಾಗಿತ್ತು. ಮಾಡಿಬಿಟ್ಟ ಮೇಲೆ ಇನ್ನೇನು ಮಾಡೋಣ?

ಎಚ್ಚರಿಕೆಯಿಂದ ಇರೋಣ. ಯಕ್ಷಿಣಿಯ ಬಾಧೆ ತಪ್ಪಿಸಿಕೊಳ್ಳೋಣ. ಹೇಗೆ? ಹೇಗೆಂದರೆ ಹೀಗೆಂದು ಮೊದಲೇ ಹೇಳಿಬಿಟ್ಟಿದ್ದೇನಲ್ಲವೆ? ಓದಿನೋಡಿಕೊ.

ಸಕ್ಕರೆ ಗೊಂಬೆ

ಕುಳ್ಳಣ್ಣ–ಎಂದರೆ ಆಚೆ ಕೇರಿಯ ಹುಡುಗ. ಅವನಿಗೆ ಒಂದು ದಿನ ಒಂದು ಪಾವಲಿ ಸಿಕ್ಕಿತು. ಇಡಿಯ ಪಾವಲಿಯನ್ನೇ ಅವನು ಖರ್ಚುಮಾಡಲು ಸಿದ್ಧನಾಗಿ ಸಂತೆಗೆ ಹೋದನು.

ಸಂತೆಯಲ್ಲಿ ಒಂದು ಅಂಗಡಿ. ಅದರಲ್ಲಿ ಒಂದು ಸಕ್ಕರೆ ಗೊಂಬೆಯಿತ್ತು. ಅದು ಮುದ್ದಾಗಿತ್ತು. ಉಂಗುಷ್ಟದಿಂದ ನೆತ್ತಿಯವರೆಗೆ ಅದು ಕೇವಲ ಕೆಂಪು ಸಕ್ಕರೆಯಿಂದ ಮಾಡಿತ್ತು. ಅದಕ್ಕೆ ಕೊಂಚ ಬಿಳುಪೂ ಸೇರಿತ್ತು. ಗುಲಾಬಿಗಿಂತ ಚೆಂದ ಆ ಗೊಂಬೆ.

ಕುಳ್ಳಪ್ಪ ಆ ಗೊಂಬೆ ನೋಡಿ ಆನಂದಪಟ್ಟ. ಅದನ್ನು ತೆಗೆದುಕೊಂಡು ಹೋಗಿ ಮನೆಯಲ್ಲಿ ಬಾಗಿಲಿದಿರು ಗೂಡಲ್ಲಿಟ್ಟರೆ ಚೆನ್ನಾಗಿರುತ್ತಲ್ಲವೆ? ಎಂದು ಭಾವಿಸಿಕೊಳ್ಳುತ್ತಾ ನಿಂತುಬಿಟ್ಟ.

ಅಂಗಡಿಯುವನು ಈ ಹುಡುಗನನ್ನ ನೋಡಿಯೇ ನೋಡಿದ. ತುಂಬಾ ಹೊತ್ತು ನಿಂತಮೇಲೆ ಅಂಗಡಿಯುವನೇ ಮಾತಾಡಿಸಿದ– "ಏನಪ್ಪ ಮಗು! ಏನು ಬೇಕು ಹೇಳು! ಪಾಪ, ಹುಡುಗ! ಯಾವುದರ ಮೇಲೆ ಆಸೆಯುಪ್ಪ ನಿನಗೆ?"

ಕುಳ್ಳಪ್ಪ ಮಾತಾಡದೆ ನಿಂತು—ಸಕ್ಕರೆ ಗೊಂಬೆಯ ಕಡೆಗೆ ಕೈನೀಡಿ ತೋರಿಸಿದ. ತನ್ನ ಕೈಲಿದ್ದ ಒಂದು ಪಾವಲಿಯನ್ನು ತೋರಿಸಿದ. ಆಗ ಅಂಗಡಿಯುವನು ಹೇಳಿದ:

"ಮಗು ಈ ಸಕ್ಕರೆ ಗೊಂಬೆಗೆ ಆರಾಣೆಯುಪ್ಪ! ನಾಲ್ಕಾಣೆಗೆ ಹೇಗೆ ಕೊಡಲಪ್ಪ ಮಗು? ಆದರೂ ನೋಡು ನಿನ್ನ ಆಸೆ ಕಂಡರೆ ನನಗೇಕೋ ಮನಸ್ಸೇ ಕರಗಿ ಹೋಗುತ್ತ ಇದೆ. ಆಗಲಿ ಕೊಡುತ್ತೇನಪ್ಪ."

ಎಂದು ಹೇಳಿ ಆ ಸಕ್ಕರೆ ಗೊಂಬೆಯನ್ನು ಹಳದಿಯ ಕಾಗದದಲ್ಲಿ ಸುತ್ತಿ ಜರತಾರಿ ದಾರ ಕಟ್ಟಿಕೊಟ್ಟು ಕಳಿಸಿದನು.

ಸಕ್ಕರೆ ಗೊಂಬೆಗೆ ಆ ಪೊಟ್ಟಣದಲ್ಲಿ ಉಸಿರು ಸಿಕ್ಕಿಕೊಂಡಂತಾಯಿತು. ಬಂಗಾರದ ದಾರವೇನೋ ನೋಡುವವರಿಗೆ ಲಕ್ಷಣ, ಸರಿ. ಆದರೆ ಸಕ್ಕರೆ ಗೊಂಬೆಗೆ ದಾರದ ಕಟ್ಟು ಬಲು ಬಿಗಿಯಾಗಿತ್ತು. ಯಾರಾದರೂ ಈ ಕಟ್ಟು ಸಡಲಿಸಬಾರದೆ? ಯಾರಾದರೂ ಬಿಡಿಸಿದರೆ ಸೆರೆಮನೆಯಿಂದ ಯಾರ ಮನೆಯ ಬಾಗಿಲೆದುರು ಗೂಡಿನಲ್ಲಾದರೂ ನಿಂತಾದರೂ ಹೇಳಿದಷ್ಟು ದಿನ ನಿಲ್ಲುತ್ತೇನೆ. ಅಂಗಡಿಯಲ್ಲೋ–ಹಾಗಾದರೆ ಸವೆದು ಹೋಗುತ್ತಿ, ಹೀಗಾದರೆ ಮಾಸಿಹೋಗುತ್ತಿ, ಕೆಳಗಿಳಿದರೆ ಮುಕ್ಕಾಗುತ್ತಿ–ಕಡೆಗೆ ಯಾರೂ

ಮೂಸಿಕೂಡ ನೋಡುವುದಿಲ್ಲ–ಎನ್ನುತ್ತಿದ್ದ ಅಂಗಡಿ ಆಳು. "ಈಗ ಸಧ್ಯ ಬಿಡುಗಡೆಯಾಗಿ ಬಿಟ್ಟಿತಲ್ಲ. ಇನ್ನು ಮುಂದೆ ಏನಾದರೂ ಆಗಲಿ" ಎಂದು ಆನಂದಪಟ್ಟಿತು ಆ ಗೊಂಬೆ?

ಈ ವೇಳೆಗೆ ಆ ಮನೆ ಹತ್ತಿರ ಬಂತು. ಆಗ ಆ ಹುಡುಗ ಕಿರಿಚಿಕೊಂಡ "ಅಮ್ಮಾ ಸಕ್ಕರೆ ಹುಡುಗಿ ತಂದಿದ್ದೇನಮ್ಮ!" ಹೀಗೆ ಚೀರಿಕೊಂಡು ಮನೆಯೊಳಗೆ ಹೋಗಲು, ಮೊದಲು ಹಳದಿ ಕಾಗದ ಹರಿದು ಆ ಗೊಂಬೆಯ ಗಲ್ಲವನ್ನು ಕೊಂಚ ನೆಕ್ಕಿ ನೋಡಿದ. ಮತ್ತೆ ಕೂಗಿದ: "ಅಮ್ಮ ಈ ಗೊಂಬೆ ಪೂರ್ತ ಸಕ್ಕರೆಕಣಮ್ಮ! ಗಲ್ಲ ಕೂಡ ಸೀಯಾಗಿದೆ."

ಆಗ ಒಳಗಿಂದ ಕೇಳಿ ಬಂತು ಈ ಮಾತು: ಕುಳ್ಳಪ್ಪ, ಜಾಣ ಮಣಿ, ಬಾಗಿಲು ಚಿಲಕ ತೆಗೆದುಕೊಂಡು ಒಳಗೆ ಬಾಪ್ಪ. ನಾಲ್ಕಾಣೆಗೂ ಗೊಂಬೆ ತಂದೆಯಾ? ಸಕ್ಕರೆಗೊಂಬೆಯೇನಪ್ಪ ಒಳಗೆ ಬಾಪ್ಪ."

ಚಿಲಕ ತೆಗೆಯಬೇಕಲ್ಲ ಎಂದು ಸಕ್ಕರೆ ಗೊಂಬೆಯನ್ನು ಹಾಗೇ ಮೆಟ್ಟಿಲು ಕಲ್ಲಮೇಲಿಟ್ಟು ಅತ್ತಕಡೆ ತಿರುಗುತ್ತಾ ಹೀಗೆಂದನು:

"ಸಕ್ಕರೆ ಗೊಂಬೆ, ಕೇಳಿಲ್ಲಿ! ಈ ಬಾಗಿಲು ತೆಗೆದು, ನಿನ್ನ ಒಳಗೆ ಒಯ್ದು, ಅಮ್ಮಗೆ ತೋರಿಸಿ, ಆಮೇಲೆ ಒಂದೇ ಚೂರು ಮುರಿದು ತಿಂದು ಬಾಗಿಲೆದುರು ಗೂಡಲ್ಲೇ ಇಟ್ಟಿರುತ್ತೇನೆ. ನಾಳೆಯೋ ನಾಡಿದ್ದೋ ಚೂರುಚೂರಾಗಿ ತಿಂದುಬಿಡುತ್ತೇನೆ. ಆಗ ಬಹುದೋ! ಹೇಳಿದ ಹಾಗೆ ಕೇಳು!"

ಸಕ್ಕರೆಗೊಂಬೆ ಏನೂ ಮಾತಾಡಲಿಲ್ಲ. ಗಾಬರಿಯಾಗಿದ್ದರೂ ಸಹಿಸಿಕೊಂಡು ನಿಂತಿತ್ತು. ಕುಳ್ಳಪ್ಪ ನೆಗೆದು ನೆಗೆದು ಚಿಲಕ ತೆಗೆಯುವಾಗ ಸಕ್ಕರೆ ಗೊಂಬೆಗೆ ಏನಾಯಿತೋ ಕಾಣೆ.

ಅದಂತೂ ಕೊಂಚ ಉರುಡಿತು. ತೋಟದ ರಸ್ತೆ ಹಿಡಿಯಿತು.

ಆ ರಸ್ತೆ ಮುಗಿದು ಈ ರಸ್ತೆ ಹಿಡಿಯುವುದರಲ್ಲೇ ಅದಕ್ಕೆ ಸುತ್ತಿದ್ದ ಹಳದಿ ಕಾಗದವೂ ಜರತಾರಿದಾರವೂ ಬಿಚ್ಚಿಕೊಂಡು ಎತ್ತಲೊ ಹೋದವು. ಈಗಲಂತೂ ಆ ಸಕ್ಕರೆ ಹೆಣ್ಣು ತುಂಬಾ ಲಕ್ಷಣವಾಗಿ ಕಾಣುತ್ತಿತ್ತು. ಅದರ ಮೈ ಅಂದವನ್ನು ನೋಡು ವುದಕ್ಕೆ ಸೂರ್ಯನಿಗೆ ಕೂಡ ಎರಡು ಕಣ್ಣೇ ಸಾಲದೋ ಎನ್ನುವ ಹಾಗಿತ್ತು.

"ನನ್ನ ಯಾರೂ ತಿನ್ನಬೇಡಿ, ಕಚ್ಚಬೇಡಿ, ಮುರಿಯಬೇಡಿ, ಮುಟ್ಟಬೇಡಿ"—ಎಂದುಕೊಂಡು ಅದು ಓಡಿಹೋಗುತ್ತಿದ್ದಾಗ್ಗೆ ಒಂದು ನವಿಲು ತನ್ನ ಸಾವಿರ ಕಣ್ಣಿನ ಬಾಲಬಿಚ್ಚಿಗೊಂಡು ಬಂತು: "ಬಾರೆ ಸಕ್ಕರೆ ಗೊಂಬೆ ಒಂದು ಚೂರು ರುಚಿ ನೋಡೋಣ ಬಾರೆ!" ಎನ್ನುತ್ತಾ ಹಿಂದಿನಿಂದ ಅಟ್ಟಸಿಕೊಂಡು ಬಂತು.

ಸಕ್ಕರೆ ಹುಡುಗಿ—"ಆಗುಲ್ಲಾ-ಬೇಕಿಲ್ಲಾ—ಆಗುಲ್ಲಾ ಹಾಗೆಲ್ಲಾ"—ಎನ್ನುತ ಓಡಿ ಓಡಿ ಹೋದಳು.

ದಾರಿಯಲ್ಲಿ ಒಂದು ಹುಂಜ ಈ ಸಿಹಿ ಗೊಂಬೆಯನ್ನು ನೋಡಿ ಎತ್ತರದಿಂದ ಹಾರಿಬಂದು-"ಬಾ ಸಕ್ಕರೆ ಗೊಂಬೆ. ಕುಕ್ಕಿ ನೋಡುತ್ತೇನೆ ಒಂದಿಷ್ಟು, ನನ್ನ ಬಣ್ಣಕ್ಕಿಂತ ನಿನ್ನ ಬಣ್ಣ ಚೆನ್ನಾಗಿದೆ ಯಲ್ಲೇ!" ಎಂದು ಅಚ್ಚರಿ ಪಟ್ಟಿತು.

ಸಕ್ಕರೆ ಹುಡುಗಿ ಓಡಿತು ಓಡಿತು, ಇಳಿಜಾರಿದ್ದಲ್ಲಿ ಉರು ಡಿತು ಉರುಡಿತು ಉರುಡುರುಡಿ ಹೋಯಿತು. ಅಲ್ಲೊಂದು ಕಡೆ ಪೋಲಿಸಿನವರು ನಿಂತಿದ್ದರು. ಅವರು ಈ ಗೊಂಬೆಯನ್ನು ಕಂಡವರೆ ಕಂಡು ಮುಂದೆ ಮುಂದೆ ಬಾಗಿದರು ಮತ್ತು ಎಲ್ಲ ರೊಟ್ಟಾಗಿ ಕೈ ಚಾಚಿದರು:

"ನಂಗೆ, ನಂಗೆ, ನಂದು, ನಂದು, ಈ ಗೊಂಬೆ ನಂದು!"

ಹೀಗೆಂದು ಪರದಾಡುತ್ತಿದ್ದಾಗ ಎಲ್ಲರ ಕೈಯಿಂದಲೂ ತಪ್ಪಿಸಿ ಕೊಂಡು ಮುಂದೆ ಹೋಯಿತು ಆ ಸಕ್ಕರೆ ಹುಡುಗಿ. ಅಲ್ಲೊಬ್ಬ ಲಾವಣಿಕಾರ. ಹಾಡು ಹೇಳುತ್ತಿದ್ದ ಅವನೆಂದ:

" ಬಾರೇ ಗೊಂಬೀ, ಏ ರಂಬೀ !
ನನ ಗೊಂಬೀ ಸವಿಗೊಂಬೀ
ದೇಶವ ತಿರುಗುವ ಸಂಗಡಲೇ
ಲಾವಣಿ ಕಟ್ಟುವೆ ನಿನ ಮೇಲೇ."

ಮತ್ತು ಈ ಸಕ್ಕರೆ ಗೊಂಬೆ ಬರುವ ಹಾದಿಯಲ್ಲೇ ಕಾದಿದ್ದು ತಾನು ಬಾರಿಸುವ ಹುಣ್ಣಿಮೆ ಚಂದ್ರನಂಥಾ ತಮಟೆಯನ್ನು ಹಿಡಿದು ಹೊಡೆದುಬಿಟ್ಟ. ಆಗ ಆ ಗೊಂಬೆ ನಿರ್ವಾಹವಿಲ್ಲದೆ ಅದ ರೊಳಗೆ ಬಿತ್ತು. ಅವನು ಅದನ್ನು ಅದರಲ್ಲಿರಿಸಿ ಕುಣಿಸಲಾರಂಭಿಸಿದ. ಅದರ ಬಣ್ಣವನ್ನು ನೋಡಿ ಮೋಹಿಸಿಬಿಟ್ಟ.

ಇಷ್ಟರೊಳಗೆ ಹಿಂದಿನಿಂದ ಬಂದಿತೊಂದು ಮೆರವಣಿಗೆ—
ಕುಳ್ಳಪ್ಪ ಬಂದ ಕುಣಿಕುಣಿದು
ಆತನ ತಾಯಿ ದಣಿದಣಿದು
ನವಿಲಪ್ಪ ಬಂದ ಕಣ್ ಕಣ್ ಬಿಟ್ಟು
ಹುಂಜಪ್ಪ ಬಂದ ಮೊರೆಮೊರೆದಿಟ್ಟು
ಪೋಲೀಸರೆಲ್ಲ ಸೀಟೀಹಾಕಿ
ಲಾವಣಿಕಾರಗೆ ಕೂಗ್ಹಾಕಿ !

ಈ ಗದ್ದಲ ನೋಡಿ ಗಾಬರಿಯಾಗಿ ಸಕ್ಕರೆ ಗೊಂಬೆ ಅಲ್ಲಿಂದ ನೆಗೆದು ಹಾರಿ ಓಡಿತು ಇನ್ನೂ ಮುಂದೆ. ದಾರಿಯಲ್ಲಿ:

ಟಾಮೀನಾಯಿ—" ಬಾ ಗೊಂಬೇ ಕಚ್ಚಿನೋಡುತೇನೆ !"
ಬಿಲ್ಲೀಬೆಕ್ಕು—" ಕೆಂಪಿನ ಗೊಂಬೇ ನೆಕ್ಕಿ ನೋಡುತೇನೆ ! "
ಕಪ್ಪನೆ ಕಾಗೆ—"ಕುಕ್ಕಿ ನೋಡುವೆ ನಾನು-ಬಾರೇ ಹಿಹಿಹಿ

ಹುಡುಗೀ ಬಾ ಹುಡುಗೀ!"

ಇನ್ನೊಂದು ಪುಟ್ಟಾಣಿ ಹುಡುಗಿ—"ಏ ಸಕ್ಕರೆ ಗೊಂಬೆ ಎಲ್ಲಿ ಹೋಗುವೆ ಬಾರೆ, ನಾನು ಮಕಮಲ್ಲು ಹಾಸಿಗೆಯಲ್ಲಿ, ಗುಲಾಬಿಮಂಚದಲ್ಲಿ ಮಲಗಿಸಿ ತೂಗುತೇನೇ, ಬಾ, ಪುಟಾಣೀ."

ಕಡೆಗೆ ಹುಡುಗಿ ಸಿಕ್ಕಿಬಿಟ್ಟಳು. ಅವಳ ಬಳಿ ಹೋಗಿರೋಣವೆಂದರೆ ಹಿಂದಿನಿಂದ ಬಂದ ಗದ್ದಲದ ಗುಂಪನ್ನು ಕಂಡು ಬೆದರಿಬಿಟ್ಟಳು ಆ ಸಕ್ಕರೆ ಹುಡುಗಿ, ಆ ಕೆಂಪಿನ ಸಕ್ಕರೆ ಹುಡುಗಿ.

ಈ ವೇಳೆಗೆ ಇದೇನು ಗದ್ದಲವೆಂದು ಊರಿನ ದೊಡ್ಡವರೆಲ್ಲ ಓಡೋಡಿ ಬರುತ್ತ ಇದ್ದರು.

ಆದರೆ ಈ ನಡುವೆ ಇನ್ನೊಂದು ವಿಚಾರ ಮರೆತೇ ಹೋಗಿತ್ತು,—ಆ ದಿನ ಮಳೆ ಬಂದಿತ್ತು. ಭರಭರಾಟೆ ಮಳೆ. ಆ ಮಳೆನೀರು ಎಲ್ಲಾ ಕಡೆ ಚರಂಡಿಹಿಡಿದು ಹರಿದು ಹೋಗಿದ್ದರೂ ಒಂದು ಕಡೆ ಮಾತ್ರ ಹುಡುಗರು ಆಡುವ ಮೈದಾನದಲ್ಲಿ ನಿಂತುಬಿಟ್ಟಿತ್ತು. ಹರಿದು ಹೋಗಿರಲಿಲ್ಲ; ಆರಿಯೂ ಹೋಗಿರಲಿಲ್ಲ. ಮಳೆ ನೀರು ನಿಂತಿತ್ತು ಕನ್ನಡಿಯ ಹಾಗೆ.

ಈ ಸಕ್ಕರೆ ಗೊಂಬೆ ಈ ಹುಡುಗಿಯ ಕೈಗೆ ಬಂತು. ನಿಂತು ನೋಡಿತು. ಆ ನೀರುಕನ್ನಡಿಯಲ್ಲಿ ಇನ್ನೊಂದು ಸಕ್ಕರೆ ಗೊಂಬೆ ಕಂಡಿತು. ಅದು ಇದನ್ನು ಕರೆಯಿತು. ಆಗ ಆ ಸಕ್ಕರೆ ಗೊಂಬೆ ಇವರಾರ ಕೈಗೂ ಸಿಗಬಾರದು. ಇವರೆಲ್ಲ ಮುತ್ತಿಗೊಂಡು–"ಮುರೀತೇವೆ, ನೆಕ್ಕುತೇವೆ, ಕಚ್ಚುತೇವೆ, ರುಚೀನೋಡುತೇವೆ"—ಎಂತೆಲ್ಲ ಕೂಗುತಾ ಇದ್ದಾರೆ, ನಾನಿರಲಾರೆನಪ್ಪಾ ಎಂದು ಚಿಗಿದು ಹಾರಿ:

ಛಲ್ ಛಲ್ ಛಲಾರೆ ಛಲ್!
ನೀರಿನ ಗೊಂಬೆಯೆ ಭಲಾರೆ ಭಲ್!
ಕರೆದುಕೊ ನನ್ನನು ಗೆಳತಿಯೆ ನಿಲ್
ಸಕ್ಕರೆ ಗೊಂಬೇ ನಾ ಬಂದೇ...

ಎನ್ನುತ್ತ ನೀರಿನಲ್ಲಿ ಹಾರಿಕೊಂಡು ಮಾಯವಾಯಿತು. ಮುಳುಗಿ ಹೋಯಿತು.

ಆಗ ಹಿಂದೆ ಬಂದವರು ಮುಂದೆ ಬಂದವರು, ನೋಡ ಬಂದವರೆಲ್ಲ ಸುತ್ತ ಘೇರಾಯಿಸಿ ನಿಂತರು:

—“ ಸಿಕ್ಕಿತೋ, ಸಿಕ್ಕಿತು ಸಕ್ಕರೆಗೊಂಬೇ, ದಕ್ಕುವುದದು ನಮನಮಗೇ, ನೀರನು ಹೀರಿದರೇ—” ಎಂದು ಕೂಗಿದರು.

ಒಳಗಿನಿಂದ ಸಕ್ಕರೆಗೊಂಬೆ ಕೂಗಿತು—

“ ದಕ್ಕೆನು ನಾನು, ಯಾರಿಗು ಇನ್ನೂ....”

ಆದರೂ ಅವರೆಲ್ಲ ಸೇರಿ ಆ ನೀರೆಲ್ಲ ಹೀರುತ್ತಾ ಬಂದರು. ಆ ನೀರೆಲ್ಲ ಮಾಯವಾಯಿತು. ಹಳ್ಳ ಬರಿದಾಯಿತು. ಎಲ್ಲರ ಹೊಟ್ಟೆಗೂ ಸೇರುತ್ತಾ ಬಂದಿತು.

ಈ ಹುಡುಗ ಕುಳ್ಳಪ್ಪನೂ ಮತ್ತು ಆ ಪುಟಾಣಿ ಹುಡುಗಿಯೂ ನೋಡುತ್ತಾ ಗಾಬರಿಪಟ್ಟು ನಿಂತಿದ್ದರು—“ ಪಾವಲಿ ಕೊಟ್ಟದ್ದೇನೆ ಅದು ನನ್ನ ಸಕ್ಕರೆ ಗೊಂಬೆ-” ಎಂತ ಆ ಹುಡುಗನೆನ್ನುತ್ತಿದ್ದನು. ನನ್ನ ಮೆಚ್ಚಿ ನನ್ನ ಕೈಗೆ ಬಂದಿತ್ತು, ಅದು ನನ್ನ ಸಕ್ಕರೆ ಗೆಳತಿ—ಎನ್ನುತ್ತಿದ್ದಳು ಆ ಹುಡುಗಿ, ಪುಟ್ಟಾಣಿ ಹುಡುಗಿ.

ಇತ್ತ ಇವರೆಲ್ಲ ಹಳ್ಳದ ನೀರೆಲ್ಲ ಹೀ ೯ ೯ ೯ ೯ ೯ ರಿ ಬಿಟ್ಟಿದ್ದರು, ಎಲ್ಲರು ಹೊಟ್ಟೆಯೂ ಭಾರವಾಯಿತು, ಆಗ:

ನವಿಲು—“ಹೋಯಿತೆ ಗೊಂಬೆ—!”

ಪೋಲೀಸರು—“ ಕಳ್ಳ ಹುಡುಗಿ ಗೊಂಬೆ!”

ಹುಂಜ—“ ಕಾಲಿಗೆ ಸಿಕ್ಕಿದ್ದು ಕೈಗೆ ಸಿಗಲಿಲ್ಲವೆ!”

ಲಾವಣಿಕಾರ—ಗೊಂಬೆ ಹೋಯಿತು, ಲಾವಣಿ ಉಳಿಯಿತು. ಇನ್ನೇನು ಮಾಡೋಣ. ಮುಂದೇನು ಮಾಡೋಣ.”

ಉಳಿದವರೆಲ್ಲ ಹೊಟ್ಟೆ ಮುಟ್ಟಿಮುಟ್ಟಿ ನೋಡಿಕೊಳ್ಳುತ್ತ-

" ಎಲ್ಲಿ ಹೋಗಿದ್ದೀತು ಆ ಸಕ್ಕರೆ ಗೊಂಬೆ! "—ಎಂದು ಅಚ್ಚರಿ ಪಡುತ್ತ ಇನ್ನೂ ನಿಂತಿದ್ದಾರೆ.

ಕುಳ್ಳಪ್ಪನಿಗಂತೂ, ದುಃಖ ಕಣ್ಣಿಗೆ ಬಂದಿದೆ! ಚೆನ್ನಾರಿ ಚೆನ್ನಿ ಚೀನಿ ಸಕ್ಕರೆ ಗೊಂಬೆ ಎಲ್ಲಿ ಹೋಗಿದ್ದೀತು? ನಿಮಗೇನಾದರೂ ಗೊತ್ತೆ ?

ಕಾಗುಣಿತ

ಅದು ಪಾಠಶಾಲೆ. ಅಲ್ಲಿ ಆ ದಿನ ಬಲು ಸೆಖೆ. ನಾಗರಾಜಗೆ ತೂಕಡಿಕೆ, ಪಕ್ಕದಲ್ಲಿ ಸುಬ್ಬು ಕೂತಿದ್ದ. ಸುಬ್ಬು ಹೇಳಿದ— " ರಾಜ, ಬೆಲ್ಲ ತೂಗಬೇಡವೋ, ಮೇಸ್ಟರೋ, ಮೇಸ್ಟರು! ಕಾಗುಣಿತ ಕೇಳುತಾರೋ ಮೇಸ್ಟರು." ಆಗ ನಾಗರಾಜ ಗೊಣಗಿದ " ಕಾಗುಣಿತ, ಹಾಳು ಕಾಗುಣಿತ! ಏ ಸುಬ್ಬಾ! ನೀನು ನನ್ನ ಮುಂದೆ ಕೂತುಗೋ, ನಾನು ತಲೆ ಬಗ್ಗಿಸಿಕೊಂಡು ಕೊಂಚ ನಿದ್ದೆ ಮಾಡುತೇನೋ! "

ಮೇಸ್ಟರು ಕಾಗುಣಿತ ಶುರುಮಾಡಿದರು. ಸುಬ್ಬು ಹಿಂದೆ ನಾಗರಾಜ ಕೂತಿದ್ದ—ಇಲ್ಲ, ಇಲ್ಲ, ಕೂತುಕೊಂಡು ತೂಕಡಿಸುತ್ತ ಇದ್ದ. ಅವರು (ಎಂದರೆ ಮೇಸ್ಟರು) ಎಲ್ಲಾರನ್ನೂ ಕೇಳಿಕೊಂಡು ಬಂದರು.—" ಎಲಾ ನೀನು, ಹೇಳೋ ನೀನೂ, ಕರೀ ಟೋಪಿ, ಖಾದಿ ಟೋಪೀ, ಕೂದಲುಃಟೋಪಿ, ಗುಂಗುರುತಲೆ, ಎಲಾ ನೀನೋ ನಾಗ "—ಕಡೆಗೆ ಅವರು ಒಂದು ಪದ್ಯ ಹೇಳಿದರು— ನಾಗರಾಜನ್ನ ಹಾಸ್ಯಮಾಡುವುದಕ್ಕೆ.

" ಕಣ್ ಮರಳಿಸಿ
ಮೈ ಹೊರಳಿಸಿ
ತಲೆಯಾಡಿಸಿ
ಬೆಲ್ಲ ತೂಗುತಾನೆ
ಒಬ್ಬ ತೂಗುತಾನೆ—
ಅಲ್ಲೆ ತೂಗುತಾನೆ—"

ಏ ರಾಜ! ಎಷ್ಟೋ ಬೆಲ್ಲ, ಹೇಗೋ ಏೀಸೆ, ಹೇಗೋ? ಏ ರಾಜಾ!"

ನಾಗರಾಜ ಮೈಕೊಡವಿಕೊಂಡು ಎದ್ದು ನಿಂತು ಹೇಳಿದ— "ಇಲ್ಲ ಸರ್! ನಿದ್ದೆಗಿದ್ದೆ ಇಲ್ಲ ಸರ್! ಕಾಗುಣಿತ ಕೇಳಿ ಸರ್.

ಆಗ ಅವರು, "ಹೇಳೋ ಹಾಗಾದರೆ, ಬ್ರಹ್ಮಾಂಡಕ್ಕೆ ಕಾಗುಣಿತ".

ನಾಗರಾಜ ಹೇಳಿದ—"ಸರ್, ಅದು ಕಷ್ಟಸರ್, ಕೊರ ವಂಜೀ ಕಾಗುಣಿತ ಕಲಿತಿದ್ದೇನೆ ಸರ್! ಹೇಳುತ್ತೇನೆ!

ಮಾಸ್ಟರು ಹೇಳಿದರು—"ಊಹೂ, ಬ್ರಹ್ಮಾಂಡವೇ ಆಗ ಬೇಕು, ಬ್ರಹ್ಮಾಂಡ! ಹೇಳು ಕಾಗುಣಿತ!"

ನಾಗರಾಜ "ಕ ಕ್ಕೆ ಒತ್ರ ಕೋ, ವಕ್ಕೆ ಅರ್ಕಾಸತ್ತು, ಮತ್ತೆ ಒಂದು ಅಂ....ಮತ್ತೊಂದು ಜಿಕ್ಕೆ ಗುಡಿಸಿನ ದೀರ್ಘ ಜೀ-ಕೊರ್ವಂಜೀ."

ಅವರು—"ಕೂಡದು ಕೊರ್ವಂಜೀ, ಏ ಕುಂಭಾಂಡಾ, ಕಾಗುಣಿತ ಹೇಳು ಬ್ರಹ್ಮಾಂಡಕ್ಕೆ."

ನಾಗರಾಜ ತಲೆ ಎತ್ತುವ ಮೊದಲೆ ಹುಡುಗರೆಲ್ಲ "ಕುಂಭಾಂಡ! ನಾಗರಾಜ ಕುಂಭಾಂಡ! ಕೂಂಂಂಭಾಂಂಂಂಡಾ!" ಎಂತ ಕೂಗಿ ನಗಲಾರಂಭಿಸಿದ್ದರು. ಬಹಳ ನಾಚಿಕೆಕೊಂಡು ನಾಗರಾಜ ಹೊರಕ್ಕೆ ಬಂದುಬಿಟ್ಟ. ಮಾಸ್ಟರೂ ನಗುತ್ತ ಇದ್ದರು.

ಆ ನಗುವಿನ ಗದ್ದಲದಲ್ಲಿ ಸ್ವಲ್ಪ ಹೊತ್ತು ನಾಗರಾಜ ಹೊರಗೆ ಹೋದದ್ದನ್ನು ಯಾರೂ ನೋಡಲಿಲ್ಲ.

ಢಣಾರ್, ಢಣಾರ್ ! ಪಾಠಶಾಲೆಯ ಗಂಟೆ ಹೊಡೆಯಿತು. ಸ್ವಲ್ಪ ವಿರಾಮ ಸಿಕ್ಕಿತು. ಹುಡುಗರೆಲ್ಲ ಬೇರೆ ಪಾಠಕ್ಕೆ ಬೇರೆ ಕ್ಲಾಸಿಗೆ ಹೊರಟರು.

ನಾಗರಾಜ ಹೊರಗೆ ಹೋದ. ಪಾಠಶಾಲೆಯ ಗೋಡೆಯ ಬಳಿನಿಂತು ಕಾಗುಣಿತ ಶುರುಮಾಡಿದ! ಮೊದಲು ಕುಂಭಾಂಡ ! ಆ ಮಾತಿನ ಕಾಗುಣಿತದ ಅರ್ಧಕ್ಕೆ ಬಂದಾಗ ಅವನಿಗೆ ನೆನಪಿಗೆ ಬಂತು, ಅವನ ಕ್ಲಾಸಿನ ಹುಡುಗರು ಅವನನ್ನು ಹಾಸ್ಯ ಮಾಡುವುದಕ್ಕೆ ಹೇಳಿದ್ದು—ಕುಂಭಾಂಡವೆಂಬ ಆ ಹೆಸರು ! ಮೇಸ್ಟರು ಕಾಗುಣಿತಕ್ಕೆ ಕೇಳಿದ್ದು ಆ ಮಾತಲ್ಲ. ಅದಾವುದು ಹಾಗಾದರೆ? ಆ ಮೇಸ್ಟರು ಕೇಳಿದ್ದು ? ಎಂದುಕೊಂಡು ನೆನಪು ಮಾಡಿಕೊಳ್ಳಲು ಪ್ರಯತ್ನಿಸಿದ. "ಮಾಂಡ–ಮಾಂಡ !–ಎಂಥ ಮಾಂಡ? ಊರ್ ಮಾಂಡ, ಅರ್ ಮಾಂಡ, ಇರ್ ಮಾಂಡ-ನೇ ?—ಕರ್ ಮಾಂಡ, ಚರ್ಮಾಂಡ, ಪರ್ ಮಾಂಡ,....ಬರ್ ಮಾಂಡ" ಕಡೆಯ ಪದ 'ಬರ್ ಮಾಂಡ' ಬಂದಾಗ ಅದೇ ಸರಿಯಿರಬಹುದೆಂದು ಮನಸ್ಸಿನಲ್ಲೇ ಎಡವಿ ಅಲ್ಲೇ ನಿಂತ.

ಅಷ್ಟು ಹೊತ್ತಿಗೆ ಹೆಜ್ಜೆಯ ಮೇಲೆ ಹೆಜ್ಜೆ ಹಾಕುತ್ತಾ ಪಿಚಕಾರಿಕಾಯಿ ಮರದ ಹತ್ತಿರ ಬಂದ. ಒಂದೆರಡು ಗೊಂಚಲು ಕಾಯಿ ಕಿತ್ತುಕೊಂಡು ಒಂದೊಂದು ಕಾಯನ್ನೇ ತುದಿ ಚಿವುಟಿ, ಚರ್ರನೆ ಹಾರಿಸುತ್ತ ಒಂದ.–ಬರ್ ಮಾಂಡದ ಕಾಗುಣಿತ–ಅದನ್ನೇ ಮೆಲುಕುಹಾಕುತ್ತಾ ಹಾಗೇ ನಿಂತ. ಎರಡನೇ ಭಾಗ ಸರಿಯಾಯ್ತು. ಆದರೆ ಮೊದಲನೇ ಭಾಗವಾದ "ಬರ್ ಮಾ"ಸರಿಯೆಂದು ತೋರಲಿಲ್ಲ. ಹಾಗೇ ಸ್ವಲ್ಪ ಮುಂದೆ ಹೋದಾಗ ಅವನಿಗೆ ಪೇಟೆದಾರಿ ಸಿಕ್ಕಿತು. ನಾಗರಾಜ ಅಲ್ಲಿ ನಿಂತುಬಿಟ್ಟ.

ಅದೇ ದಾರಿಯಲ್ಲಿ ಮಾರಾಟದ ಹುಡುಗರು, ಹೆಂಗಸರು. ಗಂಡಸರು—ಒಂದೊಂದೇ ಹೆಸರು ಕೂಗುತ್ತಾ, ಹೋಗುತ್ತಿದ್ದರು. ಅವರು ಹಾಗೇಕೆ ಕೂಗುತ್ತಾರೆ? ಅವರೂ ಕಾಗುಣಿತ ಕಲಿಯುವವರೇ ಇರಬೇಕು—ಎಂದುಕೊಂಡ. ಹಿಂದಿನ ರಾತ್ರಿ ಖರ್ಜೂರಗದ ತಾಳೆಕಾಯಿ ತಿರುಳು ಹೊತ್ತುಕೊಂಡು ಒಬ್ಬ ಬಂದಿದ್ದ—"ನುಂಗಿ ನುಂಗೀ ನೂಂಂಗೀೕ ತಾ ಆಟ ನುಂಗೀ. ಸೀತಾಳಿ, ಪಾತಾಳಿ ನೂಂಂಗೀೕ!" ಎಂದು ಕೂಗುತ್ತಿದ್ದ. ಈ ಬೆಳಗ್ಗೆ ಬಿಸಿ ದೋಸೆ ಹೊತ್ತುಕೊಂಡು ಒಬ್ಬ ಹುಡುಗ "ದೋಸೆ, ದೋಸೆ, ದೋೕಸೇ, ಬಿಸೀದೋಸೇ" ಎಂದು ಅರಚುತ್ತಿದ್ದ. ಗಾಣಗಿತ್ತಿಯೊಬ್ಬಳು ಎಣ್ಣೆ ಹೊತ್ತುಕೊಂಡು ಬಂದಳು—"ಎಣ್ಯೋೕ ಎಣ್ಣೆ, ಎಣ್ಯೋೕ ಎಣ್ಣೆ, ಮಕ್ಕಳ ಹೊಟ್ಟೇಗೆ ದೊಡ್ಡೋರ ಕಣ್ಣೀಗೆ ಎಣ್ಯೋೕ ಎಣ್ಣೇ. ಪರಂಗಿಹಲಸನ್ನ ಹಲ್ಲೆಹಲ್ಲೆ ಗಾಲಿಗಾಲಿ ಮಾಡಿ ಮಾರುವಾತ ಕೂಗುತಬಂದ—"ಅನಾನೀಸ್ ಅನಾ ಆನೀ ಈಸ್".

ನಾಗರಾಜ ಅವರೆಲ್ಲ ಹೇಳಿದ ಪದಗಳನ್ನೆಲ್ಲ ಕಾಗುಣಿತ ಹೇಳಿಕೊಳ್ಳುತ್ತ, ಅಲ್ಲೇ ಇದ್ದ ದೀಪದ ಕಂಬದ ಬಳಿ ನಿಂತ. ಆದರೆ ಅಲ್ಲಿಯವರೆಗೂ ತನಗೆ ಬೇಕಾದ ಪದವನ್ನು ಮಾತ್ರ ಯಾರೂ ಹೇಳಿಕೊಂಡು ಬಂದಿರಲಿಲ್ಲ. ಜೇಬಿನಿಂದ ಪಿಚಕಾರಿ ಕಾಯಿಗಳನ್ನು ತೆಗೆದುಕೊಂಡು ತುದಿ ಚಿವುಟಕೊಂಡು ಅಲ್ಲಿ ಇಲ್ಲಿ ಚಿರ್ರ ಚಿರ್ರನೆ ನೀರು ಹಾರಿಸುತ್ತ ನಿಂತಿದ್ದ.

ಆಗ ಅಲ್ಲಿಗೆ "ಪೇಪರ್–ಪತ್ರಿಕೆ–ಬುಕ್ಕು–ಪುಸ್ತಕ–ಕ್ಯಾಲೆಂಡರ್—ಪಂಚಾಂಗ" ಎಂತ ಕೂಗಿಕೊಂಡು ಒಬ್ಬಾತ ಬಂದ. "ರೀ! ನಿಲ್ರೀ" ಎಂತ ಅವನನ್ನೇ ನಿಲ್ಲಿಸಿಕೊಂಡು ಎಲ್ಲಾ ಪತ್ರಿಕೆ ಪುಸ್ತಕಗಳನ್ನೂ ನೋಡಿದ. ಇವನು ಯಾವುದನ್ನಾದರೂ ಕೊಂಡುಕೊಂಡಾನೆಂದು ಅವನೂ ಹೇಳುತ್ತ ಬಂದ, ಒಂದೊಂದಾಗಿ

ಹೆಸರುಗಳನ್ನು—“ ಜನ್‌ವಾನೀ, ಕೇಲಾಂದರ್, ಕೊರ್‌ವಂಜೀ, ಪರ್‌ಜಾಪುತ, ಪವರ್‌ವಾನೀ.’’ಆಗ ನಾಗರಾಜ ಎಂದ—“ ಇವೆಲ್ಲ ಬೇಡ ನಮ್ಮ ಮೇಸ್ಟರಿಗೆ; ಅವರಿಗೆ ಕಾಗುಣಿತ ತುಂಬ ಇರೋ ಅಂಥ ಪುಸ್ತಕ ಬೇಕಪ್ಪ. ಆ ದಪ್ಪ ಪುಸ್ತಕ ತೆಗಿ, ಅದರಲ್ಲಿ ಬರ್ ಮಾಂಡ ಇದೆಯೆ, ನೋಡು. ಅದಿದ್ದರೆ ಸಾವಿರ ರೂಪಾಯಿ ಗಳಾದರೂ ಕೊಟ್ಟು ಕೊಂಡುಕೋತಾರೆ, ತುಂಬಾ ದುಡ್ಡಿದೆ ಅವರ ಹತ್ತಿರ! ಹೂ....

ಪೇಪರ್ ಮಾಡುವ ಹುಡುಗನಿಗೆ ಸದ್ಯ ಒಂದು ಪೇಪರ್ ಖರ್ಚಾಗಿದ್ದರೆ ಸಾಕಾಗಿತ್ತು. ಆಗ ಅವನು ದೊಡ್ಡದೊಡ್ಡ ಅಕ್ಷರ ದಲ್ಲಿ ಒಂದು ಪೇಪರಲ್ಲಿ ಬರೆದಿದ್ದನ್ನು ತೋರಿಸಿದ:-

“ ಬರ್ಮಾ ಅಂಡಮಾ ಭೂಕಂಪ ”–ಎಂತ ಬರೆದಿತ್ತು ಅಲ್ಲಿ. ಮತ್ತು ಇನ್ನೊಂದು ಕಡೆ ಹೀಗಿತ್ತು—“ ಬ್ರಹ್ಮದೇಶದಲ್ಲೂ ಮತ್ತು ಅಂಡಮಾ ದ್ವೀಪದಲ್ಲೂ ಭಾರಿ ಭೂಕಂಪ’’—ವೆಂಬು ದನ್ನು ಆ ಹುಡುಗನಿಂದ ಓದಿಸಿ ಕೇಳಿಕೊಂಡ. ಮೇಸ್ಟರು ಹೇಳಿದ ಪದಕ್ಕೆ ಬೇಕಾದ ಅಕ್ಷರಗಳು ಅಲ್ಲೇ ಇದ್ದವು. ಆ ಪೇಪರ್ ಹುಡು ಗನನ್ನು ಬೇಡಿಕೊಂಡ, ಆ ಹುಡುಗ ಬ್ರಹ್ಮ ಮತ್ತು ಅಂಡಮಾ ಎಂಬೆರಡು ಪದಗಳನ್ನು ಮಾತ್ರ ಬರೆದುಕೊಟ್ಟ. ಅವನ್ನೇ ನಿಧಾನ ವಾಗಿ ಓದಿಕೊಂಡು ಅವನು ಬ್ರಹ್ಮಾಂಡದ ಕಾಗುಣಿತವನ್ನು ಕಲಿತುಕೊಂಡ.

ಹಾಗೇ ಅದನ್ನು ತನ್ನ ಪುಸ್ತಕದಲ್ಲಿ ಬರೆದುಕೊಂಡು ತನ್ನ ಮೇಸ್ಟರ ಬಳಿಗೆ ಹೋದ. ಅವನ ಸಂಗಡ ಪೇಪರ್ ಹುಡುಗನೂ ಹೋದ ಆ ಸ್ಕೂಲಿಗೆ! ಅಲ್ಲಿ ಒಂದು ಪೇಪರಲ್ಲಿ ‘ ಬ್ರಹ್ಮಾಂಡ’ ಎಂದು ಇತ್ತು. ಆದ್ದರಿಂದ ಆಗ ನಾಗರಾಜನಿಗೆ ತುಂಬಾ ಧೈರ್ಯ ಬಂದಿತ್ತು. ನೇರ ಒಳಗೆ ಹೋದ. ಕ್ಲಾಸಿನಲ್ಲಿ ಕಲಿಯುವುದಕ್ಕೆ ಸಾಧ್ಯವಾಗದಿದ್ದ ಪದಕ್ಕೆ ಕಾಗುಣಿತವನ್ನು ಬೀದಿಯಲ್ಲಿ ಕಲಿತು

ಕೊಂಡು ಬಂದಿದ್ದ. ಅದೇ ಧೈರ್ಯ ಅವನಿಗೆ—ನಾಗರಾಜನಿಗೆ. ಅವನನ್ನು ನೋಡಿ ಹುಡುಗರೆಲ್ಲ ಕಿರಿಚಿಕೊಂಡರು–"ಕೊರ್ವಂಜೀ ನಾಗ್ರಾಜಾ, ಕೊರ್ವಂಜೀ ನಾಗ್ರಾಜಾ, ಕೊರ್ವಂಜೀ ನಾಗ ರಾಜಾ ! ತಂದೆಯೇಸೋ ಬ್ರಹ್ಮಾಂಡಾ ! ನಿನ್ನ ಬ್ರಹ್ಮಾಂಡಾ ! ನಿನ್ನ ಬ್ರಹ್ಮಾಂಡಾ !" ಆ ಹುಡುಗರನ್ನೆಲ್ಲ ಅತ್ತ ಇತ್ತ ತಳ್ಳಿ, ದಾರಿಮಾಡಿಕೊಂಡು ಮೇಸ್ಟರ ಬಳಿಗೆ ಹೋದ.

"ಸಾರ್ ! ಸಾರ್, ಸಾರ್ ! ಈ ಪೇಪರು ಕೊಂಡುಕೊಳ್ಳಿ ಸಾರ್ ! ಇಲ್ಲಿದೆ ಇಲ್ಲಿ ನೀವು ಹೇಳಿದ ಕಾಗುಣಿತದ ಪದ "ಎಂದು ಹೇಳುತ್ತ ಬರ್ಮಾ ಭೂಕಂಪದ ಪೇಪರನ್ನು ನಾಗರಾಜ ತೋರಿಸಿದ.

ಮೇಸ್ಟ್ರು ಆ ಪೇಪರನ್ನು ತೆಗೆದುಕೊಂಡರು. ಆ ಪೇಪರ ಹುಡುಗ ಸಲಾಮು ಮಾಡಿ ಹೊರಟುಹೋದ. ನಾಗರಾಜ ತಾನು ಪುಸ್ತಕದಲ್ಲಿ ಬರೆದುಕೊಂಡಿದ್ದ ಬ್ರಹ್ಮಾಂಡವನ್ನು ಕೂಡಿಸಿ ಬರೆದು ತೋರಿಸಿದ.

"ಕಾಗುಣಿತ ಹೇಳಲಿ ಸರ್ ! ಚೆನ್ನಾಗಿ ಬರುತ್ತೆ ಸರ್" ಎಂದು ಸಿದ್ಧವಾಗಿ ನಿಂತುಕೊಂಡು ಗಂಟಲು ಸರಿಮಾಡಿಕೊಂಡ.

ಆಗ ಮೇಸ್ಟರು ಹೇಳಿದರು–"ಬ್ರಂಹಾಂಡವೆಂತ ಹಾಗೆ ಬರೆಯುವುದಕ್ಕಿಂತ ಬ್ರಹ್ಮಾಂಡ ಎಂದು ಬರೆಯುವುದೇ ಒಳ್ಳೆಯದು. ನೀನು ಇನ್ನುಮೇಲೆ ನಾನು ಹೇಳಿದ ಹಾಗೆಬರಿಯಪ್ಪ ಜಾಣಮರಿ" ಎಂದರು.

ಅಂತು ನಾಗರಾಜ ಕ್ಲಾಸಿನಲ್ಲಿ ಕಷ್ಟವಾದ್ದನ್ನು ಬೀದಿಯಲ್ಲಿ ಕಲಿತುಕೊಂಡು ಬಿಟ್ಟ. ಆ ದಿನ ಮೇಸ್ಟರು ಮೆಚ್ಚಿದರು. ನಾಗ ರಾಜ ಹಿಗ್ಗಿದನು ಸಂತೋಷದಿಂದ. ಬ್ರಹ್ಮಾಂಡದಷ್ಟು ಸಂತೋಷದ ಹಿಗ್ಗು ಅವನಿಗೆ. ಆಗ ಹುಡುಗರೆಲ್ಲ ಕೂಗಿಕೊಂಡರು— "ಕ್ಲಾಸಲ್ಲಿ ಕಲೀದೇದ್ದು ಬೀದೀಲಿ ಕಲಿತಕಣೊ ನಾಗರಾಜ. ಅವನಿಗೆ ಬೀದೀಲೆ ಮೇಷ್ಟ್ರು !"

ಮಕ್ಕಳ ಮಾಲೆ

೧. ಬೊಮ್ಮನಹಳ್ಳಿಯ ಕಿಂದರಿಜೋಗಿ—ಕುವೆಂಪು. ಮನ ಸೆಳೆಯುವ ೧೩ ಚಿತ್ರಗಳಿಂದ ಕೂಡಿದೆ. ಬೆಲೆ : ೮ ಆಣೆ.

........" ಬೊಮ್ಮನಹಳ್ಳಿಯ ಕಿಂದರಿಜೋಗಿ " ಗೆ ಮರುಳಾಗದ ಮಕ್ಕಳೇ ಇಲ್ಲ. —ಶ್ರೀ.

೨. ಹೂವಾಡಿಗಿತ್ತಿ—ರಾಘವ. ೩ ಚಿತ್ರಗಳಿಂದ ಕೂಡಿದೆ. ಬೆಲೆ : ೪ ಆಣೆ.

....ಪದ್ಯದ ಒಂದೊಂದು ಸಾಲೂ ಹಾಲಿನಲ್ಲಿ ನೆನಸಿದ ಹೋಳಿಗೆಯಂತೆ ಆಕರ್ಷಕವಾಗಿದೆ. —ಪುಸ್ತಕ ಪ್ರಪಂಚ.

.... This diminutive volume, whose prettiness should surely attract young folk. —*The Indian Express*

೩. ನನ್ನ ಮನೆ—ಕುವೆಂಪು. ಬೆಲೆ : ೬ ಆಣೆ

ಕಲ್ಲುಸಕ್ಕರೆಯಂತಿರುವ ಈ ಕವನಗಳು ಮಕ್ಕಳಿಗೆ ರುಚಿಸುವುದರಲ್ಲಿ ಸಂದೇಹವಿಲ್ಲ. —ದೇಶಬಂಧು.

೪. ಚಟಾಕಿ—ಎಲ್. ಗುಂಡಪ್ಪ, ಎಂ.ಎ. ಆರು ಚಿತ್ರಗಳಿಂದ ಕೂಡಿದೆ. ಬೆಲೆ : ೮ ಆಣೆ.

ಮಕ್ಕಳಿಗೆ ರುಚಿಸುವ ಚಿಕ್ಕ ಚಿಕ್ಕ ಕವನಗಳ ಸಂಗ್ರಹವಿದು. —ಕರ್ಮವೀರ

೫. ಚಂದ್ರನನ್ನು ತಂದರು—ಗ್ರಿಮ್ ಸೋದರರು. ಮೂರು ಚಿತ್ರಗಳಿಂದ ಕೂಡಿದೆ. ಬೆಲೆ : ೮ ಆಣೆ.

.... a booklet, which contains such nice stories and is so attractively printed. *Prof. M. Hiriyanna.*

ಎಲ್ಲ ಕತೆಗಳೂ ಮಕ್ಕಳ ಉತ್ಸಾಹವನ್ನು ಕೆರಳಿಸಿ ಅವರಿಗೆ ರುಚಿಸುವಂಥ ರೀತಿಯಲ್ಲಿ ರಚಿತವಾಗಿವೆ. —ದೇಶಬಂಧು.

ಕಥೆಗಳೆಲ್ಲವೂ ಮಕ್ಕಳ ಮನಸ್ಸನ್ನು ಸೂರೆಗೊಳ್ಳುವುದರಲ್ಲಿ ಸಂದೇಹವಿಲ್ಲ!

........ಭಾಷಾಶೈಲಿ ಶುದ್ಧವಾಗಿದೆ, ಸರಳವಾಗಿದೆ.

—ಪುಸ್ತಕ ಪ್ರಪಂಚ

---

೬. ಮರಿವಿಜ್ಞಾನಿ—ಕುವೆಂಪು. ಬೆಲೆ : ೬ ಆಣೆ

ಮರಿವಿಜ್ಞಾನಿಯ ಮನಸ್ಸು ಇಲ್ಲಿ ಮುಗಿಲು ಮುಟ್ಟಿದೆ. ಮಕ್ಕಳಿಗೆ ಈ ಕವನ ಸಂಗ್ರಹ ಮೆಚ್ಚಾಗುವುದರಲ್ಲಿ ಸಂದೇಹವಿಲ್ಲ.

—ಪುಸ್ತಕ ಪ್ರಪಂಚ.

೭. ಆರು ಹಂಸಗಳು—ಗ್ರಿಮ್ ಸೋದರರು. ಮೂರು ಚಿತ್ರಗಳಿಂದ ಕೂಡಿದೆ. ಬೆಲೆ : ಎಂಟಾಣೆ.

೮. ಮೇಘಪುರ—ಕುವೆಂಪು. ಮೂರು ಚಿತ್ರಗಳಿಂದ ಕೂಡಿದೆ. ಬೆಲೆ : ೬ ಆಣೆ.

೯. ಪೋರಿ (ಕಥೆಗಳು)—ಹೊಯಿಸಳ. ಮೂರು ಚಿತ್ರಗಳಿಂದ ಕೂಡಿದೆ. ಬೆಲೆ : ೮ ಆಣೆ.

೧೦-೧೨. ಪುಟ್ಟರಸು (ಕಥೆಗಳು)—ಹೊಯಿಸಳ. ಐದು ಚಿತ್ರಗಳಿಂದ ಕೂಡಿದೆ. ಬೆಲೆ : ೧ ರೂಪಾಯಿ.

೧೩. ನನ್ನ ಗೋಪಾಲ (ನಾಟಕ)—ಕುವೆಂಪು ಬೆಲೆ : ಎಂಟಾಣೆ.

೧೪. ಹೂವಿನ ಹಾಸಿಗೆ (ಕಥೆಗಳು)—ಹೊಯಿಸಳ. ಬೆಲೆ : ೧ ರೂ. ೪ ಆ.

ಶ್ರೀ ಹೊಯಿಸಳರು... ಮಗುವಿನೊಡನೆ ಮಗುವಾಗಿ, ಹುಡುಗರೊಡನೆ ಹುಡುಗರಾಗಿ ಹಾಡಬಲ್ಲವರು, ಕುಣಿಯಬಲ್ಲವರು.... ಈ ಕಥೆಗಳಲ್ಲಿ ನಿಜವಾಗಿಯೂ ‘ಒಂದು ಹೊಸಮಾದರಿಯ ಪಾಕ ಇಳಿದಿದೆ’ ಭಾಷೆಯಲ್ಲಿ ಶೈಲಿಯಲ್ಲಿ ಹೇಳುವ ರೀತಿಯಲ್ಲಿ.... ಈ ಪುಸ್ತಕ ಮಕ್ಕಳಿಗೆ ಮಿಠಾಯಿ. —ಪ್ರಬುದ್ಧಕರ್ಣಾಟಕ.

....ಶ್ರೀ ಹೊಯಿಸಳರಿಗೆ ಮಕ್ಕಳ ಲೋಕದಲ್ಲಿ ಸಹಜ ಪ್ರವೇಶವಿದೆ.

—ರಂ. ಶ್ರೀ. ಮುಗಳಿ.

೧೫. ಹವಳದ ದ್ವೀಪ (ಕಥೆ)—ಅನು : ಎ. ಎನ್. ಮೂರ್ತಿರಾವ್.

ಬೆಲೆ. ರೂ. ೧—೮—೦

ಈ ಮಾದರಿಯ ಪುಸ್ತಕವು ನಮ್ಮ ಕನ್ನಡ ವಿದ್ಯಾರ್ಥಿಗಳಿಗೆ ತೀರ ಹೊಸದೆಂದು ಹೇಳಬಹುದು.... ಭಾಷೆ ಸುಲಭವಾಗಿದೆ. ಶೈಲಿ ಸರಳವಾಗಿದೆ. ಲೇಖಕರದು ಪಳಗಿದ ಕೈ. —ಕರ್ಮವೀರ.

ಈ ಕಥೆಯನ್ನು ಅಂದ ಕೆಡದಂತೆ ಸಂಗ್ರಹಿಸಿದ್ದಾರೆ. ....ಕನ್ನಡದಲ್ಲಿ ಇಂತಹ ಉತ್ತಮ ಅನುವಾದಗಳು ಇನ್ನಷ್ಟು ಬರಲೆಂದು ಹಾರೈಸುತ್ತೇವೆ.

—ಯುಗಪುರುಷ.

ಕಾವ್ಯಾಲಯ * ಪ್ರಕಾಶಕರು * ಮೈಸೂರು

೧೬. ಪರಾಕ್ಷಿ (ಕಥೆಗಳು)—ಹೊಯಿಸಳ.

ಬೆಲೆ. ರೂ. ೧-೮-೦

೧೭. ಚಂದುಮಾಮ (ಪದ್ಯಗಳು)—ಹೊಯಿಸಳ. ಅಚ್ಚಿನಲ್ಲಿ

೧೮. ಸುಮತಿ ಮದನಕುಮಾರರ ಚರಿತ್ರೆ (ಕಥೆ)—ಎಂ. ಎಸ್. ಪುಟ್ಟಣ್ಣ.

ಭಾಗ ೧. ಬೆಲೆ: ರೂ. ೨-೮-೦

೧೯. ಸುಮತಿ ಮದನಕುಮಾರರ ಚರಿತ್ರೆ (ಕಥೆ)—ಎಂ. ಎಸ್. ಪುಟ್ಟಣ್ಣ.

ಭಾಗ ೨. ಬೆಲೆ. ರೂ. ೧-೦-೦

೨೦. ನೀತಿ ಚಿಂತಾಮಣಿ (ಪುರಾಣ ಇತಿಹಾಸಗಳಿಂದ ಆಯ್ದ ನೀತಿ ಕಥೆಗಳು)—ಎಂ.ಎಸ್. ಪುಟ್ಟಣ್ಣ. ಭಾಗ ೧. ಅಚ್ಚಿನಲ್ಲಿ

೨೧. ನೀತಿ ಚಿಂತಾಮಣಿ—ಎಂ.ಎಸ್. ಪುಟ್ಟಣ್ಣ. ಭಾಗ ೨. ಅಚ್ಚಿನಲ್ಲಿ

೨೨. ನೀತಿ ಚಿಂತಾಮಣಿ—ಎಂ.ಎಸ್. ಪುಟ್ಟಣ್ಣ. ಭಾಗ ೩. ಅಚ್ಚಿನಲ್ಲಿ

೨೩. ಭೂಗರ್ಭಯಾತ್ರೆ (ಕಥೆ)—ಅನು: ಎಂ. ಗೋಪಾಲಕೃಷ್ಣ ಅಡಿಗ.

ಅಚ್ಚಿನಲ್ಲಿ

೨೪. ಮನೆಯು ಸಮಾನವಿಲ್ಲ (ಕಥೆಗಳು)—ಗ್ರಿಮ್ ಸೋದರರು. ಅಚ್ಚಿನಲ್ಲಿ

೨೫. ಹಾಳೂರು—(ಕವನ) ಕುವೆಂಪು. ಬೆಲೆ: ೬ ಆಣೆ.

ಇತ್ತೀಚಿನ ಪ್ರಕಟನೆಗಳು

ಶ್ರೀ—			
ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ : ಭಾಗ ೧-೨	೪	೧೨	೦
ಕುವೆಂಪು—			
ಶ್ರೀ ರಾಮಾಯಣ ದರ್ಶನಂ—೧	೧೨	೦	೦
ಹಾಳೂರು	೦	೬	೦
ನನ್ನ ಗೋಪಾಲ . .	೦	೮	೦
ಯಮನ ಸೋಲು ಮತ್ತು ವಾಲ್ಮೀಕಿಯ ಭಾಗ್ಯ	೧	೦	೦
ಶೂದ್ರತಪಸ್ವಿ ; ಬಲಿದಾನ (೩ನೆಯ ಮುದ್ರಣ)	೧	೪	೦
ಪು. ತಿ. ನರಸಿಂಹಾಚಾರ್—			
ಈಚಲು ಮರದ ಕೆಳಗೆ (ಪ್ರಬಂಧಗಳು)	೧	೧೨	೦
ಅಹಲ್ಯೆ (ಗೀತರೂಪಕ)	೨	೪	೦
ವಿಕಟಕವಿ ವಿಜಯ (ರಾಜಕೀಯ ಪ್ರಹಸನ)	೨	೪	೦
ಎಂ. ಗೋಪಾಲಕೃಷ್ಣ ಅಡಿಗ—			
ಕಟ್ಟುವೆವು ನಾವು (ಕವನಗಳು)	೧	೪	೦
ತೀ. ನಂ. ಶ್ರೀಕಂಠಯ್ಯ—			
ಗದಾಯುದ್ಧ ಸಂಗ್ರಹಂ—೧ (ಸಂಪಾದಿತ)	೩	೦	೦
ಹೆಚ್. ವಿ. ಸಾವಿತ್ರಮ್ಮ—			
ನಿರಾಶ್ರಿತೆ (ಕಥೆಗಳು)	೧	೧೨	೦
ಜವಹರಲಾಲ್ ನೆಹರು—			
ಭಾರತದರ್ಶನ—೧	೫	೦	೦
ಎಂ. ಎಸ್. ಪುಟ್ಟಣ್ಣ—			
ಮಾಡಿದ್ದುಣ್ಣೋ ಮಹಾರಾಯ (ಕಾದಂಬರಿ)	೩	೦	೦
ಸುಮತಿ ಮದನಕುಮಾರರ ಚರಿತ್ರೆ—೧	೨	೪	೦
ಸುಮತಿ ಮದನಕುಮಾರರ ಚರಿತ್ರೆ—೨	೧	೦	೦

ಕಾವ್ಯಾಲಯ * ಪ್ರಕಾಶಕರು * ಮೈಸೂರು